ಬುದ್ಧರ ಬೋಧನೆಯು ವಿಶಿಷ್ಟ ಪೂರ್ಣವು, ಅನುಪಮವು, ಜ್ಞಾನಸಾರವು, ಶಾಂತಿದಾಯಕವು ಆಗಿದೆ. ಅದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿ ಒಂದು ವಾಕ್ಯದಿಂದ ಹಿಡಿದು ಗಂಟೆಯವರೆಗೆ ಬೋಧನೆಗಳಿವೆ. ಆದರೆ ಪ್ರಜ್ಞಾವಂತನಿಗೆ ಅಜ್ಞಾನದ ಕತ್ತಲೆಯಿಂದ ಬೋಧಿ ಜ್ಞಾನದ ಹೊಂಬೆಳಕಿಗೆ ಬರಲು ಒಂದು ವಾಕ್ಯ ಸಾಕು. ಇಲ್ಲಿ ಅಂತಹ ವಾಕ್ಯಗಳ ಸುಭಾಷಿತ ರತ್ನಗಳಿವೆ. ಇವು ವ್ಯಕ್ತಿಯ ದೌರ್ಬಲ್ಯಗಳನ್ನು ಕಿತ್ತೆಸೆಯುತ್ತವೆ. ಚಿಂತೆಯುಳ್ಳವನಿಗೆ ಶಾಂತಿ ನೀಡುತ್ತವೆ. ಬಂಧನವುಳ್ಳವನಿಗೆ ಬಿಡುಗಡೆ ಮಾಡಿಸುತ್ತವೆ. ಇಲ್ಲಿ ತಪ್ಪು ಮಾಡುತ್ತಿರುವವರಿಗೆ ಅದರಿಂದ ಹೊರಬರಲು ಹಾದಿಯಿದೆ. ಶೀಲವಂತರ ವೃದ್ಧಿಗೆ ವಿಧಾನಗಳಿವೆ. ಸೇವಾ ಮನೋಭಾವವುಳ್ಳವರಿಗೆ ಅವರ ಹೃದ್ ವಿಕಾಸಕ್ಕೆ ಮಧುವಿದೆ. ಪ್ರಜ್ಞಾವಂತರಿಗೆ ಸಂಬೋಧಿ ಸೂರ್ಯದ ಪ್ರಕಾಶವಿದೆ. ಸಮಾಧಿ ಅಭಿಲಾಷಿಗಳಿಗೆ ಸುಉನ್ನತ ಪಥಗಳಿವೆ. ಸಂದೇಹ ದೂರ ಮಾಡುವ, ಸ್ಫೂರ್ತಿ ಉಕ್ಕಿಸುವ, ಸುಮಾರ್ಗದಲ್ಲಿ ದೃಢ ಸಾಧನೆ ಮಾಡಲು ಪ್ರೇರಕವಾಗಿರುವ, ಪರಿಶುದ್ಧತೆ ಉಂಟುಮಾಡುವ ವಿಮುಕ್ತಿ ಉಂಟುಮಾಡುವ, ಅಮರತ್ವದ ಹಾದಿ ತೋರಿಸುವ ಹಾಗು ಪರಿಪೂರ್ಣರಾಗಲು ಬೇಕಾದ ಸರ್ವ ಅಮೂಲ್ಯ ರತ್ನಗಳನ್ನು ನೀವು ಬುದ್ಧರ ಬೋಧನೆಯಲ್ಲಿ ಪಡೆಯಬಲ್ಲಿರಿ.


**MAHA BODHI SOCIETY**

**BUDDHA VACHANA TRUST**

MAHA BODHI SOCIETY, GANDHINAGAR, BANGALORE - 9




# 'ಏಳಿಗೆ'

"ಎಲ್ಲೆಲ್ಲಿ ಬುದ್ಧರ ಬೋಧನೆಯು ಏಳಿಗೆಯಲ್ಲಿರುತ್ತದೆಯೋ ಅಲ್ಲೆಲ್ಲಾ ಶಾಂತಿ ಸುಭಿಕ್ಷತೆ ಮತ್ತು ಆನಂದ ನೆಲೆಸಿರುತ್ತದೆ. ಅಲ್ಲಿ ಸೂರ್ಯ ಚಂದ್ರರೂ ಸ್ಪಷ್ಟವಾಗಿ ಪ್ರಕಾಶಿಸುತ್ತಾರೆ. ಮಳೆಗಾಳಿಗಳು ವ್ಯವಸ್ಥಿತವಾಗಿ ಕಾಣುವುವು. ಅಲ್ಲಿ ಪ್ರಾಕೃತಿಕ ವಿಕೋಪವಿರುವುದಿಲ್ಲ, ಹಾಗು ಅಲ್ಲಿ ಸ್ಫೋಟರೋಗಾಗಲಿ ಅಥವಾ ಅಸ್ತ್ರಗಳಾಗಲಿ ಕಲಹವಿರುವುದಿಲ್ಲ".

"ಅಲ್ಲಿಯ ಜನರು ಶೀಲವಂತರಾಗಿ ಧಾರ್ಮಿಕರಾಗಿರುತ್ತಾರೆ. ಅವರು ಸಹೃದಯರು ಹಾಗು ವಿನಮ್ರರಾಗಿರುತ್ತಾರೆ. ಪ್ರತಿಯೊಬ್ಬರು ಅಧರ್ಮವಂತರಾಗಿರದೆ ಸಂತೃಪ್ತಿಯಲ್ಲಿ ಇರುವರು. ಅಲ್ಲಿ ಕಳ್ಳತನವಾಗಲಿ ಅಥವಾ ಹಿಂಸೆಯಾಗಲಿ ಇರದು. ಶಕ್ತಿವಂತನು ದುರ್ಬಲರಿಗೆ ದಮನ ಮಾಡುವುದಿಲ್ಲ ಮತ್ತು ಪ್ರತಿಯೊಬ್ಬರಿಗೆ ಸಮಪಾಲು ದೊರೆಯುತ್ತದೆ".

## ಅನಿಶ್ ಬೋಧ್‌ರವರ ಇತರ ಕೃತಿ

1. ಬೌದ್ಧರ ಅದ್ವಿತೀಯ ಧ್ಯಾನಗಳ ಮಾರ್ಗ ಭಾಗ-1

**ಅನಿಶ್ ಬೋಧ್‌ರವರಿಂದ ಅನುವಾದವಾಗಿರುವಂತಹ ಕಿರು ಕೃತಿಗಳು**

1. ಸಾಧನಾತ್ಮಕ ಬೌದ್ಧ ಧಮ್ಮ
2. ನಿಮ್ಮ ನೋವುಗಳನ್ನು ದಾಟುವುದು ಹೇಗೆ?
3. ಪೋಷಕರು ಮತ್ತು ಮಕ್ಕಳು
4. ಬೌದ್ಧ ಧರ್ಮ ಇಂದು ಪ್ರಸ್ತುತವೆ ?
5. ನಿಮ್ಮ ಸಮಸ್ಯೆಗೆ ಹೊಣೆ ಯಾರು ?
6. ಬುದ್ಧ ಮತ್ತು ಧಮ್ಮದ ಪವಿತ್ರ ಗುಣಗಳು.
7. ಬುದ್ಧರ ಬೋಧನೆಯಲ್ಲಿ ಪರಿಪೂರ್ಣ ಪ್ರೀತಿ (ಮೆತ್ತಾ)
8. ವೈಜ್ಞಾನಿಕ ಯುಗದಲ್ಲಿ ಧರ್ಮ ಮತ್ತು ಧರ್ಮವು ಶಾಂತಿಯನ್ನು ನೀಡೀತೆ?

## ಗ್ರಂಥ ಆಕರಗಳು


1. The saying of Shakyamuni Buddha - Chain, Baudath
2. Treasure of Dhamma - Dr. K. Sri Dhammananda
3. Dialogues of the Buddha - TW & CAF, Rhys Davids
4. Saying of the Buddha - Dr. K. Sri Dhammananda
5. Life's Great Blessings - Ven. Acharya Buddharakhita Bhantheji.
6. ಧಮ್ಮಪದ - B.V. Rajaram
7. ಸುತ್ತನಿಪಾತ
8. ದೀಘನಿಕಾಯ
9. ಮಜ್ಝಿಮನಿಕಾಯ
10. ಅಂಗುತ್ತರ ನಿಕಾಯ
11. Heart of Buddha
12. Buddha's Quotes in internet
13. ಬುದ್ಧ ಧಮ್ಮ ದರ್ಶನ - Y.B. Nandana, etc.,

ನಮೋ ತಸ್ಸ ಭಗವತೋ ಅರಹತೋ ಸಮ್ಮಾಸಂಬುದ್ಧಸ್ಸ

**ಮಹಾಬೋಧಿ ಸುವರ್ಣ ಪುಸ್ತಕ ಮಾಲಿಕೆ–18**

# ಬುದ್ಧ ಭಗವಾನರ ಸುಭಾಷಿತ ರತ್ನಗಳು

ಲೇಖಕರು

**ಅನೀಶ್ ಬೋಧ್**

"ಸುಭಾಷಿತ ಜ್ಞಾನದ ಸಾರವಾಗಿದೆ, ಅದು ಸಮಾಧಿ ವಿದ್ಯೆ ಮತ್ತು ಜ್ಞಾನದ ಸಾರವಾಗಿದೆ, ಯಾವ ಮನುಷ್ಯ ಲೋಭ ಮತ್ತು ಪ್ರಮಾದವುಳ್ಳವನೋ ಆತನ ಪ್ರಜ್ಞೆ ಹಾಗು ಶ್ರುತ ಬೆಳವಣಿಗೆ ಆಗಿರುವುದಿಲ್ಲ"

– ಬುದ್ಧ ಭಗವಾನರು

**ಬುದ್ಧ ವಚನ ಟ್ರಸ್ಟ್**
**ಮಹಾ ಬೋಧಿ ಸೊಸೈಟಿ**
**ಗಾಂಧಿನಗರ, ಬೆಂಗಳೂರು–560 009**



**ಉಚಿತ ಹಂಚಿಕೆ – ಧಮ್ಮದಾನಕ್ಕಾಗಿ ಮಾತ್ರ**
For Free distribution only

ಪ್ರಕಾಶನ :
**ಬುದ್ಧ ವಚನ ಟ್ರಸ್ಟ್**
14, ಕಾಳಿದಾಸ ಮಾರ್ಗ
ಗಾಂಧಿನಗರ, ಬೆಂಗಳೂರು–560 009
ದೂರವಾಣಿ : 080–22250684
ಫ್ಯಾಕ್ಸ್ : 080–22264438
E-mail : books@mahabodhi.info

© ಬುದ್ಧವಚನ ಟ್ರಸ್ಟ್

@ **ಅನೀಶ್ ಬೋಧ್**
E-mail : aneeshbodh@gmail.com
Mobile : 8050333925

ಮುಖಪುಟ ವಿನ್ಯಾಸ : **ಇ. ಲ್ಯಾಜ್**

ಮುದ್ರಕರು :
**ಶ್ರೀ ಅರವಿಂದ್ ಪ್ರಿಂಟರ್ಸ್**
ಸರಸ್ವತಿಪುರಂ, ಬೆಂಗಳೂರು–560 096
ದೂ : 080–23498198, ಮೊ : 9916461691

## ಕೃತಜ್ಞತೆಗಳು

ನನ್ನಲ್ಲಿ ಬೋಧಿ ಜ್ಞಾನವನ್ನು ಪಡೆಯಲು ಸ್ಫೂರ್ತಿಯನ್ನು ಉಂಟು ಮಾಡಿದ ಸರ್ವ ಪೂಜ್ಯರಿಗೆ ಮತ್ತು ಲೇಖಕರಿಗೂ, ನಮಗೆ ಶ್ರೇಷ್ಠ ಗ್ರಂಥಗಳನ್ನು ತಲುಪಿಸುತ್ತಿರುವ ಮಹಾಬೋಧಿ ಸೊಸೈಟಿಯ ಸರ್ವರಿಗೂ, ಭಾರತದಲ್ಲಿ ಪುನರ್ ಧಮ್ಮಚಾಲನೆ ಮಾಡಿದ ಅನಗಾರಿಕ ಧಮ್ಮಪಾಲರಿಗೂ, ಕರ್ನಾಟಕದಲ್ಲಿ ಧಮ್ಮಚಾಲನೆ ಮಾಡಿ, ಮಹತ್ಕಾರ್ಯಗಳನ್ನು ವೃದ್ಧಿಸುತ್ತಿರುವ ಪರಮಪೂಜ್ಯ ಆಚಾರ್ಯ ಬುದ್ಧರಕ್ಖಿತ ಥೇರರವರಿಗೂ, ನನಗೆ ಲೇಖಕನಾಗಲು ಸ್ಫೂರ್ತಿ ಹಾಗು ಅವಕಾಶ ನೀಡುತ್ತಿರುವ ಪೂಜ್ಯ ಆನಂದ ಭಂತೆಯವರಿಗೂ, ನನಗೆ ಸದಾ ಪ್ರೇರಕರಾಗಿರುವ ಬಿ.ವಿ. ರಾಜಾರಾಂ ಮತ್ತು ನನ್ನ ಎಲ್ಲಾ ಮಿತ್ರರಿಗೂ, ಓದಿ ಪ್ರೋತ್ಸಾಹಿಸುವ ಸರ್ವ ಓದುಗರಿಗೂ, ಸುಂದರ ಮುಖಪುಟ ರಚಿಸಿದ ಸೋದರ ಇ–ಲ್ಯಾಜ್‌ಗೂ, ಸುಂದರವಾಗಿ ಮುದ್ರಿಸಿದ ಅರವಿಂದ್ ಪ್ರಿಂಟರ್ಸ್‌ನ ಗೌಡರಿಗೂ, ನನ್ನ ಕುರೂಪ ಅಕ್ಷರಗಳನ್ನು ಅರ್ಥೈಸಿಕೊಂಡು ಟೈಪ್ ಮಾಡಿದ ಮೋಹನ್‌ರಿಗೂ ಮತ್ತು ಇತರರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

**– ಅನೀಶ್ ಬೋಧ್**



## ಮುನ್ನುಡಿ

***"ಅನರ್ಥಕಾರಿ ಪದಗಳಿಂದ ಕೂಡಿದ ಸಾವಿರ ಗಾಥೆಗಳಿಗಿಂತ, ಕೇಳಿದಾಗ ಶಾಂತಿಯನ್ನುಂಟುಮಾಡುವ ಏಕ ವಾಕ್ಯದ ಫಲಕಾರಿ ಗಾಥೆಯು ಉತ್ತಮವಾದುದು"*** –ಧಮ್ಮಪದ 101 (ಬುದ್ಧರು)

ಈ ಗಾಥೆಯು ಇಡೀ ಬುದ್ಧಭಗವಾನರ ಬೋಧನೆಯ ವೈಶಿಷ್ಟ್ಯತೆಯನ್ನು ಸೂಚಿಸುತ್ತದೆ. ಪರರ ಬೋಧನೆಯಲ್ಲಿ ವ್ಯರ್ಥವಾದ, ಅನರ್ಥಕಾರಿ ಅಂಶಗಳನ್ನು, ಕೆಲವರ ಬೋಧನೆಯಲ್ಲಂತು ಮಾನವ ಉದ್ರೇಕಿತನಾಗಿ ಎಷ್ಟು ಯುದ್ಧಗಳನ್ನು ಮಾಡಿರುವುದು ನಾವು ಕಂಡಿದ್ದೇವೆ. ಆದರೆ ಬುದ್ಧರ ಬೋಧನೆಯಲ್ಲಿ ಸೇಡು, ಯುದ್ಧ, ದ್ವೇಷ, ಲೋಭ, ದುಶ್ಶೀಲತೆ, ಮೂಢನಂಬಿಕೆ, ಇತ್ಯಾದಿಗೆ ಸ್ಥಳವೇ ಇಲ್ಲ. ಅಂತಹ ಅಕುಶಲತೆಗೆ ಅವರು ಎಂದೂ ಅಣುಮಾತ್ರವೂ ಉದ್ರೇಕಿಸಲಿಲ್ಲ. ಅವರ ಬೋಧನೆಯು ಅಕುಶಲತೆಯಿಂದ ಮುಕ್ತವಾಗಿದೆ ಮತ್ತು ಮೌಲ್ಯಭರಿತವಾದ, ಅತ್ಯುತ್ಕೃಷ್ಟವಾದ ಶ್ರೇಷ್ಠ ಜ್ಞಾನ, ಪರಮಶಾಂತತೆ, ಮಾನವೀಯತೆಯ ಮೌಲ್ಯಗಳಾದ ದಯೆ, ಮೈತ್ರಿ ಇಂತಹುದರಿಂದಲೇ ಬೋಧನೆ ತುಂಬಿದೆ.

ಅವರ ಬೋಧನೆಯಲ್ಲಿ ಮಾನವ ಪರಿಶುದ್ಧನಾಲು, ಪರಿಪೂರ್ಣನಾಗಲು, ವಿಮುಕ್ತನಾಗಲು, ಪರಮೋನ್ನತಿಗೈಯಲು ಏನೆಲ್ಲಾ ಬೇಕಾಗಿದೆಯೋ ಅವೆಲ್ಲವನ್ನು ಒಳಗೊಂಡಿದೆ.

ಉನ್ನತಿ ಹೊಂದ ಬಯಸುವಂತಹ ಜ್ಞಾನಿಗೆ ಕೇವಲ ಸಂಕೇತವೇ ಸಾಕು. ಆತ ಅದರ ಸಾರ್ಥಕ ಪ್ರಯೋಜನ ಪಡೆಯುತ್ತಾನೆ. ಇಲ್ಲಂತು ನಾಲ್ಕೈದು ಸಾಲುಗಳ ಗಾಥೆಗಳಿವೆ. ಇವು ಸಮಾಧಾನಕಾರಿ, ಲಾಭಕಾರಿ, ಜ್ಞಾನೋದಯಕಾರಿಯಾಗಿದೆ. ಇಲ್ಲಿರುವಂತಹ ಎಷ್ಟೋ ಗಾಥೆಗಳು ವ್ಯಕ್ತಿಗಳ ಜೀವನದ ದಿಕ್ಕುಗಳನ್ನು ಬದಲಾಯಿಸಿವೆ. ಎಷ್ಟೋ ಜನರಿಗೆ ಶಾಂತಿ ಪ್ರಾಪ್ತಿ ನೀಡಿವೆ, ಎಷ್ಟೋ ಜನರಿಗೆ ಜ್ಞಾನೋದಯವುಂಟು ಮಾಡಿದೆ, ಎಷ್ಟೋ ಜನರಿಗೆ ಉನ್ನತಿ ಉಂಟುಮಾಡಿದೆ. ಎಷ್ಟು ಜನರಿಗೆ ತಮೋವಿನಿಂದ

ಹೊಂಬೆಳಕಿಗೆ ಪರಿವರ್ತನೆ ಉಂಟುಮಾಡಿದೆ. ಎಷ್ಟು ಜನರಿಗೆ ಬಂಧನ ವಿಮುಕ್ತತೆಯನ್ನು ತಂದಿದೆ. ಎಷ್ಟು ಜನರಿಗೆ ಅಮರತ್ವದ ಲಾಭ ನೀಡಿದೆ. ಇವು ಅಂತಹ ಶ್ರೇಷ್ಠ ಸುಭಾಷಿತ ರತ್ನಗಳಾಗಿವೆ.

* * *

ಒಮ್ಮೆ ಭಗವಾನರ ಬಳಿಗೆ ಒಬ್ಬ ಬಂದು ಈ ರೀತಿ ಪ್ರಶ್ನಿಸುತ್ತಾನೆ "ವಿಶಾಲವಾಗಿ ಅರಿತವನು ಅಥವಾ ಧಮ್ಮವನ್ನು ಆಳ ಹೃದಯದಿಂದ ಅರಿತವನು ಎನ್ನುತ್ತಾರೆ, ಭಗವಾನರೇ ದಯವಿಟ್ಟು ಅಂತಹ ಮಾನವನ ಲಕ್ಷಣಗಳನ್ನು ತಿಳಿಸಿ" ಎಂದು ಕೇಳಿಕೊಂಡಾಗ ಭಗವಾನರು ಹೀಗೆ ಪ್ರತಿ ನುಡಿಯುತ್ತಾರೆ, "ಭಿಕ್ಷು, ಉತ್ತಮವಾದುದನ್ನೇ ಕೇಳಿದ್ದಿಯೆ, ಒಳ್ಳೆಯದನ್ನೇ ಕೇಳಿದ್ದಿಯೆ. ನಿನ್ನ ಪ್ರಶ್ನೆಯ ಸಾಮಿಪ್ಯ ಸುಖಕರವಾಗಿದೆ. ಉನ್ನತಿದಾಯಕ ವಾಗಿದೆ. ಭಿಕ್ಷುಗಳೇ, ನಾನು ಧಮ್ಮವನ್ನು ನಾನಾರೀತಿಯಲ್ಲಿ ವಿವರವಾಗಿ ಪ್ರಕಟಪಡಿಸಿದ್ದೇನೆ. ಸುತ್ತ, ಗೆಯ್ಯ, ವೆಯ್ಯಾಕರಣ, ಗಾಥಾ, ಉದಾನ, ಇತಿವುತ್ತಕ, ಜಾತಕ, ಅಬ್ಭುತಧಮ್ಮ ಮತ್ತು ವೆದಲ್ಲ. ಈರೀತಿ ಇಷ್ಟು ರೀತಿಯಲ್ಲಿ ತಿಳಿಸಿದ್ದೇನೆ. ಈಗ ಭಿಕ್ಷುವೊಬ್ಬ ಈ ಧಮ್ಮದ ಅರ್ಥವನ್ನು ಅರ್ಥೈಸಿಕೊಂಡಾಗ ಅದು ಕೇವಲ ನಾಲ್ಕು ವಾಕ್ಯಗಳ ಗಾಥೆಯಾಗಿರಬಹುದು ಅದರಂತೆ ನಡೆದಾಗ, ಜೀವನದಲ್ಲಿ ಅದನ್ನು ಪಾಲಿಸಿದಾಗ ಅದರಂತೆ ಜೀವಿಸಿದಾಗ ಆತನು ಧಮ್ಮವನ್ನು ವಿಶಾಲವಾಗಿ ಅರಿತವನು ಅಥವಾ ಧಮ್ಮವನ್ನು ಆಳ ಹೃದಯದಿಂದ ಅರಿತವನು ಎನ್ನುತ್ತಾರೆ".

* * *

ಇನ್ನೊಮ್ಮೆ ಭಗವಾನರ ಬಳಿ ಮತ್ತೊಬ್ಬ ಬಂದು ಈ ರೀತಿ ಪ್ರಶ್ನಿಸುತ್ತಾನೆ "ಭಗವಾನರೇ ಯಾವರೀತಿಯಲ್ಲಿ ಸತ್ಯವನ್ನು ರಕ್ಷಿಸಬಹುದು?" "ಇಲ್ಲಿ ಯಾರಾದರೊಬ್ಬ ನಂಬಿಕೆಯಿಂದ ಬಂದು ಧಮ್ಮ ಕೇಳಬಹುದು, ಆದರೆ 'ಇದೇ ಸತ್ಯ ಮಿಕ್ಕವೆಲ್ಲಾ ಸತ್ಯವಲ್ಲ' ಎಂದು ಈ ರೀತಿ ಹೇಳುವುದಿಲ್ಲ. ಇದೇ ಸತ್ಯ ರಕ್ಷಿಸುವ ದಾರಿಯಾಗಿದೆ. ಆದರೆ ಸತ್ಯ ಸಾಕ್ಷಾತ್ಕಾರ ಹಾದಿಯಾಗಿಲ್ಲ".



"ಅದು ಹೇಗೆ?"

"ಇಲ್ಲಿ ಶ್ರದ್ಧೆಯಿಂದ ಒಬ್ಬ ಬಂದಾಗ ಆತ ಕಿವಿಗೊಡುತ್ತಾನೆ, ಕಿವಿ ಕೊಟ್ಟಾಗ, ಆಲಿಸುತ್ತಾನೆ. ಆಲಿಸಿದಾಗ ಜ್ಞಾಪಕದಲ್ಲಿಡುತ್ತಾನೆ. ಜ್ಞಾಪಕದಲ್ಲಿಟ್ಟಾಗ, ಅದನ್ನು ಪರೀಕ್ಷಿಸುತ್ತಾನೆ. ಪರೀಕ್ಷಿಸಿದಾಗ ಅವುಗಳ ಅರ್ಥ ಮಾಡಿಕೊಳ್ಳುತ್ತಾನೆ. ಆಗ ಆತನಲ್ಲಿ ಇಚ್ಛೆಯು ಉಂಟಾಗುತ್ತದೆ, ಇಚ್ಛೆಯಾದಾಗ ಪ್ರಯತ್ನಶೀಲನಾಗುತ್ತಾನೆ. ಪ್ರಯತ್ನಶಾಲಿಯಾದಾಗ, ಆತ ತುಲನಾತ್ಮಕವಾಗಿ ಪರಿಶೀಲಿಸುತ್ತಾನೆ. ಹಾಗೆ ತುಲನಾತ್ಮಕವಾಗಿ ಪರಿಶೀಲನೆ ಮಾಡುವಾಗ ಸಮ್ಮಾ ವ್ಯಾಯಾಮ ಪ್ರಾರಂಭಿಸುತ್ತಾನೆ. ಈ ರೀತಿ ಪರಿಶ್ರಮ ಪಟ್ಟಾಗ ಅತ್ಯುನ್ನತ ಸತ್ಯ ಸಾಕ್ಷಾತ್ಕಾರವಾಗುತ್ತದೆ. ಈ ಶರೀರ ಇರುವಾಗಲೇ ಆತ ಆಳ ಪ್ರಜ್ಞಾಶೀಲತೆಯಿಂದ ಅರಿಯುತ್ತಾನೆ. ಈ ರೀತಿಯಲ್ಲಿ ಆತ ಸತ್ಯ ಸಾಕ್ಷಾತ್ಕಾರ ಮಾಡುತ್ತಾನೆ".

* * *

ಓದುಗರಿಗೆ ಪ್ರಯೋಜನ ಸಿಗಲೆಂದು ನೂರು ವಿಧದ ಶೀರ್ಷಿಕೆ ನೀಡಿ ಅದಕ್ಕೆ ಅನುಗುಣವಾಗುವ ಗಾಥೆಗಳನ್ನು ಹುಡುಕಿ ಕ್ರಮವಾಗಿ ಜೋಡಿಸಿದ್ದೇನೆ. ಯಾರ್ಯಾರಿಗೆ ಯಾವಾಗ ಏನು ಬೇಕೋ ಅಂತಹ ಎಲ್ಲಾ ರತ್ನಗಳಿವೆ. ಅವನ್ನು ಅರ್ಥ ಮಾಡಿ ಪಾಲನೆಗೆ ಬಂದಾಗಲೇ ಅದರ ನಿಜ ಫಲ ಪಡೆಯಬಹುದು. ಓದುಗರ ಸಲಹೆ ಮತ್ತು ಟೀಕೆಗೆ ಸ್ವಾಗತವಿದೆ.

ಇಂತಿ ನಿಮ್ಮವ

**ಅನೀಶ್ ಬೋಧ್**

**ಎಲ್ಲರಿಗೂ ಮಂಗಳವಾಗಲಿ**

## ಪರಿವಿಡಿ


1. ಬುದ್ಧ
2. ಧಮ್ಮ
3. ಸಂಘ
4. ದುಃಖಸತ್ಯ
5. ದುಃಖದ ಕಾರಣ ಸತ್ಯ
6. ದುಃಖ ನಿರೋಧ ಸತ್ಯ
7. ಆರ್ಯ ಅಷ್ಟಾಂಗ ಮಾರ್ಗ
8. ಯೋಗ್ಯವಾದ ದೃಷ್ಟಿಕೋನ
9. ಯೋಗ್ಯವಾದ ಸಂಕಲ್ಪ
10. ಯೋಗ್ಯವಾದ ಸಂಭಾಷಣೆ
11. ಯೋಗ್ಯವಾದ ಕರ್ಮ
12. ಯೋಗ್ಯವಾದ ಜೀವನೋಪಾಯ
13. ಯೋಗ್ಯವಾದ ವ್ಯಾಯಾಮ
14. ಯೋಗ್ಯವಾದ ಜಾಗ್ರತೆ
15. ಯೋಗ್ಯವಾದ ಸಮಾಧಿ
16. ಮನಸ್ಸು
17. ಶಾಂತಿ
18. ಆನಂದ
19. ಸುಖ
20. ಶೀಲ
21. ಪ್ರಜ್ಞಾ
22. ಕರುಣೆ
23. ಮೈತ್ರಿಯ ಹಾರೈಕೆ
24. ಸಮಚಿತ್ತತೆ
25. ಕ್ಷಾಂತಿ (ಸಹನೆ)
26. ಸಂತೃಪ್ತಿ
27. ದಾನ
28. ತ್ಯಾಗ
29. ಪ್ರಯತ್ನಶೀಲತೆ (ವೀರ್ಯ)
30. ಸತ್ಯ
31. ದೃಢನಿರ್ಧಾರ
32. ಜ್ಞಾನ
33. ಶಕ್ತಿ
34. ಅಜ್ಞಾನ
35. ವಿಮುಕ್ತಿ
36. ಸ್ವಶ್ರದ್ಧೆ
37. ಐಶ್ವರ್ಯ
38. ಮಿತ್ರತ್ವ
39. ತಾಯಿ–ತಂದೆಯರು
40. ಮಕ್ಕಳು
41. ಪತಿ
42. ಪತ್ನಿ
43. ಆರೋಗ್ಯ
44. ವೈರಾಗ್ಯ
45. ಚಿಂತೆ
46. ಬಂಧನಗಳು
47. ವಿಮರ್ಶೆ
48. ಪಶ್ಚಾತ್ತಾಪ





49. ಸಾಧನೆ
50. ತಡೆಗಳು
51. ಕುಡಿತ
52. ಜೂಜು
53. ಸೋಮಾರಿತನ
54. ಮೂರ್ಖ
55. ಪ್ರಿಯವಾದುದು
56. ಕೋಪ
57. ಭಯ
58. ಧೈರ್ಯ
59. ಪಾಪ
60. ಜ್ಞಾನಿ
61. ಸ್ತ್ರೀ
62. ಸೇವೆ
63. ಪುಣ್ಯ
64. ಪುಣ್ಯ ಗ್ರಂಥಗಳು
65. ಕರ್ಮ
66. ಅವನತಿ
67. ಮಂಗಳಕರ
68. ಸತ್ಪುರುಷರ ಸಂಗ
69. ಗುರು
70. ಯಶಸ್ಸು
71. ಕಶ್ಮಲಗಳು
72. ಮಿಥ್ಯಾದೃಷ್ಟಿ
73. ಪ್ರಜ್ಞಾವಂತ
74. ಅಲಕ್ಷ
75. ಇಂದ್ರಿಯ ಸುಖಗಳು
76. ಭಿಕ್ಷು
77. ನೀಚ
78. ಮರಣ
79. ವಾದ–ವಿವಾದ
80. ಬ್ರಹ್ಮಚರ್ಯ
81. ವರ್ತನೆ
82. ಸಮದರ್ಶಿತ್ವ
83. ಜನಪ್ರಿಯತೆ
84. ಮಿಶ್ರಣ
85. ಸಂಶಯ
86. ಸ್ವ–ಅವಲಂಬನೆ
87. ದ್ಯಾನ (ಝಾನ)
88. ಚಿತ್ತ
89. ಕರ್ಮಫಲ
90. ಗೃಹಸ್ಥ ಧರ್ಮ
91. ಕೆಟ್ಟ ಮಿತ್ರ
92. ಅಸತ್ಪುರುಷ
93. ಸ್ವ–ನಿಯಂತ್ರಣ
94. ಏಕಾಂತ ಜೀವನ
95. ದೇವರು
96. ಅವಲಂಬನೆಯಿಂದ ಉದಯ
97. ಅಶುಭ
98. ಅನಿತ್ಯ
99. ಆನಾತ್ಮ
100. ನಿಬ್ಬಾಣ

# 1. ಬುದ್ಧ

1. "ಯಾರ ಜಯವನ್ನು ಬೇರೆ ಯಾವುದರಿಂದಲೂ ಅಪಜಯ ಮಾಡಲಾಗುವುದಿಲ್ಲವೋ, ಗೆದ್ದು ಹೋದ ಲೋಕದ ಯಾವ ಕಲ್ಮಶಗಳು ಮತ್ತೆ ಹಿಡಿಯಲಾರವೋ ಅಂತಹವರು **ಬುದ್ಧರು**. ಅನಂತವಾದ ಸಾಮರ್ಥ್ಯವುಳ್ಳವರು. ದಾರಿಯೇ ಇರದಿರುವಾಗ ಅವರ ದಾರಿಯನ್ನು ಹೇಗೆ ಯಾವುದರಿಂದ ಕಂಡು ಹಿಡಿಯಲು ಸಾಧ್ಯ ?" 1
2. "ಯಾರು ನನ್ನ ಬೋಧನೆಯನ್ನು ನೋಡುತ್ತಾರೋ (ಅರಿಯುತ್ತಾರೋ) ಅವರು ನನ್ನನ್ನು (ಬುದ್ಧರನ್ನು) ಕಾಣುತ್ತಾರೆ (ಅರಿಯುತ್ತಾರೆ). 2
3. "ಯಾರು ರೋಗಿಯನ್ನು ಆರೈಕೆ ಮಾಡುತ್ತಾರೋ ಅವರು ನನಗೆ (ಬುದ್ಧರಿಗೆ) ಸೇವೆ ಮಾಡುತ್ತಾರೆ". 3
4. "ಒಂದು ಅದ್ಭುತಜೀವಿ, ಒಬ್ಬ ಅಸಮಾನ್ಯ ಮಾನವರು ಈ ಜಗತ್ತಿನಲ್ಲಿ ಉದಯಿಸುವರು, ಅವರು ಜಗತ್ತಿನ ಸರ್ವಹಿತಕ್ಕಾಗಿ, ಸರ್ವರ ಸುಖಕ್ಕಾಗಿ, ಜಗತ್ತಿನ ಮೇಲಿನ ಅನುಕಂಪದಿಂದಾಗಿ ಉದಯಿಸುವರು. ಒಳ್ಳೆಯದಕ್ಕಾಗಿ, ದೇವ-ಮನುಷ್ಯರ ಹಿತ ಸುಖಕ್ಕಾಗಿ ಹುಟ್ಟುವಂತಹ ಆ ಅದ್ವಿತೀಯ ಜೀವಿಯೇ ಬುದ್ಧರು". 4
5. ಸರ್ವ ಲೋಕದಲ್ಲಿ ಅವರನ್ನು ಮೀರಿದವರು ಯಾರೂ ಇಲ್ಲ. ಯಾರಿಂದಲೂ ಅವರನ್ನು ಜಯಿಸಲು ಸಾಧ್ಯವಿಲ್ಲ. ಸರ್ವಲೋಕವನ್ನು ತಿಳಿದು, ಸರ್ವಲೋಕಗಳಿಂದ ಬಿಡುಗಡೆ ಪಡೆದವರು. ಅವರು ಮುಕ್ತರಲ್ಲಿ ಅಗ್ರರು, ದಾಟಿರುವವರಲ್ಲಿ ಶ್ರೇಷ್ಠರು, ಅರಿತಿರುವವರಲ್ಲಿ ಅನುಪಮರು". 5
6. "ಬುದ್ಧರ ಉದಯ ದುರ್ಲಭ..."
"ಬುದ್ಧರ ಹುಟ್ಟುವಿಕೆ ಸುಖಕರ, ಮಂಗಳಕರ..."
"ಅಂತಹ ಪುರುಷಶ್ರೇಷ್ಠರನ್ನು ಕಾಣುವುದು ದುರ್ಲಭ". 6

# 2. ಧಮ್ಮ

1. "ಸರ್ವ ಪಾಪವನ್ನು ಮಾಡದಿರುವುದು, ಕುಶಲವನ್ನು (ಒಳ್ಳೆಯತನವನ್ನು) ಸಂಪಾದಿಸುವುದು, ಸ್ವಚಿತ್ತವನ್ನು ಪರಿಶುದ್ಧಿಗೊಳಿಸುವುದು - ಇದೇ ಬುದ್ಧರ ಶಾಸನವಾಗಿದೆ". 7
2. "ಕೆಟ್ಟದ್ದನ್ನು ಆಡದಿರುವುದು, ನೋಯಿಸದಿರುವುದು, ಪಾತಿಮೋಕ್ಖ (ಭಿಕ್ಖುನಿಯಮ) ಅನುಸಾರವಾಗಿ ಸಂಯಮದಿಂದಿರುವುದು, ಆಹಾರದಲ್ಲಿ ಮಿತವಾಗಿರುವುದು, ಒಂಟಿಯಾಗಿ ವಾಸಿಸುವುದು, ಮನವನ್ನು ಯಾವಾಗಲೂ ಧ್ಯಾನ ಉನ್ನತಿಯಲ್ಲಿ ನೆಲೆ ಮಾಡುವುದು - ಇದೇ ಬುದ್ಧರ ಶಾಸನವಾಗಿದೆ". 8
3. "ಕಾರಣದಿಂದಾಗುವ ಎಲ್ಲಾ ವಿಷಯಗಳನ್ನು (ಧಮ್ಮವನ್ನು), ಅವುಗಳ ಸ್ಪಷ್ಟ ಕಾರಣಗಳನ್ನು ಮಹಾಸಮಣರು ತಿಳಿಸಿದ್ದಾರೆ ಮತ್ತು ತಥಾಗತರು ಅವುಗಳ ನಿರೋಧವನ್ನು ಹಾಗು ಅದರ ಮಾರ್ಗವನ್ನು ಸಹಾ ತಿಳಿಸಿದ್ದಾರೆ". 9
4. ಧಮ್ಮದಾನವು ಎಲ್ಲಾ ದಾನಗಳಿಗಿಂತ ಶ್ರೇಷ್ಠ, ಧಮ್ಮರಸವು ಉಳಿದ ರಸಗಳಿಗಿಂತ ಶ್ರೇಷ್ಠ, ಧಮ್ಮಾನಂದವು ಉಳಿದ ಆನಂದಗಳಿಗಿಂತ ಶ್ರೇಷ್ಠ. ಯಾರು ತೃಷ್ಣೆಯನ್ನು ನಾಶಪಡಿಸಿಕೊಂಡಿರುವರೋ ಅವರು ದುಃಖವೆಲ್ಲದರಿಂದ ಮುಕ್ತರಾಗಿದ್ದಾರೆ. 10
5. ಈ ಧಮ್ಮವು ಬಂದು ಸಾಧಿಸುವವರಿಗೆ ಹೊರತು ಬಂದು ನಂಬುವವರಿಗಲ್ಲ. ಇದು ರಾಗ ದ್ವೇಷ ಮತ್ತು ಮೋಹದಿಂದ ಪೀಡಿತರಾಗಿರುವವರಿಗೆ ಅರಿಯಲಾಗುವುದಿಲ್ಲ. 11

## 3. ಸಂಘ

1. "ಚಿನ್ನದ ನಾಣ್ಯಗಳ ಮಳೆಗರೆದರೂ ಇಂದ್ರಿಯಸುಖಗಳ ತೃಪ್ತಿ ಆಗುವುದಿಲ್ಲ. ಕಾಮಸುಖಗಳು ಅಲ್ಪಸ್ವಾದ ಹಾಗು ಅಪಾರ ದುಃಖದಿಂದ ಕೂಡಿದೆ. ಇದನ್ನು ಅರಿತು ಪಂಡಿತರು ದಿವ್ಯವಾದ ಸುಖಗಳಲ್ಲೂ ಆನಂದಿಸುವುದಿಲ್ಲ. ಸಮ್ಮಾಸಂಬುದ್ಧರ ಶ್ರಾವಕರು ಸದಾ ತೃಷ್ಣಾಕ್ಷಯದಲ್ಲೇ ನಿರತರಾಗುತ್ತಾರೆ". 12

2. "ಬುದ್ಧ ಭಗವಾನರ ಶಿಷ್ಯರು, ಯಾರು ಹಗಲು-ರಾತ್ರಿ ಧ್ಯಾನದಲ್ಲೇ ಆನಂದಿತರಾಗಿರುವರೋ ಅಂತಹವರು ಸದಾ ಜಾಗ್ರತೆಯಿಂದಿರುತ್ತಾರೆ". 13

3. "ಯಾರು ಪರಮ ಗಂಭೀರ ಪ್ರಜ್ಞಾವಾನ್ ಬುದ್ಧರಿಂದ ಪ್ರಕಾಶಿಸಲ್ಪಟ್ಟ ಆರ್ಯ ಸತ್ಯಗಳನ್ನು ಮನನ ಮಾಡಿದ್ದಾರೋ ಅವರು ತೀರ ಎಚ್ಚರ ತಪ್ಪಿದರೂ ಎಂಟನೆಯ ಜನ್ಮ ಪಡೆಯುವುದಿಲ್ಲ. ಇದು ಸಂಘದ ಉತ್ತಮ ರತ್ನವಾಗಿದೆ". 14

4. "ನಕ್ಷತ್ರಗಳಲ್ಲಿ ಮುಖ್ಯ ಚಂದಿರ. ಬೆಳಗುವುದರಲ್ಲಿ ಪ್ರಧಾನ ಸೂರ್ಯನಾಗಿದ್ದಾನೆ. ಇಚ್ಛಿತರ ಮುಖ್ಯ ಅಭಿಲಾಷೆ ಪುಣ್ಯವಾಗಿದೆ. ಹಾಗೆಯೇ ಪೂಜೆ ಆತಿಥ್ಯಕ್ಕೆ ಮುಖ್ಯವು ಸಂಘವಾಗಿದೆ". 15

5. "ಯಾರು ಪೂಜ್ಯಾರ್ಹರಾದವರನ್ನು, ಬುದ್ಧರನ್ನು ಅಥವಾ ಶ್ರಾವಕರನ್ನು ಪೂಜಿಸುವರೋ, ಪ್ರಪಂಚದ ತಡೆಗಳನ್ನು ದಾಟಿ ಶೋಕ ಸಂಕಟಗಳಿಂದ ಪಾರಾದ, ಮುಕ್ತರಾದ, ಶಾಂತ ಸ್ವರೂಪಿಗಳನ್ನು ಭಯವಿಲ್ಲದವರನ್ನು ಯಾರು ಪೂಜಿಸುವರೋ ಅವರು ಗಳಿಸಿದ ಪುಣ್ಯವನ್ನು ಯಾವುದರಿಂದಲೂ ಅಳಿಯಲು ಸಾಧ್ಯವಿಲ್ಲ". 16

## 4. ದುಃಖ ಸತ್ಯ

1. "ಜನ್ಮ, ರೋಗ, ಜರಾ, ಮೃತ್ಯು, ಶೋಕ, ನಿರಾಶೆ, ಪ್ರಿಯರ ವಿಯೋಗ, ಅಪ್ರಿಯರ ಸಮಾಗಮ, ಆಸೆಗಳ ಅಪೂರೈಕೆ, ಅಸ್ತಿತ್ವದ ಈ ಎಲ್ಲಾ ಲಕ್ಷಣಗಳು ದುಃಖವನ್ನು ಸೂಚಿಸುತ್ತವೆ". 17

2. "ಹಸುಗಳ ಹಿಂಡನ್ನು ದನಗಾಹಿಯು ದೊಣ್ಣೆಯಿಂದ ಅಟ್ಟುವಂತೆ ಮುಪ್ಪು ಮರಣಗಳು ಜೀವಿಗಳನ್ನು ಓಡಿಸುತ್ತವೆ". 18

3. "ಇಲ್ಲಿ ಮನುಷ್ಯರ ಜೀವನ ಅನಿಮಿತ್ತ ಹಾಗು ಅಜ್ಞಾತವಾಗಿದೆ. ಕಠಿಣ ಹಾಗು ಅಲ್ಪವಾಗಿದೆ ಮತ್ತು ಅದು ಸಹಾ ದುಃಖ ಭರಿತವಾಗಿದೆ". 19

4. "ಯಾರಿಗೆ ನೂರು ಪ್ರಿಯವಾದ ವಿಷಯಗಳಿವೆಯೋ, ಆತನಿಗೆ ನೂರು ಬಗೆಯ ದುಃಖಗಳಿರುತ್ತದೆ. ಯಾರಿಗೆ ಎರಡು ಪ್ರಿಯ ವಿಷಯಗಳಿವೆಯೋ ಅವರಿಗೆ 2 ಬಗೆಯ ದುಃಖ ಗಳಿರುತ್ತದೆ". 20

## ೫. ದುಃಖದ ಕಾರಣ ಸತ್ಯ

1. "ದುಃಖದ ಕಾರಣವೇನೆಂದರೆ ಸ್ವಾರ್ಥದ ಬಯಕೆ, ಅದು ಸುಖದ ಬಯಕೆಯಾಗಿರಬಹುದು, ಸೇಡಿನ ಬಯಕೆಯಾಗಿರಬಹುದು ಅಥವಾ ಕೇವಲ ದೀರ್ಘಾಯುವಿನ ಬಯುಕೆಯು ಆಗಿರಬಹುದು". 21
2. "ಬಯಕೆಯೇ ದುಃಖದ ಕಾರಣವಾಗಿದೆ. ಏಕೆಂದರೆ ಬಯಕೆಯು ಎಂದಿಗೂ ಪೂರ್ಣವಾಗಿ ತೃಪ್ತಿ ಹೊಂದಲಾರದು". 22
3. "ಬಯಕೆಗಳಿಂದಲೇ ದುಃಖವು ಉದಯಿಸುವುದು, ಬಯಕೆಗಳಿಂದಲೇ ಭಯವು ಉದಯಿಸುವುದು, ಯಾರು ಪೂರ್ಣವಾಗಿ ಬಯಕೆಗಳಿಂದ ಮುಕ್ತರೋ ಅವರಿಗೆ ದುಃಖವಿಲ್ಲ, ಭಯ ಎಲ್ಲಿಯದು ?" 23
4. "ಕೇವಲ ವಿಷಯುಗಳಿಂದಲೇ ಮಾನವನು ತನ್ನನ್ನು ಗುರುತಿಸಿಕೊಳ್ಳುತ್ತಾನೆ. ಅದು ಆತನ ಚಿತ್ತವನ್ನು ಹದಗೆಡಿಸುತ್ತದೆ. ನಾನು, ನನ್ನದು ಎಂಬುದರಿಂದಲೇ ದುಃಖ ಉಂಟಾಗುತ್ತದೆ". 24
5. "ಪ್ರಿಯವಾದುದುಕ್ಕೆ ಅಂಟಿಕೊಳ್ಳಬೇಡ, ಅಪ್ರಿಯವಾದುದಕ್ಕೆ ಅಂಟಿಕೊಳ್ಳಬೇಡ, ಪ್ರಿಯರಾದವರನ್ನು ನೋಡದಿರುವುದು ಹಾಗು ಅಪ್ರಿಯವಾದುದನ್ನು ನೋಡುವುದು ಎರಡೂ ದುಃಖಕರ".25
6. "ಯಾವುದು ಪರರನ್ನು ಅವಲಂಬಿಸಿದೆಯೋ ಅದೆಲ್ಲವೂ ದುಃಖಕರ, ಸ್ವ-ಪ್ರಭುವಾಗುವುದೇ ಸುಖಕರ". 26

## ೬. ದುಃಖ ನಿರೋಧ ಸತ್ಯ

1. "ಯಾವ ಮುಳ್ಳಿನಿಂದ ಚುಚ್ಚಿಕೊಂಡ ವ್ಯಕ್ತಿ ಸರ್ವ ದಿಕ್ಕುಗಳಿಗೂ ಓಡುವನೋ, ಅದೇ ಮುಳ್ಳನ್ನು ತೆಗೆದ ನಂತರ ಆತನು ಓಡುವುದೂ ಇಲ್ಲ, ಮುಳುಗುವುದೂ ಇಲ್ಲ". 27
2. "ಯಾರಿಗೆ ಯಾವ ಪ್ರಿಯಬಯಕೆಗಳಿಲ್ಲವೋ ಅವರಿಗೆ ಯಾವ ದುಃಖವೂ ಇಲ್ಲ. ಯಾರಲ್ಲಿ ಉದ್ರೇಕ ಹಾಗು ವಿಷಾಧವಿಲ್ಲವೋ ಅವರಿಗೆ ನಾನು ಶೋಕರಹಿತ ಎನ್ನುತ್ತಾನೆ". 28
3. "ಪ್ರಿಯ ಬಯಕೆ ಇಲ್ಲದವನು ದುಃಖರಹಿತನಾಗುತ್ತಾನೆ". 29
4. "ಎಲ್ಲವನ್ನೂ ಪೂರ್ಣವಾಗಿ ಅರಿತವರು, ಯಾವುದರಲ್ಲಿಯೂ ರಮಿಸುವುದಿಲ್ಲ. ಎಲ್ಲವನ್ನು ಅರಿತ ಅವರು ದುಃಖವೆಲ್ಲದರಿಂದ ಮುಕ್ತರಾಗಿರುತ್ತಾರೆ". 30
5. "ಕಾಯವು ಚೂರು ಚೂರಾಗಿ, ಗ್ರಹಿಕೆಯು ಅಳಿಸಿ ಹೋಗಿ, ವೇದನೆಗಳೆಲ್ಲವೂ ತಂಪಾಗಿ, ಸಂಖಾರವು ಉಪಶಮನ ಹೊಂದಿ ಅರಿವು (ವಿಜ್ಞಾನ) ತನ್ನ ಕೊನೆಯನ್ನು ಮುಟ್ಟುತ್ತದೆ". 31

## 7. ಆರ್ಯ ಅಷ್ಟಾಂಗ ಮಾರ್ಗ

1. "ಯಾರು ದುಃಖವನ್ನು ಅರಿಯುತ್ತಾರೋ ಅವರು ದುಃಖದ ಉತ್ಪತ್ತಿಯನ್ನು ಅರಿಯುತ್ತಾರೆ, ಹಾಗೆಯೇ ಅದರ ನಿರೋಧ ವನ್ನು ಅರಿಯುತ್ತಾರೆ ಮತ್ತು ನಿರೋಧದ ಮಾರ್ಗವನ್ನು ಅರಿಯುತ್ತಾರೆ". 32
2. "ಎಲ್ಲಾ ವಿಷಯಗಳು (ಸಂಖಾರ) ಅನಿತ್ಯವೆಂದು ಒಬ್ಬನು ಪ್ರಜ್ಞೆಯಿಂದ ಅರಿತಾಗ ಆತನು ವಿರಾಗ ಹೊಂದುತ್ತಾನೆ. ಇದೇ ಪರಿಶುದ್ಧತೆಗೆ ಮಾರ್ಗ". 33
3. "ನಿಮಗೆ ನೀವೇ ಪರಿಶ್ರಮಪಡಬೇಕು. ತಥಾಗತರು ಕೇವಲ ಮಾರ್ಗವನ್ನು ಮಾತ್ರ ತೋರಿಸುತ್ತಾರೆ. ಮಾರ್ಗಗಳಲ್ಲಿ ಅಷ್ಟಾಂಗ ಮಾರ್ಗವೇ ಶ್ರೇಷ್ಠ. ಯಾರು ಈ ಮಾರ್ಗದಲ್ಲಿ ಹೋಗುತ್ತರೋ ಅವರು ಬುದ್ಧರ ಬೋಧನೆಯಂತೆ ನಡೆದು ದುಃಖಮುಕ್ತರು ಆಗುತ್ತಾರೆ". 34
4. "ಯಾರು ಶ್ರಮಶೀಲನಾಗಬೇಕಿದ್ದಾಗ ಶ್ರಮಿಸುವುದಿಲ್ಲವೋ ಯುವಕನಾಗಿಯು, ಬಲಿಷ್ಠನಾಗಿಯು, ಸೋಮಾರಿಯಾಗಿರು ವನೋ, ಯಾರು ತನ್ನ ಲಕ್ಷವನ್ನು ಸಡಿಲಗೊಳಿಸಿರುವನೋ ಅಂತಹ ಚಿಂತನೆಯನ್ನು ಬಿಟ್ಟಿರುವನೋ ಅಂತಹ ಸೋಮಾರಿ ಜ್ಞಾನದ ಮಾರ್ಗ ಅರಿಯಲಾರ". 35
5. "ಇಂದ್ರಿಯ ಭೋಗಗಳನ್ನು, ದೇಹದಂಡನೆಯನ್ನು ಮೀರಿದ ಮಧ್ಯಮ ಮಾರ್ಗವು ಸಮ್ಮಸಂಬುದ್ಧರಿಂದ ಪ್ರಕಾಶಿಸಲ್ಪಟ್ಟಿದೆ. ಅದು ದೃಷ್ಟಿಯನ್ನು, ಜ್ಞಾನವನ್ನು, ಅಭಿಜ್ಞಾವನ್ನು, ಶಾಂತಿಯನ್ನು, ಸಂಬೋಧಿಯನ್ನು ಮತ್ತು ನಿಬ್ಬಾಣವನ್ನು ನೀಡುತ್ತದೆ". 36

## 8. ದುಃಖ ನಿರೋಧ ಸತ್ಯ

1. "ಒಂದು ಸಿದ್ಧಾಂತಕ್ಕೆ ಅಂಟಿಕೊಂಡು, ಪರರ ದೃಷ್ಟಿಕೋನವನ್ನು ಕೀಳಾಗಿ ಕಾಣುವುದನ್ನು ಜ್ಞಾನಿಗಳು ತಡೆ ಎಂದಿದ್ದಾರೆ". 37
2. "ಈ ಪ್ರಪಂಚವು ನಿರಂತರ ಪ್ರವಾಹದಂತೆ ಮತ್ತು ಅನಿತ್ಯ ವಾದುದು. ಯಾವುದೆಲ್ಲವೂ ಉತ್ಪತ್ತಿಯಾಗುತ್ತದೋ ಅದೆಲ್ಲವೂ ಅಳಿಯುತ್ತದೆ. ಪರಿವರ್ತನೆ ಮತ್ತು ಅನಿತ್ಯತೆಯೇ ಜೀವನದ ಸ್ವರೂಪವಾಗಿದೆ. ಯಾವುದೆಲ್ಲಾ ಅನಿತ್ಯವೋ ಅದೆಲ್ಲವೂ ದುಃಖಕರವಾಗಿದೆ. ಒಬ್ಬನು ಸುಖವಾಗಿದ್ದಾಗಲೂ ಆ ಸುಖವು ಹಾಗೆಯೇ ಉಳಿಯಲಾರದು". 38
3. "ಯಾರು ಸಮ್ಮದೃಷ್ಟಿಯನ್ನು ಹೊಂದಿರುವವರೋ ಅವರಲ್ಲಿ 'ಇವೆಲ್ಲಾ ನಿತ್ಯ' ಎಂಬ ಭಾವನೆ ಇರುವುದಿಲ್ಲ ಅಥವಾ 'ಇವೆಲ್ಲಾ ಸುಖ' ಅಥವಾ 'ಇದೇ ಆತ್ಮ' ಎಂಬ ಭಾವನೆ ಬರುವುದೇ ಇಲ್ಲ ಅದು ಅವರಲ್ಲಿ ಅಸಾಧ್ಯ". 39
4. "ಒಂದುವೇಳೆ ಜನರ ದೃಷ್ಟಿಯು ಪವಿತ್ರವಾಗಿದ್ದರೆ, ಅವರು ಶುದ್ಧರು, ಪ್ರಜ್ಞಾವಂತರು, ಕುಶಲರು ಮತ್ತು ಮತಿವಂತರಾಗುತ್ತಿದ್ದರು. ಅವರಲ್ಲಿ ಯಾರು ಪ್ರಜ್ಞಾವಿಹೀನನಾಗುತ್ತಿರಲಿಲ್ಲ. ಅವರ ದೃಷ್ಟಿಯು ಪರಿಪೂರ್ಣವಾಗುತ್ತಿತ್ತು". 40
5. "ಸಮ್ಮದೃಷ್ಟಿ ಎಂದರೆ ನಾಲ್ಕು ಆರ್ಯ ಸತ್ಯಗಳ ಜ್ಞಾನವೇ ಆಗಿದೆ". 41
6. "ಇಷ್ಟೊಂದು ಶುಭ್ರವಾದ, ಪರಿಶುದ್ಧವಾದ ಈ ಬೋಧನೆಗೂ ನೀವು ಅಂಟಿದರೆ, ನೀವು ತೆಪ್ಪದ ಬೋಧನೆ ಅರ್ಥಮಾಡಿಕೊಳ್ಳಿ. ಹೇಗೆಂದರೆ ಬೋಧನೆ ದಾಟುವುದಕ್ಕೆ ಹಿಡಿದುಕೊಳ್ಳಲಿಕ್ಕೆ ಅಲ್ಲ". 42

## ೯. ಯೋಗ್ಯವಾದ ಸಂಕಲ್ಪ

1. "ಎಲ್ಲಾ ಬಗೆಯ ಭೋಗಾಭಿಲಾಶೆಗಳಿಂದ ದೂರವಾಗಬೇಕೆಂಬ ಸಂಕಲ್ಪ, ಎಲ್ಲಾ ಬಗೆಯ ದ್ವೇಷಗಳಿಂದ ದೂರವಾಗಬೇಕೆಂಬ ಸಂಕಲ್ಪ, ಎಲ್ಲಾ ಬಗೆಯ ಹಿಂಸೆಗಳಿಂದ ದೂರವಾಗಬೇಕೆಂಬ ಸಂಕಲ್ಪ ಇವನ್ನೇ ಸಮ್ಮ ಸಂಕಲ್ಪ ಎನ್ನುತ್ತಾರೆ". 43
2. "ನಾನು ಪದ್ಮಾಸನ ಸ್ಥಿತಿಯಲ್ಲೆ ಅಸವಗಳಿಂದ ಮುಕ್ತಚಿತ್ತ ಪ್ರಾಪ್ತಿಯ ವಿನಃ ಆಸನ ಭಂಗಿಸಿ ಮೇಲೇಳುವುದಿಲ್ಲ" ಎಂದು ಸಂಕಲ್ಪ ಮಾಡುವವನು ಶೋಭಾಯಮಾನನಾಗುವನು". 44
3. "ನಾನು ದಾನಿಯಾಗಲಿ ಮತ್ತು ಸಹಾಯ ಮಾಡುವವನಾಗಲಿ, ನಾನು ಶೀಲವಂತನಾಗಲಿ, ಶುದ್ಧನಾಗಲಿ ಮತ್ತು ಪ್ರಾಮಾಣಿಕನಾಗಲಿ, ನಾನು ಸ್ವಾರ್ಥಿಯಾಗದಿರಲಿ, ಬದಲಾಗಿ ನಿಸ್ವಾರ್ಥ ಹಾಗು ತ್ಯಾಗಿಯಾಗಿರಲಿ". 45
4. "ನಾನು ಜ್ಞಾನಿಯಾಗಲಿ ಮತ್ತು ನನ್ನ ಜ್ಞಾನದ ಫಲವನ್ನು ಪರರಲ್ಲಿ ಹಂಚುವಂತಾಗಲಿ, ನಾನು ಪ್ರಯತ್ನಶಾಲಿಯಾಗಲಿ, ಶಕ್ತಿಶಾಲಿಯಾಗಲಿ, ನಿರಂತರ ಪರಿಶ್ರಮಿಯಾಗಿರಲಿ, ನಾನು ಸಹನೆಯುಳ್ಳವನಾಗಲಿ, ನಾನು ಪರರ ತಪ್ಪುಗಳನ್ನು ಸಹಿಸಿ ಕ್ಷಮಿಸುವಂತಾಗಲಿ, ನಾನು ನೀಡಿದ ವಚನವನ್ನು ಎಂದೆಂದಿಗೂ ನೆರವೇರಿಸುವಂತಾಗಲಿ". 46
5. "ನಾನು ಧೃಢನಾಗಲಿ ಮತ್ತು ಸ್ಥಿರ ನಿರ್ಧಾರದವನಾಗಲಿ, ನಾನು ದಯಾವಂತನಾಗಲಿ, ಕರುಣೆಯಿಂದ ಇರಲಿ ಮತ್ತು ಮಿತ್ರತ್ವದಿಂದ ಇರುವಂತಾಗಲಿ, ನಾನು ನಮ್ರನಾಗಿರಲಿ, ಶಾಂತನಾಗಿರಲಿ, ಅಭಯಶಾಲಿಯು, ಶೋಕರಹಿತನು ಆಗುವಂತಾಗಲಿ". 47
6. "ನಾನು ಪರಿಪೂರ್ಣತೆಗೆ ಸೇವೆ ಮಾಡುವಂತಾಗಲಿ ಹಾಗು ಸೇವೆಗಾಗಿ ಪರಿಪೂರ್ಣತೆ ಹೊಂದಲಿ". 48

## 10. ಯೋಗ್ಯವಾದ ಸಂಭಾಷಣೆ

1. "ಸುಳ್ಳು ಹೇಳುವಿಕೆಯೆ ಸರ್ವ ಪಾಪಕ್ಕೂ ಮೂಲ. ಇದು ಮಾನವನನ್ನು ದುರ್ಗತಿಗೆ ತಳ್ಳುತ್ತದೆ. ಆತನ ಬಾಯಿಯಿಂದ ದುರ್ವಾಸನೆ ಹೊರಹೊಮ್ಮಿಸುತ್ತದೆ ಮತ್ತು ಅವನು ಪರರಿಗೆ ಅಪ್ರಿಯನಾಗುತ್ತಾನೆ, ಪರರಿಂದ ಕೀಳಾಗಿ ಕಾಣಲ್ಪಡುತ್ತಾನೆ". 49
2. "ಮಾತಿನ ನಾಲ್ಕು ಪಾಪಗಳೆಂದರೆ ಸುಳ್ಳು, ಕಠಿಣಮಾತು, ಚಾಡಿ ಮತ್ತು ವ್ಯರ್ಥ ಮಾತುಗಳು". 50
3. "ಸುಂದರವಾದ ಹೂವು ಸುಗಂಧರಹಿತವಾದರೆ ಹೇಗೋ ಹಾಗೆಯೇ ನುಡಿದಂತೆ ನಡೆಯುವವನ ನುಡಿಗಳು ನಿಶ್ಚಲವಾದುದು". 51
4. "ಪರರು ಇಲ್ಲದಿರುವಾಗ ಅವರ ಬಗ್ಗೆ ಕೆಟ್ಟದ್ದನ್ನು ಆಡುವುದು ಬೇಡ. ಒಬ್ಬನು ಪರರಿಗೆ ತೀಕ್ಷ್ಣವಾಗಿ ಅವಹೇಳನ ಮಾಡುವುದನ್ನು ತನ್ನ ನುಡಿಗಳಲ್ಲಿ ಮುಕ್ತಿಗೊಳಿಸಲಿ." 52
5. "ಒಬ್ಬನ ನುಡಿಗಳು ಮಿತವಾಗಿರಲಿ, ವಿಚಾರಪೂರಿತವಾಗಿರಲಿ, ಜ್ಞಾನಯುತವಾಗಿ ಹಾಗು ಕಿವಿಗಳಿಗೆ ಆನಂದದಾಯಕವಾಗಿ ನುಡಿಯಲಿ." 53
6. "ಯಾವ ಮಾತು ಯತಾರ್ಥವಾದದ್ದು, ಸತ್ಯವುಳ್ಳದ್ದು, ಒಳ್ಳೆಯತನಕ್ಕೆ ಸಂಬಂಧವುಳ್ಳದ್ದು ಮತ್ತು ಇತರರಿಗೆ ಪ್ರಿಯವೇ ಆಗಿರಲಿ ಅಥವಾ ಅಪ್ರಿಯವೇ ಆಗಿರಲಿ, ಆ ಮಾತನ್ನು ವಿವರಿಸಲು ಸಮಯ ತಿಳಿದಿರಬೇಕು". 54

## 11. ಯೋಗ್ಯವಾದ ಕರ್ಮ

1. “ದೇಹದ ಮೂರು ಪಾಪಗಳೆಂದರೆ ಕೊಲ್ಲುವಿಕೆ, ಕಳ್ಳತನ ಮತ್ತು ವ್ಯಭಿಚಾರ”. 55
2. “ಹೇಗೆ ನಾನು ಇರುವೆನೋ ಹಾಗೆಯೇ ಜೀವಿಗಳೂ ಸಹಾ, ಹೇಗೆ ಈ ಜೀವಿಗಳಿರುವವೋ ಹಾಗೆಯೇ ನಾನಿರುವೆನು, ಈ ರೀತಿಯಾಗಿ ಎಲ್ಲರೂ ತನ್ನ ಸಮಾನರು ಎಂದು ಅರಿತು ಯಾರಿಗೂ ವಧಿಸದಿರು ಮತ್ತು ಪರರಿಂದ ಕೊಲ್ಲಿಸದಿರು (ಹಿಂಸಿಸದಿರು). 56
3. “ಉದ್ದವಾದದ್ದಾಗಿರಲಿ ಅಥವಾ ಗಿಡ್ಡದ್ದಾಗಿರಲಿ, ಅಣುವಷ್ಟಾಗಿರಲಿ ಅಥವಾ ಸ್ಥೂಲವಾಗಿರಲಿ, ಒಳ್ಳೆಯದಾಗಿರಲಿ ಅಥವಾ ಕೆಟ್ಟದ್ದೇ ಆಗಿರಲಿ ಯಾರು ತನಗೆ ಕೊಡದೆ ಇದ್ದುದನ್ನು ಸ್ವೀಕರಿಸುವುದಿಲ್ಲವೋ ಅವರನ್ನು ನಾನು ಬ್ರಾಹ್ಮಣ (ಶ್ರೇಷ್ಠ) ಎನ್ನುತ್ತೇನೆ”. 57
4. “ಎಚ್ಚರಿಕೆ ತಪ್ಪಿ ಪರನಾರಿ ಗಮನವನ್ನು ಮಾಡುವವನು ದೌರ್ಭಾಗ್ಯಗಳನ್ನು ಅನುಭವಿಸುತ್ತಾನೆ. ಪಾಪಗಳಿಕೆ, ನಿಂದೆ, ನಿದ್ರಾಭಂಗ ಮತ್ತು ನಿರಯ. 58
5. ದುಶ್ಶೀಲನಾಗಿ ಸಂಯಮಹೀನನಾಗಿ 100 ವರ್ಷ ಬದುಕುವುದಕ್ಕಿಂತ ಒಂದೇ ಒಂದುದಿನ ಶೀಲವಂತನಾಗಿ ಧ್ಯಾನಿಯಾಗಿ ಬದುಕುವುದು ಮೇಲು”. 59

## 12. ಯೋಗ್ಯವಾದ ಜೀವನೋಪಾಯ

1. “ಪರರಿಗೆ ಸ್ವಲ್ಪವೂ ಹಾನಿ ಮಾಡದೆ ಯಾರು ಜೀವಿಸುತ್ತಿರುವರೋ ಅವರು ಧನ್ಯರೇ ಸರಿ”. 60
2. “ಯೋಗ್ಯ ವೃತ್ತಿಯಲ್ಲಿ ತೊಡಗುವುದೇ ಸಮ್ಮಜೀವನ. ಪರರಿಗೆ ತೊಂದರೆಯಾಗುವ ಯಾವ ವೃತ್ತಿಯನ್ನು ಆಯ್ಕೆ ಮಾಡಬಾರದು. ಉದಾ: ಪ್ರಾಣಿಗಳ ಮಾರಾಟ, ಶಸ್ತ್ರಗಳ ಮಾರಾಟ, ಮಾಂಸದ ಮಾರಾಟ, ವಿಷವಸ್ತುಗಳ ಮಾರಾಟ, ಮಧ್ಯಪಾನದ ಮಾರಾಟ, ವೇಶ್ಯಾವೃತ್ತಿ ಇತ್ಯಾದಿ”. 61
3. ಒಳ್ಳೆಯ ಸಚ್ಚಾರಿತ್ರ್ಯದ ಜೀವನವನ್ನು ನಡೆಸು, ದುಶ್ಚಾರಿತ್ರ್ಯದ ಜೀವನ ನಡೆಸಬೇಡ. ಸುಧಮ್ಮವನ್ನು ಅನುಸರಿಸುವವನು ಈ ಲೋಕದಲ್ಲಿ ಮತ್ತು ಪರಲೋಕದಲ್ಲೂ ಸುಖಿಯಾಗಿ ಬದುಕುವನು”. 62
4. ಹೀನವಾದ ಧರ್ಮವನ್ನು ಸೇವಿಸಬೇಡ, ಎಚ್ಚರಿಕೆ ತಪ್ಪಿ ಬಾಳಬೇಡ. ಮಿಥ್ಯಾದೃಷ್ಟಿಯನ್ನು ಅನುಸರಿಸಬೇಡ, ಲೋಕದ ಬಾಳುವೆಗಾಗಿ ಬದುಕಬೇಡ”. 63

## 13. ಯೋಗ್ಯವಾದ ವ್ಯಾಯಾಮ

1. "ಮನಸ್ಸಿನ ಮೂರು ಪಾಪಗಳೆಂದರೆ ಲೋಭ, ದ್ವೇಷ ಮತ್ತು ಮೋಹ. ಅಕುಶಲ (ಪಾಪ) ಯೋಚನೆ ಉತ್ಪನ್ನವಾಗದಂತೆ ರಕ್ಷಿಸು. ಅಕುಶಲ (ಪಾಪ) ಯೋಚನೆಗಳನ್ನು ತ್ಯಜಿಸು. ಕುಶಲ ಯೋಚನೆಗಳನ್ನು ಅಭಿವೃದ್ಧಿಗೊಳಿಸು ಮತ್ತು ಕುಶಲ ಯೋಚನೆಗಳನ್ನು ರಕ್ಷಿಸು (ಪರಿಪೂರ್ಣಗೊಳಿಸು)". 64
2. "ನಡೆಯುವಾಗ, ನಿಂತಾಗ, ಕುಳಿತಿರುವಾಗ, ಮಲಗಿರುವಾಗ, ದೇಹವನ್ನು ಬಾಗಿಸಿದಾಗ ಅಥವಾ ನೆಟ್ಟಗೆ ಮಾಡಿಕೊಂಡಾಗ ಸರ್ವಾವಸ್ಥೆಯಲ್ಲಿಯೂ ಭಿಕ್ಷು ಸಂಯಮದಿಂದಿರಲಿ". 65
3. "ಆತನು ಪಾಪ ಯೋಚನೆ ಹುಟ್ಟಿಕೊಂಡಾಗ ಅದನ್ನು ಸಹಿಸುವುದಿಲ್ಲ. ಅದನ್ನು ದೂರ ಮಾಡುತ್ತಾನೆ. ಹುಟ್ಟುತ್ತಿದ್ದ ಹಾಗೆಯೇ ಧಮಿಸುತ್ತಾನೆ, ಗೆಲ್ಲುತ್ತಾನೆ, ಅಂತ್ಯಗೊಳಿಸಿ ಅವು ಇಲ್ಲದಂತೆ ಮಾಡುತ್ತಾನೆ". 66
4. "ಕೆಟ್ಟ ಯೋಚನೆಗಳನ್ನು ತ್ಯಜಿಸಿ, ಕುಶಲ ಭಾವನೆಗಳನ್ನು ವೃದ್ಧಿಸುವ ಜಾಣನು ಅನಿಕೇತನನಾಗಿ ಸಬಲವಾದ ಪ್ರಜ್ಞಾವನ್ನು ಬೆಳೆಸಿಕೊಳ್ಳಲಿ". 67
5. "ಕಂಠದವರೆಗೆ ತುಂಬಿರುವ ಎಣ್ಣೆಯ ಪಾತ್ರೆಯನ್ನು ಒಂದು ತೊಟ್ಟು ಚೆಲ್ಲದಂತೆ ಹೇಗೆ ತೆಗೆದುಕೊಂಡು ಹೋಗುವರೋ ಹಾಗೆ ನಿಬ್ಬಾಣವನ್ನು ಬಯಸುವವರು ಚಿತ್ತದ ರಕ್ಷಣೆ ಮಾಡಬೇಕು". 68

## 14. ಯೋಗ್ಯವಾದ ಜಾಗ್ರತೆ

1. "ಮೂರ್ಖರು ತಮ್ಮ ಅಲ್ಪಜ್ಞತೆಯಿಂದಾಗಿ ಅಜಾಗರೂಕರಾಗುತ್ತಾರೆ. ಆದರೆ ಜ್ಞಾನಿಗಳು ಎಚ್ಚರಿಕೆಯನ್ನು ಅಮೂಲ್ಯ ಐಶ್ವರ್ಯದಂತೆ ಕಾಪಾಡುತ್ತಾರೆ. 69
2. "ಎಚ್ಚರದಿಂದಿರುವಿಕೆ ಅಮರತ್ವದ ಹಾದಿಯಾಗಿದೆ, ಅಲಕ್ಷವು ಮೃತ್ಯುವಿನ ಮಾರ್ಗವಾಗಿದೆ. ಎಚ್ಚರಿಕೆಯುಳ್ಳವ ಎಂದಿಗೂ ಸಾಯಲಾರ, ಎಚ್ಚರ ತಪ್ಪಿದವ ಸತ್ತಂತೆ ಇದ್ದಾನೆ." 70
3. "ಜಾಗರೂಕತೆಯಿಂದ ಭವಸಾಗರವನ್ನು ಹಾರುತ್ತಾನೆ". 71
4. "ಎದ್ದೇಳು, ಕುಳಿತುಕೋ, ಮಲಗುವುದರಿಂದ ನಿನಗೇನು ಲಾಭ? ಮುಳ್ಳುಗಳಿಂದ ಚುಚ್ಚಿಸಿಕೊಂಡಿರುವ ನಿನಗೆ ನಿದ್ದೆ ಏತಕ್ಕಾಗಿ?" 72
5. "ಎದ್ದೇಳು, ಕುಳಿತುಕೋ, ದೃಢತೆಯ ಸಹಿತ, ನಿಬ್ಬಾಣಕ್ಕಾಗಿ ಪರಿಶ್ರಮಿಸು". 73
6. ಭಿಕ್ಷುಗಳೇ, ಎಚ್ಚರಿಕೆಯನ್ನು ನಾನು ಸರ್ವರೀತಿಯ ಸಹಾಯಕಾರಿ ಎಂದು ಘೋಷಿಸುತ್ತೇನೆ...ಜಾಗರೂಕನು ವೇಗದ ಕುದುರೆಯಂತೆ, ಎಚ್ಚರದಿಂದಲೇ ಶ್ರೇಷ್ಠತ್ವ ಲಭ್ಯ. ಎಚ್ಚರದಿಂದಿರುವುದು ಸದಾ ಶ್ಲಾಘನೀಯ. ಎಚ್ಚರದಿಂದ ಇರುವವನಿಗೆ ಅವನತಿಯಿಲ್ಲ. ಜಾಗೃತನು ನಿಬ್ಬಾಣಕ್ಕೆ ಹತ್ತಿರ". 74

## 15. ಯೋಗ್ಯವಾದ ಸಮಾಧಿ

1. “ಎಚ್ಚರಿಕೆರಹಿತತೆಯಲ್ಲಿ ಆನಂದಿಸಬೇಡ, ಸುಖಭೋಗಗಳಲ್ಲಿ ಸ್ನೇಹಬೇಡ, ಪರಿಶ್ರಮಿಯಾದ ಧ್ಯಾನಿಯು ಅಪಾರವಾದ ಆನಂದ ಅನುಭವಿಸುತ್ತಾನೆ”. 75
2. “ಸಮಾಧಿಯಿಂದ ಜ್ಞಾನವು ಉದಯಿಸುತ್ತದೆ. ಏಕಾಗ್ರತೆ ರಹಿತತೆಯಿಂದ ಜ್ಞಾನವು ಕ್ಷಯಿಸುತ್ತದೆ”. 76
3. “ಯಾರು ಪ್ರಜ್ಞಾದ ಕೊರತೆಯುಳ್ಳವರೋ ಅವರಿಗೆ ಸಮಾಧಿಯಿಲ್ಲ, ಹಾಗೆಯೇ ಸಮಾಧಿಯ ಕೊರತೆಯುಳ್ಳವರಿಗೆ ಪ್ರಜ್ಞಾವು ದೊರೆಯುವುದಿಲ್ಲ. ಯಾರಲ್ಲಿ ಈ ಸಮಾಧಿ ಮತ್ತು ಪ್ರಜ್ಞಾಗಳು ಎರಡು ಕೂಡಿರುವುದೋ ಆತನು ವಿಮುಕ್ತಿಗೆ ಹತ್ತಿರ ವಾಗಿದ್ದಾನೆ”. 77
4. “ಸಮಾಧಿಸ್ಥನಾಗು, ಧ್ಯಾನದಲ್ಲಿ ತಲ್ಲೀನನಾಗು, ನಿತ್ಯವೂ ಧರ್ಮಕ್ಕೆ ಅನುಸಾರವಾಗಿ ನಡೆ, ಸಂಸಾರದ ದುಷ್ಪರಿಣಾಮಗಳನ್ನು ಮನನ ಮಾಡುತ್ತಾ ಖಡ್ಗಮೃಗದ ರೀತಿ ಏಕಾಂಗಿಯಾಗಿ ಸಂಚರಿಸು”.
5. “ರಾಗಯುಕ್ತವಾದ ಸೌಂದರ್ಯದ ನಿಮಿತ್ತ (ಗ್ರಹಿಕೆ)ಗಳನ್ನು ತ್ಯಜಿಸು, ಏಕಾಗ್ರ ಹಾಗು ಸಮಾಧಿಸ್ಥನಾಗು, ಅಶುಭದ ಭಾವನೆಯಲ್ಲಿ ಚಿತ್ತವನ್ನು ನಿಲ್ಲಿಸು. ಅನಿಮಿತ್ತ (ಗ್ರಹಿಕೆಗೆ ಅತೀತ)ವನ್ನು ವೃದ್ಧಿಗೊಳಿಸಿಕೋ, ಚಿತ್ತವೃತ್ತಿಗಳನ್ನು ತೆಗೆದುಹಾಕು. ಆಗ ಅಭಿಮಾನದ ಅಂತ್ಯ ಮಾಡಿ ವಿಹರಿಸುವೆ”. 79
6. “ಒಂದೇ ಆಸನದಲ್ಲಿ ಬಹುಕಾಲ ಇರುವಂತೆ ಅಭ್ಯಸಿಸು ಮತ್ತು ಭಿಕ್ಷುಗಳ ಸಂಗತಿ ಮಾಡು, ಏಕಾಂತವಾಸಿಯು ‘ಮೌನೇಯ’ ಎಂದು ಕರೆಯಲ್ಪಡುತ್ತಾನೆ, ಚಿತ್ತದ ಏಕಾಂತತೆಯಲ್ಲಿ ವಿಹರಿಸುವವನು ದಶದಿಕ್ಕುಗಳನ್ನು ಪ್ರಕಾಶಿಸುವನು”. 80
7. “ಹಿಂದಿನ ಯೋಚನೆಗಳಲ್ಲಿ ಅಲೆದಾಡಬೇಡ, ಭವಿಷ್ಯದ ಕನಸುಗಳಲ್ಲಿ ತೊಡಗಿರಬೇಡ, ವರ್ತಮಾನದ ಕ್ಷಣದಲ್ಲಿ ಏಕಾಗ್ರಿತನಾಗಿರು”. 81

## 16. ಮನಸ್ಸು

1. “ಮನಸ್ಸನ್ನು ಗ್ರಹಿಸುವುದು ಕಷ್ಟಕರ, ಅತ್ಯಂತ ಸೂಕ್ಷ್ಮವು ಎಲ್ಲೆಂದರಲ್ಲಿ ಜಾರುತ್ತವೆ. ಆದರೆ ಜ್ಞಾನಿಯು ಅದರ ರಕ್ಷಣೆ ಮಾಡುತ್ತಾನೆ. ರಕ್ಷಿಸಲ್ಪಟ್ಟ ಮನಸ್ಸು ಸುಖವನ್ನು ನೀಡುತ್ತದೆ”. 82
2. “ನಾವು ನಮ್ಮ ಹಿಂದಿನ ಯೋಚನೆಗಳ ಫಲಿತಾಂಶವಾಗಿದ್ದೇವೆ. ನಮ್ಮ ಮುಂದಿನ ಫಲಿತಾಂಶ ನಮ್ಮ ಈಗಿನ ಯೋಚನೆಗಳಂತೆ ಆಗುತ್ತದೆ”. 83
3. “ಪಳಗಿದ ಮನಸ್ಸು ಮಹತ್ಫಲವನ್ನು ಮಹಾ ಲಾಭವನ್ನು ನೀಡುತ್ತದೆ, ಪರಮ ಆನಂದವನ್ನು ನೀಡುತ್ತದೆ. ಹಾಗೆಯೇ ಅಶಿಕ್ಷಿತ ಮನಸ್ಸು ದುರ್ಗತಿಯನ್ನು, ದುಃಖವನ್ನು, ನಷ್ಟವನ್ನು ಉಂಟುಮಾಡುತ್ತದೆ. ನಿಯಂತ್ರಿತ ಮನಸ್ಸಿನಿಂದ, ರಕ್ಷಿತ ಮನಸ್ಸಿನಿಂದ, ಜಾಗೃತ ಮನಸ್ಸಿನಿಂದ ಮಹತ್ ಲಾಭವು ಲಭಿಸುತ್ತದೆ, ಪರಮಸುಖವು ಸಿಗುತ್ತದೆ”. 84
4. “ಮನಸ್ಸಿನಿಂದಲೇ ಜಗತ್ತು ಮಾರ್ಗದರ್ಶಿತವಾಗಿದೆ. ಮನಸ್ಸಿನಿಂದಲೇ ಜಗತ್ತು ಚಿತ್ರಿತವಾಗಿದೆ. ಹಾಗು ಸರ್ವ ಮಾನವರು ಮನಸ್ಸಿನ ಸರ್ವಶಕ್ತತೆಯನ್ನು ಪಡೆದಿದ್ದಾರೆ”. 85
5. “ಮನಸ್ಸೇ ಎಲ್ಲಾ ಮಾನಸಿಕ ಸ್ಥಿತಿಗಳ ಮೂಲ, ಮನಸ್ಸೇ ಅವುಗಳ ನಾಯಕ, ಮನಸ್ಸಿನಿಂದಲೇ ಅವುಗಳ ನಿರ್ಮಿತಿ. ಒಬ್ಬನು ಪ್ರಸನ್ನವಾದ ಮನಸ್ಸಿನಿಂದ ಮಾತನಾಡಿದರೆ ಅಥವಾ ಕಾರ್ಯ ಮಾಡಿದರೆ ಎಂದಿಗೂ ಬಿಡದೆ ಹಿಂಬಾಲಿಸುವ ನೆರಳಿನ ಹಾಗೆ ಸುಖವು ಆತನನ್ನು ಹಿಂಬಾಲಿಸುತ್ತದೆ. 86

## 17. ಶಾಂತಿ


1. “ಭೂತಕಾಲದ ಯೋಚನೆಗಳೆಲ್ಲವನ್ನು ಬಿಟ್ಟುಬಿಡಿ. ಭವಿಷ್ಯದ ಬಗ್ಗೆ ಚಿಂತೆ ಬೇಡ. ವರ್ತಮಾನದ ಸ್ಥಿತಿಗತಿಗಳಿಗೆ ಅಂಟಬೇಡಿ. ಆಗ ಮಾತ್ರ ನೀವು ಶಾಂತಿಯನ್ನು ಪ್ರಾಪ್ತಿಗೊಳಿಸುವಿರಿ”. 87
2. “ಶಾಂತಿ ಸಿಗುವುದು ಆಂತರ್ಯದಲ್ಲಿ, ಬಾಹ್ಯದಲ್ಲಿ ಅದನ್ನು ಅರಸದಿರಿ”. 88
3. “ನಿಮಗೆ ದೊರೆಯುವುದರಲ್ಲಿ ಅತಿಯಾಗಿ ನಿರೀಕ್ಷಿಸದಿರಿ ಅಥವಾ ಪರರ ಬಗ್ಗೆ ಮತ್ಸರ ಬೇಡ, ಯಾರು ಪರರ ಗಳಿಕೆಯ ಬಗ್ಗೆ ಅಸೂಯೆ ಪಡುವರೋ ಅವರು ಚಿತ್ತಶಾಂತಿಯನ್ನು ಪಡೆಯಲಾರರು”. 89
4. “ನಿನ್ನ ಆಹಾರ ಮಿತವಾಗಿರಲಿ, ನಿನ್ನ ಅವಶ್ಯಕತೆಗಳು ಅಲ್ಪವಾಗಿರಲಿ, ನೀನು ಸರಳಜೀವಿಯಾಗಿರು, ಹಾಗೆಯೇ ನಮ್ರನಾಗಿ ಜೀವಿಸುತ್ತಾ ಬಯಕೆರಹಿತನಾಗಿರು, ಆಗ ನೀನು ಶಾಂತಿ ಪಡೆವೆ”. 90
5. “ಮುನಿಯು ಸರ್ವದಾ ಅನಾಸಕ್ತರಾಗುತ್ತಾರೆ. ಆ ಮಹಾ ವ್ಯಕ್ತಿಯು ಯಾರಿಗೂ ಪ್ರಿಯರನ್ನಾಗಿ ಭಾವಿಸುವುದಿಲ್ಲ. ಅಪ್ರಿಯರನ್ನಾಗಿಯು ಸಹಾ, ಹೇಗೆ ಪದ್ಮ ಎಲೆಯ ಮೇಲೆ ಜಲವು ಇರುವುದಿಲ್ಲವೋ, ಅದೇರೀತಿ ವಿಲಾಪಿಗಳು ಮತ್ತು ಲೋಭಿಗಳು ಆತನಿಗೆ ಪ್ರಭಾವಿತ ಮಾಡಲಾರರು”. 91
6. “ಆತನಿಗೆ ಲೋಕದಲ್ಲಿ ತನ್ನದು ಎನ್ನುವಂತಹುದು ಏನೂ ಇಲ್ಲ. ಯಾವ ಕೊರತೆಗಾಗಿಯು ಪಶ್ಚಾತ್ತಾಪಪಡುವುದಿಲ್ಲ ಮತ್ತು ರಾಗಾದಿಗಳ ವಶಕ್ಕೆ ಬೀಳುವುದಿಲ್ಲ. ಆತನೇ ಶಾಂತನೆಂದು ಕರೆಯಲ್ಪಡುತ್ತಾನೆ”. 92


## 18. ಆನಂದ


1. “ಬಹಳ ವಿಧದಿಂದ ಅಭ್ಯಾಸ ಮಾಡಿದ ಧಮ್ಮಪಾಲನೆಯೆ ಆನಂದದಾಯಕ”. 93
2. “ದ್ವೇಷವುಳ್ಳವರ ನಡುವೆ ನಾವು ದ್ವೇಷರಹಿತರಾಗಿರುವುದು ನಿಜಕ್ಕೂ ಆನಂದಕರ”. 94
3. “ಭವ್ಯತೆಯಾಗಲಿ ಅಥವಾ ಶ್ರೇಷ್ಠ ಆನಂದವಾಗಲಿ ಇವೆಲ್ಲವೂ ಪರಿಪೂರ್ಣ ಜ್ಞಾನದ ಹಾಗು ಪರಿಪೂರ್ಣ ಕರುಣೆಯ ವ್ಯಕ್ತತೆಯಾಗಿದೆ”. 95
4. “ಆನಂದವು 5 ವಿಧದ್ದಾಗಿರುತ್ತದೆ : ರೋಮಾಂಚಕರ ಆನಂದ, ಕ್ಷಣಿಕ ಆನಂದ, ಪ್ರವಹಿಸುವ ಆನಂದ, ವೇಗದ ಆನಂದ ಮತ್ತು ಉದ್ವೇಗ ಆನಂದ”. 96

## ೧೯. ಸುಖ

1. "ಯಾರು ತನ್ನ ಸುಖಕ್ಕಾಗಿ, ಸುಖ ಬಯಸುವ ಪರಜೀವಿಗಳಿಗೆ ದಂಡಶಸ್ತ್ರದಿಂದ ಹಿಂಸಿಸುವನೋ ಅವನು ಮುಂದೆ ಸುಖವನ್ನು ಪಡೆಯುವುದಿಲ್ಲ". 97
2. "ಮುಪ್ಪಿನವರೆಗೆ ಶೀಲವು ಸುಖ, ಶ್ರದ್ಧಾಯುತ ಪ್ರಯತ್ನಶೀಲತೆ ಸುಖ, ಜ್ಞಾನ ಪ್ರಾಪ್ತಿಯು ಸುಖ ಹಾಗು ಪಾಪ ಮಾಡದೆ ಇರುವುದು ಸುಖ". 98
3. "ಸುಖವು ನಮ್ಮ ಬಯಕೆಗಳನ್ನು ಅರ್ಥ ಮಾಡಿಕೊಳ್ಳುವುದರಲ್ಲಿದೆ. ಹಾಗು ಸರಿಯಾದ ಇಚ್ಛೆಗಳ ಆಯ್ಕೆಗಳಲ್ಲಿದೆ. 99
4. "ಸುಖದ ರಹಸ್ಯವು ಪ್ರಾಪಂಚಿಕ ಬಂಧನಗಳಿಂದ ಮನಸ್ಸನ್ನು ಬಿಡುಗಡೆ ಮಾಡುವುದರಲ್ಲಿದೆ". 100
5. "ಸುಖವು 5 ವಿಧದ್ದಾಗಿರುತ್ತದೆ. ಕಾರಣಿಯ ಸುಖ, ಮೂಲ ಸುಖ, ಏಕಾಂತತೆಯ ಸುಖ, ಅಕಲುಷಿತ ಸುಖ ಮತ್ತು ಸಮಾಧಿ ಸುಖ". 101
6. ಸಾವಿರಾರು ದೀಪಗಳನ್ನು ಒಂದು ದೀಪದಿಂದ ಬೆಳಗಿಸಬಹುದು, ಅದರಿಂದಾಗಿ ದೀಪವು ಚಿಕ್ಕದೇನೂ ಆಗುವುದಿಲ್ಲ. ಅದರಂತೆಯೇ ಸುಖವನ್ನು ಹಂಚಿದರೆ ಅದು ಕಡಿಮೆಯಯೂ ಆಗುವುದಿಲ್ಲ". 102

## ೨೦. ಶೀಲ

1. "ಕ್ರೋಧವನ್ನು ಮೈತ್ರಿಯಿಂದ ಜಯಿಸು, ಕೆಟ್ಟದ್ದನ್ನು ಒಳ್ಳೆಯತನದಿಂದ ಜಯಿಸು, ಲೋಭಿಯನ್ನು ದಾನದಿಂದ ಜಯಿಸು ಮತ್ತು ಸುಳ್ಳನ್ನು ಸತ್ಯದಿಂದ ಜಯಿಸು". 103
2. "ಆತನು ತನ್ನ ಮಾರ್ಗಗಳಲ್ಲಿ ಸಹೃದಯವಂತನಾಗಲಿ ಮತ್ತು ಶೀಲದಲ್ಲಿ ಅತ್ಯಂತ ಶುದ್ಧನಾಗಲಿ, ಅನಂತರದಲ್ಲಿ ಸಿಗುವ ಆನಂದ ದಿಂದ ಆತನು ದುಃಖವನ್ನು ಅಂತ್ಯಗೊಳಿಸುತ್ತಾನೆ". 104
3. "ಸಹನೆ, ಕ್ಷಮೆ ಮತ್ತು ಪ್ರಜ್ಞಾ ಇವು ಮಾನವ ಅಭಿವೃದ್ಧಿ ಗೊಳಿಸಬೇಕಾದ ಶ್ರೇಷ್ಠ ಶೀಲಗಳಾಗಿವೆ. 105
4. "ಶೀಲದಲ್ಲಿ ಪರಿಪೂರ್ಣತೆಯನ್ನು ಸಾಧಿಸುವವನು ಎಂದೂ ಕೆಳಗೆ ಬೀಳುವುದಿಲ್ಲ. ಶ್ರೇಷ್ಠವಾದ ಪ್ರಜ್ಞಾವನ್ನು ಹೊಂದಿ ಹುಟ್ಟುಗಳ ನಾಶವನ್ನು ಕಂಡಿರುತ್ತಾನೆ. ಆ ಮುನಿಯು ಅಂತಿಮ ದೇಹಧಾರಿಯು ಮಾರನನ್ನು ಗೆದ್ದ ಆತನು ಜರೆಯನ್ನು ಗೆದ್ದಿರುತ್ತಾನೆ". 106

## 21. ಪ್ರಜ್ಞಾ

1. "ಶ್ರೇಷ್ಠ (ಅಲೌಕಿಕ) ವಿಷಯಗಳ ಅರಿವಿಗೆ ಪ್ರಜ್ಞಾ ಎನ್ನುತ್ತಾರೆ. ಮಾನವನ ಲೌಕಿಕ ವ್ಯವಹಾರಗಳ ಅರಿವಿಗೆ ಜ್ಞಾನ ಎನ್ನುತ್ತಾರೆ". 107
2. "ಮೂರು ಬಗೆಯ ತರಬೇತಿಗಳಿವೆ ಅವೆಂದರೆ : ಶ್ರೇಷ್ಠ ಶೀಲ, ಶ್ರೇಷ್ಠ ಸಮಾಧಿ ಮತ್ತು ಶ್ರೇಷ್ಠ ಪ್ರಜ್ಞಾ". 108
3. "ಯಾರ ಮನಸ್ಸು ಅಸ್ಥಿರವೋ, ಯಾರು ಜ್ಞಾನವನ್ನು ಅರಿಯಲಾರನೋ, ಯಾರ ಶ್ರದ್ಧೆಯು ಅಲುಗಾಡುತ್ತಿದೆಯೋ ಅಂತಹವನ ಪ್ರಜ್ಞೆಯು ಪೂರ್ಣವಾಗಲಾರದು". 109
4. "ಪ್ರಜ್ಞಾ ಜೀವಿಯ ಜೀವನವೇ ಶ್ರೇಷ್ಠ". 110
5. "ನಿಬ್ಬಾಣ ಪ್ರಾಪ್ತಿಗಾಗಿ ಅರಹಂತರ ಧಮ್ಮದಲ್ಲಿ ಶ್ರದ್ಧೆಯಿಟ್ಟು ಅಪ್ರಮಾದಿ ಹಾಗು ಚತುರ ವ್ಯಕ್ತಿ ಶ್ರದ್ಧಾಪೂರ್ವಕವಾಗಿ ಧಮ್ಮವನ್ನು ಕೇಳಿ ಪ್ರಜ್ಞಾ ಗಳಿಸುತ್ತಾನೆ". 111
6. "ಪ್ರಜ್ಞಾವು ಮೂರು ವಿಧ : 1. ಕೇಳಿ ಅಥವಾ ಓದಿ ಪಡೆದ ಜ್ಞಾನ 2. ಚಿಂತನೆಯಿಂದ ಗಳಿಸಿದ ಜ್ಞಾನ 3. ಸಾಕ್ಷಾತ್ಕಾರ". 112

## 22. ಕರುಣೆ

1. "ಸರ್ವಜೀವಿಗಳು ಹಿಂಸೆಗೆ (ಶಿಕ್ಷೆಗೆ) ಕಂಪಿಸುತ್ತದೆ. ಎಲ್ಲಾ ಜೀವಿಗಳೂ ಮರಣಕ್ಕೆ ಹೆದರುತ್ತದೆ. ಸರ್ವರಿಗೂ ಜೀವವು ಪ್ರಿಯವಾಗಿರುತ್ತದೆ. ಆದ್ದರಿಂದ ತನ್ನಂತೆ ಪರರು ಎಂದು ಭಾವಿಸಿ ಒಬ್ಬನು ಕೊಲ್ಲದಿರಲಿ ಹಾಗು ಕೊಲ್ಲಿಸದಿರಲಿ". 113
2. "ಯಾರು ಯಾರಿಗೂ ವಂಚಿಸದಿರಲಿ, ಪರರಿಗೆ ಕೀಳಾಗಿ ಕಾಣದಿರಲಿ. ಕೋಪದಿಂದಾಗಲಿ, ದ್ವೇಷದಿಂದಾಗಲಿ, ಪರರಿಗೆ ಅಹಿತವನ್ನು (ದುಃಖ) ಬಯಸದಿರಲಿ". 114
3. "ಹೇಗೆ ತಾಯಿಯು ತನ್ನ ಏಕಮಾತ್ರ ಮಗುವನ್ನು ತನ್ನ ಜೀವವನ್ನೇ ಲೆಕ್ಕಿಸದೆ ರಕ್ಷಿಸುವಳೋ ಅದೇ ರೀತಿಯಾದ ಅಸೀಮಾ ಹೃದಯದ ಕರುಣೆಯನ್ನು ಎಲ್ಲಾ ಜೀವಿಗಳ ಬಗೆಗೆ ಹೊಂದಲಿ". 115
4. "ಕ್ಷಮೆಯಿಂದ, ಸಹನೆಯಿಂದ, ಅಹಿಂಸೆಯಿಂದ, ಮೈತ್ರಿಯಿಂದ ಮತ್ತು ಕರುಣೆಯಿಂದ ಒಬ್ಬನು ತನ್ನನ್ನು ರಕ್ಷಿಸುತ್ತಾ ಪರರನ್ನು ರಕ್ಷಿಸುತ್ತಾನೆ". 116
5. "ಬೆಂಕಿಯಾಗಲಿ, ನೀರಾಗಲಿ, ಗಾಳಿಯಾಗಲಿ, ಪುಣ್ಯಕಾರ್ಯಗಳ ಹಾರೈಕೆಯನ್ನು ನಾಶ ಮಾಡಲಾರದು ಮತ್ತು ಹಾರೈಕೆಯು ಇಡೀ ಜಗತ್ತನ್ನು ಜ್ಞಾನೋದಯ ಮಾಡಲು ಸಹಾಯ ಮಾಡುತ್ತದೆ". 117

## 23. ಮೈತ್ರಿಯ ಹಾರೈಕೆ

1. “ಸರ್ವ ಜೀವಿಗಳು ಸುಖಿಯಾಗಿರಲಿ ಹಾಗು ಕ್ಷೇಮವಾಗಿರಲಿ. ಅವುಗಳ ಮನಸ್ಸು ಸುಶಾಂತಿಯಿಂದಿರಲಿ” ಎಂದು ಒಬ್ಬನ ಮನಸ್ಸು ಅಸೀಮವಾದ, ಮೈತ್ರಿಯಿಂದ ಇಡೀ ವಿಶ್ವವನ್ನು ಪ್ರಸರಿಸಿ ಆವರಿಸಲಿ. ಮೇಲೆ, ಕೆಳಗೆ, ಸುತ್ತಲೂ ದ್ವೇಷವಿಲ್ಲದೆ (ಅಪ್ರಿಯ ಮನೋಭಾವವಿಲ್ಲದೆ) ಹಾರೈಸಲಿ”. 118

2. “ಯಾವೆಲ್ಲಾ ಜೀವಿಗಳು ಕಾಣುವುವೋ ಮತ್ತು ಯಾವೆಲ್ಲಾ ಅದೃಶ್ಯವಾಗಿವೆಯೋ, ಯಾವೆಲ್ಲಾ ಜೀವಿಗಳು ಹತ್ತಿರದಲ್ಲಿ ವಿಹರಿಸುತ್ತಿವೆಯೋ ಮತ್ತು ಯಾವುವು ದೂರ ವಾಸಿಸುತ್ತಿದೆಯೋ ಯಾವುವು ಜನ್ಮ ತಾಳದೆಯೋ ಅಥವಾ ಮುಂದೆ ಜನ್ಮ ತಾಳುವುವೋ ಅವೆಲ್ಲಾ ಜೀವಿಗಳು ಸದಾ ಸುಖಿಯಾಗಿರಲಿ”.

3. “ಒಬ್ಬನು ನಿಂತಿರಲಿ, ನಡೆಯುತಿರಲಿ, ಕುಳಿತೇ ಇರಲಿ, ಅಥವಾ ಮಲಗಿರಲಿ ಎಲ್ಲಿಯವರೆಗೆ ಒಬ್ಬನು ಎಚ್ಚರವಾಗಿಹನೋ, ಆಗೆಲ್ಲಾ ಆತನು ಮೈತ್ರಿಭರಿತ ಚಿತ್ತದಿಂದ ತುಂಬಿರುವವನಾಗಲಿ”. 120

4. “ಎಲ್ಲಾ ಜೀವಿಗಳೂ, ಎಲ್ಲಾ ಪ್ರಾಣಿಗಳೂ, ಎಲ್ಲಾ ಮಾನವರು, ದ್ವೇಷರಹಿತರಾಗಲಿ, ರೋಗರಹಿತರಾಗಲಿ, ದುಃಖರಹಿತರಾಗಲಿ ಮತ್ತು ಅವರು ತಮ್ಮನ್ನು ತಾವು ರಕ್ಷಿಸಿಕೊಂಡು ಸುಖಿಯಾಗಿರಲಿ”.

5. “ದ್ವೇಷವು ದ್ವೇಷದಿಂದ ಎಂದಿಗೂ ನಾಶವಾಗುವುದಿಲ್ಲ. ಆ ದ್ವೇಷ (ಮೈತ್ರಿ)ದಿಂದ ಮಾತ್ರ ಶಾಂತವಾಗುತ್ತದೆ. ಇದೇ ಸನಾತನ ಧಮ್ಮ (ನಿಯಮ)ವಾಗಿದೆ”. 122

6. “ಪ್ರತಿ ಜೀವಿಯ ಬಗ್ಗೆ ಯಾವುದೇ ಪಕ್ಷಪಾತವಿಲ್ಲದೆ ಮೈತ್ರಿಯನ್ನು ಪ್ರಸರಿಸಿರಿ. ಎಲ್ಲಿಯವರೆಗೆ ನಿಸ್ವಾರ್ಥತೆಯ ಪ್ರೀತಿಯು ಸ್ಥಾಪಿತವಾಗುವುದಿಲ್ಲವೋ ಮಾನವ ಶಾಂತಿಯನ್ನು ಕಾಣಲಾರ”. 123

## 24. ಸಮಚಿತ್ತತೆ

1. “ಯಾರ ಮನಸ್ಸು ಲೋಕದ ಏರುಪೇರುಗಳಲ್ಲಿ (ಸುಖ ದುಃಖಗಳಲ್ಲಿ) ಕಂಪಿಸುವುದಿಲ್ಲವೋ, ಶೋಕರಹಿತವೋ, ಕಲ್ಮಶರಹಿತವೋ ಮತ್ತು ಕ್ಷೇಮ (ಶಾಂತ)ವಾಗಿದೆಯೋ ಅದೇ ಮಂಗಳಗಳಲ್ಲಿ ಉತ್ತಮವಾದುದು”. 124

2. “ಹೇಗೆ ಹೆಬ್ಬಂಡೆಯು ಬೀಸುವ ಗಾಳಿಗೂ ನಿಶ್ಚಲವಾಗಿದೆಯೋ, ಹಾಗೆಯೇ ಜ್ಞಾನಿಗಳು ಸ್ತುತಿನಿಂದೆಗಳಿಗೆ ವಿಚಲಿತರಾಗುವುದಿಲ್ಲ.

3. “ಸುಖ ಹಾಗು ದುಃಖಗಳನ್ನು ತ್ಯಾಗ ಮಾಡಿ, ಮೊದಲೇ ಸೋಮನಸ್ಸು ಮತ್ತು ದೊಮನಸ್ಸುಗಳನ್ನು ದೂರಮಾಡಿ, ವಿಶುದ್ಧವಾದ ಸಮಚಿತ್ತತೆಯ ಶ್ರೇಷ್ಠ ಸಮಾಧಿಯನ್ನು ಪ್ರಾಪ್ತಿಮಾಡಿ ಖಡ್ಗಮೃಗದ ರೀತಿ ಏಕಾಂಗಿಯಾಗಿ ಸಂಚರಿಸು”. 126

4. “ಯಾರು ಶರೀರ ತ್ಯಾಗದ ಮುಂಚೆಯೇ ತೃಷ್ಣಾರಹಿತನೋ ಮತ್ತು ಭೂತ ಹಾಗು ಭವಿಷ್ಯದ ಆಶ್ರಿತನಲ್ಲವೋ, ಯಾರು ವರ್ತಮಾನದಲ್ಲೂ ಆಶ್ರಿತನಲ್ಲವೋ ಅವನಿಗಾಗಿ ಎಲ್ಲಿಯೂ ಆಸಕ್ತಿಯಿಲ್ಲ. 127

5. “ಯಾರು ಭವಿಷ್ಯದ ವಿಷಯದಲ್ಲಿ ಆಸಕ್ತಿ ಇಡುವುದಿಲ್ಲವೋ ಮತ್ತು ಭೂತಕಾಲದ ಬಗ್ಗೆ ಪಶ್ಚಾತ್ತಾಪ ಪಡುವುದಿಲ್ಲವೋ, ಯಾರು ಸ್ಪರ್ಶಗಳಲ್ಲಿ ವಿವೇಕದರ್ಶಿಯೋ ಆತನು ದೃಷ್ಟಿಗಳ ಜಾಲದಲ್ಲಿ ಬೀಳುವುದಿಲ್ಲ. 128

6. “ಯಾರು ಸಮಭಾವ ಚಿತ್ತನೋ, ಸದಾ ಜಾಗರೂಕನೋ, ಲೋಕದಲ್ಲಿ ಯಾರಿಗೂ ಸಮಾನವಾಗಲಿ, ಶ್ರೇಷ್ಠವೆಂದಾಗಲಿ ಅಳೆಯುವುದಿಲ್ಲವೋ ಆತನಲ್ಲಿ ರಾಗವಿರುವುದಿಲ್ಲ”. 129

## 25. ಕ್ಷಾಂತಿ (ಸಹನೆ)

1. "ಪರರು ನಿನ್ನ ಬಗ್ಗೆ ವಿರುದ್ಧವಾಗಿ ಮಾತನಾಡಿದರೆ ಅವರ ಬಗ್ಗೆ ದ್ವೇಷದ ಯೋಚನೆ ಮಾಡಿದರೆ ನಿನ್ನ ಮಾನಸಿಕ ಬೆಳವಣಿಗೆ ಅಡ್ಡಿಯಾಗುತ್ತದೆ. ಅಲ್ಲದೆ ನೀನು ಅವರ ಮಾತು ಎಷ್ಟು ಸತ್ಯವೋ, ಎಷ್ಟು ಮಿಥ್ಯವೋ ಎಂದು ನಿರ್ಧರಿಸುವ ಸಾಮರ್ಥ್ಯ ಕಳೆದುಕೊಳ್ಳುವೆ". 130
2. "ಇದು ಸನಾತನ ಹೇಳಿಕೆ, ಇಂದಿನ ವಿಷಯವನ್ನಷ್ಟೇ ಅಲ್ಲ ಜನರು ಮೌನಿಗೂ ನಿಂದಿಸುತ್ತಾರೆ, ವಾಚಾಳಿಗೂ ನಿಂದಿಸುತ್ತಾರೆ ಹಾಗೆಯೇ ಮಿತಭಾಷಿಗೂ ನಿಂದಿಸುತ್ತಾರೆ. ಜಗತ್ತಿನಲ್ಲಿ ಅನಿಂದಿತರೂ ಯಾರೂ ಇಲ್ಲ". 131
3. "ಯಾರು ಹಗೆತನದ ಸುಳಿವಿಲ್ಲದೆ, ಕೆಟ್ಟ ಮಾತುಗಳನ್ನು, ಪೆಟ್ಟುಗಳನ್ನು ಮತ್ತು ಶಿಕ್ಷೆಯನ್ನು ಸಹಿಸುವನೋ, ಯಾರ ನಿಜವಾದ ಶಕ್ತಿಯು ಸಹನೆಯೇ ಆಗಿದೆಯೋ ಅವನನ್ನು ನಾನು ಬ್ರಾಹ್ಮಣ ಎನ್ನುತ್ತೇನೆ. 132
4. "ಸಂಗ್ರಾಮದಲ್ಲಿ ಆನೆಯು ಬಿಲ್ಲಿನಿಂದ ಬಂದ ಬಾಣಗಳನ್ನು ಸಹಿಸುವಂತೆ ನಾನು ಕೆಟ್ಟ ಮಾತುಗಳನ್ನು ಸಹಿಸುತ್ತೇನೆ, ದುಶ್ಶೀಲರಾದವರು ಅನೇಕರಿದ್ದಾರೆ". 133
5. "ಸಹನೆಯೇ ತಪಸ್ಸುಗಳಲ್ಲೆಲ್ಲಾ ಉತ್ತಮವಾದುದು". 134

## 26. ಸಂತೃಪ್ತಿ

1. "ಸಂತೃಪ್ತಿಯೇ ಪರಮ ಐಶ್ವರ್ಯ..." 134
2. "ನೀನು ಅನರ್ಹನಾಗಿರುವ ಯಶಸ್ಸಿನ ಲಾಭವನ್ನು ಪಡೆಯಬೇಡ". 135
3. "ಚಿನ್ನದ ನಾಣ್ಯಗಳ ಮಳೆಗರೆದರೂ, ಭೋಗಾಭಿಲಾಷೆಯು ತೃಪ್ತಿ ಹೊಂದುವುದಿಲ್ಲ. ಈ ಇಂದ್ರಿಯಗಳ ಸ್ವಾದ ಅಲ್ಪ, ಕ್ಷಣಿಕ. ಆದರೆ ದುಃಖ ಅಪಾರ". 136
4. "ಯಾರು ದಪ್ಪ ಹೊಟ್ಟೆಯವನಲ್ಲವೋ, ಅಲ್ಪ ಮಾತ್ರದಿಂದಲೇ ಭೋಜನ ಮಾಡುವನೋ, ಅಲ್ಪೆಚ್ಛು ಮತ್ತು ಲೋಭರಹಿತ ನಾಗಿರುವನೋ ಅಂತಹ ಇಚ್ಛಾರಹಿತ (ಸಂತುಷ್ಟ) ವ್ಯಕ್ತಿ ಶಾಂತನಾಗಿರುವನು". 137
5. "ತನಗಾಗಲಿ ಅಥವಾ ಪರರಿಗಾಗಲಿ ಅಥವಾ ಐಶ್ವರ್ಯಕ್ಕಾಗಲಿ, ಸಾಮ್ರಾಜ್ಯಕ್ಕಾಗಲಿ ಅಥವಾ ಮಕ್ಕಳಿಗಾಗಲಿ ತಪ್ಪನ್ನು (ಪಾಪವನ್ನು) ಮಾಡಬಾರದು. ಅಂತಹವ ಮಾತ್ರ ಶೀಲವಂತ, ಜ್ಞಾನಿ ಮತ್ತು ಧಾರ್ಮಿಕ. 138

## 27. ದಾನ

1. "ಧಮ್ಮ ದಾನವು ಸರ್ವದಾನಗಳಗಿಂತ ಶ್ರೇಷ್ಠ". 139
2. "ಮೂರು ಬಗೆಯ ದಾನಗಳವೆ : ಲೌಕಿಕ ವಸ್ತುಗಳ ದಾನ, ಅಭಯ ದಾನ ಮತ್ತು ಧಮ್ಮ ದಾನ". 140
3. "ಕಳೆ ಹೊಲಕ್ಕೆ ಮುಳುವು, ರಾಗವು ಮಾನವ ಕುಲಕ್ಕೆ ಮುಳುವು. ಆದ್ದರಿಂದ ರಾಗರಹಿತರಿಗೆ ನೀಡಿದ್ದು ಮಹತ್ಫಲವನ್ನು ನೀಡುತ್ತದೆ". 141
4. "ದಾನ ನೀಡುವಾಗ ಫಲಾಪೇಕ್ಷೆ ಇಟ್ಟು ದಾನ ಮಾಡುತ್ತಾರೆ. ಆದರೆ ಯಾರು ಫಲಾಪೇಕ್ಷೆರಹಿತರಾಗಿ ದಾನ ನೀಡುವರೋ ಅವರ ಪುಣ್ಯವನ್ನು ಅಳೆಯಲಾಗುವುದಿಲ್ಲ. 142
5. "ದಾನದಿಂದ ಮಿತ್ರರನ್ನೆಲ್ಲಾ ಸೇರಿಸಿ ಇಡಬಹುದು". 143
6. ದಾನವನ್ನು ಮಾಡು ಮತ್ತು ದಾನ ನೀಡುವ ಸಮಯದಲ್ಲಿ ಸರ್ವರ ಬಗ್ಗೆ ಮನಸ್ಸನ್ನು ಪ್ರಸನ್ನವಾಗಿಡು, ದಾನವೇ ದಾಯಕನ ಅವಲಂಬನೆಯಾಗಿದೆ". 144
7. "ದಾನವನ್ನು ಪಡೆದವನು ಅದನ್ನು ಮರೆಯಬಾರದು, ದಾನವನ್ನು ನೀಡಿದವನು ಅದನ್ನು ಸ್ಮರಿಸಬಾರದು". 145

## 28. ತ್ಯಾಗ

1. "ಸುಖಗಳಲ್ಲಿ ಇಂದ್ರಿಯಗಳ ಸುಖ ಮತ್ತು ತ್ಯಾಗದ ಸುಖ ಎಂದು ಎರಡು ಬಗೆಯಿದೆ. ಇದರಲ್ಲಿ ತ್ಯಾಗದ ಸುಖವು ಇಂದ್ರಿಯ ಸುಖಕ್ಕಿಂತ ಮಿಗಿಲಾದುದು. 146
2. "ಲೋಕದ ಕಾಮಭೋಗಗಳ ದುಷ್ಪರಿಣಾಮಗಳನ್ನು ಹಾಗು ತ್ಯಾಗದ ಕಲ್ಯಾಣವನ್ನು (ಮಹತ್ತತೆ) ನೋಡಿ ನಾನು ತಪ ಮಾಡಲು ಹೊರಟಿದ್ದೇನೆ. ಇದರಲ್ಲೇ ನನ್ನ ಮನ ಲೀನವಾಗಿದೆ". 147
3. ಆತನಿಗೆ ಪುತ್ರರು, ಪಶುಗಳು, ಹೊಲಗಳು, ಅಥವಾ ಧನದ ಆಸಕ್ತಿ ಇಲ್ಲವಾಗಿದೆ ಮತ್ತು ಆತನಿಗೆ ತನ್ನ ಅಥವಾ ಪರರು ಎಂಬ ಬೇದಭಾವವು ಇಲ್ಲವಾಗಿದೆ. 148
4. ಕಾಮಭೋಗಗಳ ಅಪೇಕ್ಷೆ ಪಡದ ಆ ವ್ಯಕ್ತಿಗೆ ಉಪಶಾಂತ ಎಂದು ಹೇಳುತ್ತೇನೆ. ಆತನಿಗೆ ಯಾವ ಸಂಸಾರಿಕ ಬಂಧನವೂ ಇಲ್ಲ. ಆತನು ತೃಷ್ಣೆಯನ್ನು ದಾಟಿ ಹೋಗಿದ್ದಾನೆ. 149
5. ರಾಗ ಹಾಗು ಜಿಪುಣತನದಿಂದ ರಹಿತನಾದ ಆ ಮುನಿಯು ತನ್ನನ್ನು ಶ್ರೇಷ್ಠ, ಸಮಾನ ಅಥವಾ ನಿಮ್ನ ಜನಗಳಗೆ ಹೋಲಿಸಿಕೊಳ್ಳುವುದಿಲ್ಲ. ಆತನು ಪುನರ್ಜನ್ಮದಲ್ಲಿ ಬೀಳುವುದಿಲ್ಲ. ಏಕೆಂದರೆ ಆತನು ಜನ್ಮದಿಂದ ಮೀರಿ ಹೋಗಿದ್ದಾನೆ. 150

## 29. ಪ್ರಯತ್ನಶೀಲತೆ (ವೀರ್ಯ)

1. "ಯಾರು ಪರಿಶ್ರಮಿಯೋ, ಜಾಗೃತನೊ, ಶೀಲವಂತನೊ, ವಿವೇಚಿಯೋ, ಸಂಯಮಿಯೋ, ಯೋಗ್ಯ ಜೀವನ ನಡೆಸುವವನೋ ಅಂತಹ ಶ್ರಮಶಾಲಿಯ ಯಶಸ್ಸು ಅಭಿವೃದ್ಧಿಯಾಗುತ್ತದೆ". 151
2. "ಭಿಕ್ಷುಗಳೇ ಅಕುಶಲಗಳ ನಾಶಕ್ಕೆ ಮತ್ತು ಕುಶಲಸ್ಥಿತಿಗಳ ಉದಯಕ್ಕೆ ಸಹಾಯಕವಾಗುವಂತಹ ಏಕೈಕ ಅಂಶವೆಂದರೆ ಪ್ರಯತ್ನಶೀಲತೆ ಆಗಿದೆ". 152
3. "ನಿಬ್ಬಾಣ ಬಯಸುವಂತಹ ವ್ಯಕ್ತಿ ನಿದ್ರೆ, ಜಡತೆ ಹಾಗು ಆಲಸ್ಯವನ್ನು ಜಯಿಸಲಿ. ಅಜಾಗರೂಕನಾಗದಿರಲಿ, ಅಭಿಮಾನದಲ್ಲಿ ಬೀಳದಿರಲಿ. 153
4. ನೂರು ವರ್ಷದ ಸೋಮಾರಿತನದ ಮತ್ತು ಜಡತೆಯ ಜೀವನಕ್ಕಿಂತ ಒಂದುದಿನದ ಅಪಾರ ಪರಿಶ್ರಮದ ಉಪಯುಕ್ತ ದಿನ ಉತ್ತಮವಾದುದು. 154
5. "ಕೇವಲ ನಾಲ್ಕು ವಾಕ್ಯಗಳ ಗಾಥೆಯೇ ಇರಲಿ, ಸಾಧಕನು ಅದರಂತೆಯೇ ಜೀವಿಸಿದರೆ (ಧಮ್ಮದಂತೆ) ಆತನಿಗೆ ಆಳವಾಗಿ ವಿದ್ವತ್ ಪಡೆದವನು ಮತ್ತು ಧಮ್ಮವನ್ನು ಯಥಾವತ್ತಾಗಿ ಅರಿತವನು ಎನ್ನುತ್ತೇನೆ". 155

## 30. ಸತ್ಯ

1. "ನೀವು ಸತ್ಯವನ್ನು ಯಾವುದೇ ಧರ್ಮದಲ್ಲಿ ಹುಡುಕಿದಾಗ ಸಿಕ್ಕರೆ ಅದನ್ನು ಸ್ವೀಕರಿಸಿರಿ". 156
2. "ಸತ್ಯವೇ ರಸಗಳಲ್ಲಿ ಸ್ವಾದಿಷ್ಟಕರ". 157
3. "ಸತ್ಯದಿಂದ ಯಶಸ್ಸನ್ನು ಪ್ರಾಪ್ತಿಮಾಡುತ್ತಾನೆ". 158
4. "ಸತ್ಯವೇ ಅಮೃತವಾಣಿಯಾಗಿದೆ. ಇದು ಸನಾತನ ನಿಯಮವಾಗಿದೆ. ಇದನ್ನು ಸತ್ಯ, ಅರ್ಥ ಮತ್ತು ಧಮ್ಮದಿಂದ ಪ್ರತಿಷ್ಠಿತವಾದ ಸಂತರು ಹೇಳಿದ್ದಾರೆ". 159
5. "ಸತ್ಯಗಳಲೆಲ್ಲಾ ಚತುರಾರ್ಯ ಸತ್ಯಗಳೇ ಶ್ರೇಷ್ಠವಾದುದು".160
6. ಮೂರನ್ನು ಅಡಗಿಸಲಾರಿರಿ : ಸೂರ್ಯ, ಚಂದ್ರ ಮತ್ತು ಸತ್ಯ. 161
7. "ಸತ್ಯ ಮಾತು ಕೊಟ್ಟ ನಂತರ ಅದನ್ನು ಪೂರೈಸಲೇಬೇಕು. ನೀವು ಮಾಡಲಾಗದ ವಚನ ಎಂದಿಗೂ ನೀಡಬೇಡಿ". 162

## 31. ದೃಢನಿರ್ಧಾರ

1. "ಯಾರು ದೃಢತೆಯಿಂದ ಪರಿಶ್ರಮ ಪಡುವರೋ ಅವರು ಮಿತ್ರರನ್ನು, ಸೌಭಾಗ್ಯವನ್ನು, ಖ್ಯಾತಿಯನ್ನು ಮತ್ತು ಸುಖವನ್ನು ಗಳಿಸುವರು". 163
2. "ಹೇಗೆ ಸಮುದ್ರ ಮಧ್ಯದಲ್ಲಿ ಅಲೆಯು ಏಳಲಾರದೋ, ಸ್ಥಿರತೆ ಸ್ಥಾಪಿತವಾಗಿರುತ್ತದೆಯೋ ಹಾಗೆಯೇ ಸ್ಥಿರತೆ, ಚಂಚಲ ರಹಿತತೆಯುಳ್ಳ ಭಿಕ್ಷು ತೃಷ್ಣೆಯನ್ನು ಮಾಡದಿರಲಿ". 164
3. ಯಾರು ಭೂಮಿಯ ಹಾಗೆ ವಿರೋಧವಿಲ್ಲದವನೋ, ಯಾರು ಇಂದ್ರಕೀಲದ ಹಾಗೆ ದೃಢನೋ, ಯಾರು ಕೆಸರಿಲ್ಲದ ಆಳದ ತಿಳಿಗೊಳದಂತೆ ಪರಿಶುದ್ಧನೋ ಅಂತಹವನಿಗೆ ಮುಂದಿನ ಸಂಸಾರವಿಲ್ಲ". 165
4. "ಯಾರು ಸಂಪೂರ್ಣವಾಗಿ ಸ್ವರ್ಗೀಯ, ಮಾನವೀಯ ಮತ್ತು ಬ್ರಹ್ಮಲೋಕವನ್ನು ಗೆದ್ದು, ಸರ್ವಲೋಕಗಳ ಬಂಧನದಿಂದ ಮುಕ್ತನೋ, ಅಂತಹ ಸ್ಥಿರ ಹಾಗು ಸ್ಥಿತಾಚಿತ್ತನೇ ಕ್ಷೇತ್ರಜಿತ ನಾಗಿದ್ದಾನೆ". 166

## 32. ಜ್ಞಾನ

1. "ಜ್ಞಾನದಿಂದ ಪುರುಷ ಪರಿಶುದ್ಧನಾಗುತ್ತಾನೆ". 167
2. "ನಾಲ್ಕು ವಿಧವಾಗಿ ಪ್ರಶ್ನೆಗೆ ಉತ್ತರಿಸಬಹುದು : ನೇರವಾದ ಉತ್ತರ, ಪ್ರತಿ ಪ್ರಶ್ನೆಯನ್ನು ಹಾಕಿ ಉತ್ತರ, ವಿಶ್ಲೇಷಣಾತ್ಮಕವಾದ ಉತ್ತರ ಮತ್ತು ವ್ಯರ್ಥ ಪ್ರಶ್ನೆಯನ್ನು ಪಕ್ಕಕ್ಕೆ ಹಾಕುವುದು". 168
3. "ಎಲ್ಲಾ ವಿಷಯಗಳನ್ನು ಈ ರೀತಿ ಅರಿಯಿರಿ. ಹೇಗೆಂದರೆ ಯಕ್ಷಿಣಿಗಾರನು ಭ್ರಮೆಗಳನ್ನು ಸೃಷ್ಟಿಸುವಂತೆ, ಸತ್ಯವು ಅದು ಕಾಣುವಂತೆ ಖಂಡಿತವಾಗಿ ಇಲ್ಲ". 169
4. "ಜ್ಞಾನದಂತಹ ಐಶ್ವರ್ಯವಿಲ್ಲ ಮತ್ತು ಅಜ್ಞಾನದಂತಹ ಬಡತನವಿಲ್ಲ". 170
5. "ಜ್ಞಾನಿಗೆ 3 ಲಕ್ಷಣಗಳಿರುತ್ತದೆ. ಯಾವುದವು? ಆತನು ಯೋಗ್ಯವಾದ ಯೋಚನೆಗಳಿಂದ ಕೂಡಿರುತ್ತಾನೆ. ಯೋಗ್ಯವಾದ ಮಾತುಗಳನ್ನು ಆಡುತ್ತಾನೆ ಮತ್ತು ಯೋಗ್ಯವಾದ ಕರ್ಮಗಳನ್ನು ಮಾಡುತ್ತಿರುತ್ತಾನೆ". 171

# 33. ಶಕ್ತಿ

1. "ಈಗಿನಿಂದಲೇ ಒಬ್ಬನು ತನ್ನ ಚಿತ್ತದ ಅಭಿವೃದ್ಧಿಗಾಗಿ ಶಕ್ತಿಮೀರಿ ಶ್ರಮಿಸಬೇಕು. ಏಕೆಂದರೆ ಮರಣವು ಯಾವಾಗ ಬರುವುದು ತಿಳಿಯದು. 172
2. "ಯಾರು ಕಠಿಣ ಪರಿಶ್ರಮಿಯೋ ಮತ್ತು ಅಪಾಯ ಸನ್ನಿವೇಶಗಳಲ್ಲಿ ನಿರ್ಭಯನೋ ಅವನಿಗೆ ಯಶಸ್ಸು ಸಿಗುತ್ತದೆ". 173
3. "ವ್ಯಕ್ತಿಯು ಪರಾಕ್ರಮದಿಂದ ದುಃಖದ ಮುಕ್ತಾಯ ಮಾಡುತ್ತಾನೆ". 174
4. "ಪದಗಳು ನಾಶಮಾಡುವ ಮತ್ತು ಗುಣಪಡಿಸುವ ಶಕ್ತಿಯನ್ನು ಹೊಂದಿವೆ. ಯಾವಾಗ ಪದಗಳು ಸತ್ಯ ಮತ್ತು ದಯೆಯಿಂದ ಬರುತ್ತದೋ ಆಗ ಅವು ವಿಶ್ವವನ್ನೇ ಬದಲಾಯಿಸ ಬಲ್ಲದು". 175
5. "ಯಾವ ಭಿಕ್ಷುವು ಉತ್ಸಾಹಿತ ಪರಿಶ್ರಮದಿಂದ ಕೂಡಿರುತ್ತಾನೋ ಅಕುಶಲಗಳನ್ನು ತ್ಯಜಿಸಲು ಸದಾ ಶ್ರಮಪಡುತ್ತಾನೋ, ಕುಶಲಗಳನ್ನು ಪ್ರಾಪ್ತಿಗೊಳಿಸಿರುವನೋ, ಅದನ್ನು ಎಚ್ಚರಿಕೆಯಿಂದ ಕಾಪಾಡುತ್ತಾನೋ ಈ ರೀತಿಯಲ್ಲಿ ಆತ ಶಕ್ತಿಯನ್ನು ಗಳಿಸುತ್ತಾನೆ". 176
6. "ಐದು ಬಲಗಳಿವೆ ಅವೆಂದರೆ : ಶದ್ಧಾ ಬಲ, ವೀರ್ಯ ಬಲ, ಸ್ಮೃತಿ ಬಲ, ಸಮಾಧಿ ಬಲ ಮತ್ತು ಪ್ರಜ್ಞಾ ಬಲ". 177

# 34. ಅಜ್ಞಾನ

1. "ದುಃಖದ ಸ್ವರೂಪವನ್ನು ಅರಿಯದಿರುವಿಕೆ, ದುಃಖದ ಉದಯ ಅರಿಯದಿರುವಿಕೆ, ದುಃಖದ ನಿರೋಧ ಅರಿಯದಿರುವಿಕೆ ಮತ್ತು ದುಃಖದ ನಿರೋಧ ಮಾರ್ಗವನ್ನು ಅರಿಯದಿರುವಿಕೆ. ಇದನ್ನೇ ಅಜ್ಞಾನ ಎನ್ನುತ್ತೇವೆ". 178
2. "ಈ ನಾಲ್ಕು ಆರ್ಯ ಸತ್ಯಗಳನ್ನು ನೀವು ಮತ್ತು ನಾನು ಅರಿಯದಿರುವುದರಿಂದಲೇ ನಾವೆಲ್ಲಾ ಈ ಸಂಸಾರದಲ್ಲಿ ಅನಂತ ಕಾಲದಿಂದ ಸುತ್ತಾಡಬೇಕಾಯಿತು". 179
3. "ಯಾರು ಬರುವ ಹಾಗು ಹೋಗುವ ಮಾರ್ಗವನ್ನು ಅರಿಯಲಾರನೋ, ಹಾಗು ಎರಡು ಅಂತಗಳನ್ನು ಅರಿಯಲಾಗದೆ ವ್ಯರ್ಥದಿಂದ ವಿಲಾಪ ಮಾಡುತ್ತಿರುವನು". 180
4. "ಅವರು ಚಿತ್ತ ಮತ್ತು ಪ್ರಜ್ಞೆಯ ವಿಮುಕ್ತಿಯಿಂದಲು ಸದಾ ರಹಿತರಾಗಿದ್ದಾರೆ. ಅವರು ದುಃಖದ ಅಂತ್ಯ ಮಾಡಲು ಅಯೋಗ್ಯರಾಗಿದ್ದಾರೆ. ಅವರೇ ಜನ್ಮ ಜರಾದಲ್ಲಿ ಬೀಳುವವರೂ ಆಗಿದ್ದಾರೆ". 181
5. "ಎಲ್ಲಾ ಕಶ್ಮಲಗಳಿಂದ ಅವಿದ್ಯೆಯು ಪರಮ ಕಶ್ಮಲವಾಗಿದೆ. ಈ ಒಂದು ಕಶ್ಮಲವನ್ನು ನಾಶಮಾಡಿ ನಿರ್ಮಲರಾಗಿ ಭಿಕ್ಷುಗಳೇ". 182

## ೩೫. ವಿಮುಕ್ತಿ

1. "ಯಾರು ಏಕಾಂತತೆಯ ಮಧುರತೆಯನ್ನು ಮತ್ತು ಪ್ರಶಾಂತತೆಯ ಗಂಭೀರತೆಯನ್ನು ಸವಿದಿರುವನೋ ಆತನು ಭಯದಿಂದ ಮತ್ತು ಪಾಪದಿಂದ ಮುಕ್ತನಾಗುತ್ತಾನೆ". 183
2. "ಹಳೆಯದೆಲ್ಲಾ ಕ್ಷೀಣವಾಯಿತು (ಹಳೆಯ ಪ್ರವೃತ್ತಿಗಳು), ಹೊಸದು ಎಂದಿಗೂ ಉದಯವಾಗುವುದಿಲ್ಲ". ಈ ರೀತಿಯಾಗಿ ಅವರ ಚಿತ್ತವೂ ಜನ್ಮದಿಂದ ವಿಮುಕ್ತಿ ಪಡೆಯುವುದು. 184
3. "ಸಮಸ್ಯೆಗಳು ಎಲ್ಲಿ ಉದಯಿಸುತ್ತದೆಯೋ, ಅಲ್ಲಿಯೇ ಪರಿಹರಿಸಬೇಕು. ನಂತರ ಅಲ್ಲಿಂದ ಮುಂದೆ ಹೋಗಬೇಕು". 185
4. "ಈ ಶ್ರೇಷ್ಠ ಜೀವನವು ಲಾಭ, ಗೌರವ, ಕೀರ್ತಿಗಳಿಗಾಗಿ ಅಲ್ಲ, ಶೀಲ ಸಂಪನ್ನತೆಯ ಹಿತಾನುಕೂಲಕ್ಕಾಗಿ ಅಲ್ಲ, ಸಮಾಧಿಯ ಲಾಭಕ್ಕಾಗಿ ಅಲ್ಲ. ಜ್ಞಾನ ದರ್ಶನದ ಹಿತಾನುಕೂಲಕ್ಕಾಗಿ ಅಲ್ಲ. ಭಿಕ್ಷುಗಳೇ ಅಚಲವಾದ ಚಿತ್ತ ವಿಮುಕ್ತಿಯೇ ಇದರ ಗುರಿ. ಇದೇ ಮರದ ಸಾರದ ದಿಂಡು, ಸಾಧನೆಯ ಉತ್ತುಂಗ". 186
5. "ಯಾವ ಸ್ಥಿತಿಗೂ ಹೊಂದಿಕೊಂಡಿರುವುದು ಸರಿ ಎನಿಸುವುದಿಲ್ಲ" ಎಂದು ಅರಿವಾಗಿ ಎಲ್ಲಾ ಸ್ಥಿತಿಗಳಲ್ಲಿಯೂ ಅನಿತ್ಯ ಗ್ರಹಿಸುತ್ತಾ, ದುಃಖ ಗಮನಿಸುತ್ತಾ ಅನಾತ್ಮ ಗ್ರಹಿಸುತ್ತಾ, ನಿರೋಧಿಸುವಿಕೆ ಕಂಡುಕೊಳ್ಳುತ್ತಾ ಯಾವುದಕ್ಕೂ ಅಂಟಿಕೊಳ್ಳುವುದಿಲ್ಲ. ಯಾವುದಕ್ಕೂ ಅಂಟಿಕೊಳ್ಳದೆ ತನಗೆ ತಾನೆ ನಿಬ್ಬಾಣವನ್ನು ಒಂಟಿಯಾಗಿ ಸಾಧಿಸುತ್ತಾನೆ". 187

## ೩೬. ಸ್ವ-ಶ್ರದ್ಧೆ

1. "ತನ್ನಿಂದಲೇ ಪಾಪವಾಗುತ್ತದೆ, ತನ್ನಿಂದಲೇ ಕಲುಶಿತನಾಗುತ್ತಾನೆ, ತನ್ನಿಂದಲೇ ಪಾಪ ವರ್ಜಿತವಾಗುತ್ತದೆ, ತನ್ನಿಂದಲೇ ಪರಿಶುದ್ಧನಾಗುತ್ತಾನೆ. ಪರಿಶುದ್ಧತೆ ಮತ್ತು ಪಾಪಗಳು ತನ್ನನ್ನೇ ಅವಲಂಬಿಸಿದೆ. ಯಾರು ಪರರನ್ನು ಶುದ್ಧಿಗೊಳಿಸಲಾರರು". 188
2. "ಮಾನವನು ತನ್ನ ಅದೃಷ್ಟಕ್ಕೆ ತಾನೇ ಹೊಣೆ". 189
3. "ಶ್ರದ್ಧೆಯು ಜ್ಞಾನದಿಂದ ಉದಯಿಸುತ್ತದೆ ಮತ್ತು ಶೀಲದ ತಾಯಿಯು ಸಹಾ". 190
4. "ತನಗೆ ತಾನೇ ರಕ್ಷಕ, ತನಗೆ ತಾನೇ ಒಡೆಯ (ಶರಣು). ಆದ್ದರಿಂದ ವರ್ತಕನು ತನ್ನ ಅಶ್ವವನ್ನು ಹತೋಟಿಯಲ್ಲಿಡುವಂತೆ ತನ್ನನ್ನು ರಕ್ಷಿಸಿಕೊಳ್ಳಲಿ". 191
5. "ಈ ಲೋಕದಲ್ಲಿ ಶ್ರದ್ಧಾ ಧನವೇ ಶ್ರೇಷ್ಠ". 192
6. "ಮಾನವ ಶ್ರದ್ಧೆಯಿಂದ ಸಂಸಾರದ ಪ್ರವಾಹ ದಾಟುತ್ತಾನೆ". 193

## 37. ಐಶ್ವರ್ಯ

1. “ಆರೋಗ್ಯವು ಪರಮಲಾಭ. ಸಂತೃಪ್ತಿಯೇ ಶ್ರೇಷ್ಠ ಐಶ್ವರ್ಯ. ವಿಶ್ವಾಸಯೋಗ್ಯನೇ ಶ್ರೇಷ್ಠ ಬಂಧು. ನಿಬ್ಬಾಣವೇ ಪರಮ ಸುಖ”. 194

2. “ಗೃಹಸ್ಥನು ತಮ್ಮ ಐಶ್ವರ್ಯವನ್ನು ನಾಲ್ಕು ಭಾಗವಾಗಿ ಹಂಚಿಕೊಳ್ಳುತ್ತಾನೆ : 1. ನಿತ್ಯಬಳಕೆಗೆ 2. ದಾನಕ್ಕೆ 3. ಬಂಡವಾಳಕ್ಕೆ 4. ಆಪತ್ ಸಮಯಕ್ಕೆ. 195

3. “ಒಬ್ಬನು ಪ್ರಜ್ಞಾಪೂರ್ವಕವಾಗಿ ಯೋಚಿಸಿ ಖರ್ಚು ಮಾಡಬೇಕು. ಆತನ ಲಾಭಾಂಶವನ್ನು ಅತಿ ಖರ್ಚು ಮಾಡಬಾರದು, ಅತಿ ಕಡಿಮೆಯು ಕೂಡದು. ಏಕೆಂದರೆ ಹೆಚ್ಚು ಖರ್ಚು ಮಾಡಿದರೆ ಭಿಕಾರಿಯಾಗುತ್ತಾನೆ. ಅತಿ ಕಡಿಮೆ ಖರ್ಚು ಮಾಡಿದರೆ ಲೋಭಿಯಾಗುತ್ತಾನೆ”. 196

4. “ಐಶ್ವರ್ಯ ಮುರ್ಖನನ್ನು ಮಾತ್ರ ನಾಶಗೊಳಿಸುತ್ತದೆ, ಆದರೆ ಶ್ರೇಷ್ಠತ್ವದ ಅನ್ವೇಷಣೆಗಾರನಿಗೆ ಅಲ್ಲ. ಐಶ್ವರ್ಯದ ಲೋಭಿಯು ತನ್ನನ್ನು ಮಾತ್ರವಲ್ಲ, ಪರರಿಗೂ ಹಾಳು ಮಾಡುತ್ತಾನೆ”. 197

5. “ನನಗೆ ಮಕ್ಕಳುಂಟು, ನನ್ನಲ್ಲಿ ಐಶ್ವರ್ಯವಿದೆ ಎಂದು ಮೂರ್ಖನು ತೊಂದರೆಗೆ ಸಿಲುಕುತ್ತಾನೆ. ಆದರೆ ವಾಸ್ತವವಾಗಿ ಆತನಿಗೆ ಆತನೇ ಇಲ್ಲ. ಇನ್ನು ಎಲ್ಲಿಯ ಮಕ್ಕಳು, ಎಲ್ಲಿಯ ಐಶ್ವರ್ಯ ?!”. 198

6. “ಉಚಿತ ಕಾರ್ಯಗಳನ್ನು ಮಾಡುವವನು, ಧೈರ್ಯವಂತನು ಹಾಗು ಪರಿಶ್ರಮವುಳ್ಳವನು ಧನ ಗಳಿಸುತ್ತಾನೆ”. 199

7. “ಶ್ರೇಷ್ಠವಾದ ಧನಗಳು ಏಳು ಅವೆಂದರೆ : ಶ್ರದ್ಧೆ, ಶೀಲ, ಹಿರಿ, ಪಾಪಭೀತಿ, ವಿದ್ಯೆ, ತ್ಯಾಗ ಮತ್ತು ಪ್ರಜ್ಞೆ”. 200

## 38. ಮಿತ್ರತ್ವ

1. “ಹೃತ್ಪೂರ್ವಕ ಮಿತ್ರತ್ವವು ಪರಮ ಮಧುರವಾಗಿರುತ್ತದೆ”.201

2. “ಒಬ್ಬನಿಗೆ ಯೋಗ್ಯ ಮಿತ್ರ (ತನಗಿಂತ ಶ್ರೇಷ್ಠ ಅಥವಾ ಸಮಾನ) ದೊರಕದಿದ್ದರೆ ಒಂಟಿಯಾಗಿರುವುದು ಉತ್ತಮ. ಆದರೆ ಮೂರ್ಖರ ಸಂಗಡ ಬೇಡವೇ ಬೇಡ”. 202

3. “ಈ ನಾಲ್ಕು ಬಗೆಯವರನ್ನು ನಿನು ನಿನ್ನ ಮಿತ್ರರೆಂದು ತಿಳಿ : 1. ಸಹಾಯ ಮಾಡುವವ 2. ಸುಖ ದುಃಖದಲ್ಲಿ ಸಮಭಾಗಿ ಯಾದವ 3. ಬುದ್ಧಿವಾದ ಹೇಳುವವ 4. ಅನುಕಂಪದಿಂದ ಕೂಡಿರುವವನು”. 203

4. “ಹೇಗೆ ಹೊಗಳಿಕೆ ಮಿತ್ರನಿಂದ ದುರುಪಯೋಗವಾಗಿ ಹಾನಿಯಾಗುತ್ತದೋ ಹಾಗೆಯೇ ಶತ್ರುವಿನ ನಿಂದೆ ಕೆಲವೊಮ್ಮೆ ಸರಿಯಾಗಿರುತ್ತದೆ”. 204

5. “ಪ್ರೀತಿಯು ಹಿಂದಿನ ಜನ್ಮಗಳ ಸಂಬಂಧದಿಂದ ಉದಯಿಸುತ್ತದೆ ಮತ್ತು ವರ್ತಮಾನದ ಅನುಕಂಪದಿಂದ ಚೇತನಗೊಳ್ಳುತ್ತದೆ. ಹೇಗೆಂದರೆ ಕಮಲವು ನೀರು ಮತ್ತು ಕೆಸರಿನಿಂದ ಅರಳುವ ಹಾಗೆ”. 205

6. “ಸ್ನೇಹದ ಕಾರಣದಿಂದ ದುಃಖ ಉದಯಿಸುವುದು. ಆದ್ದರಿಂದ ಸ್ನೇಹದ ದುಷ್ಪರಿಣಾಮಗಳನ್ನು ಅರಿತು ಸ್ನೇಹರಹಿತನಾಗಿ ಖಡ್ಗಮೃಗದ ರೀತಿ ಏಕಾಂಗಿಯಾಗಿ ಸಂಚರಿಸು”. 206

## 39. ತಂದೆ ತಾಯಿಯರು

1. "ತಂದೆ-ತಾಯಿಗಳ ಸೇವೆ, ಪತ್ನಿ ಪುತ್ರರ ಸಲಹುವಿಕೆ ಮತ್ತು ಶಾಂತಿಯುತ ಯೋಗ್ಯ ವೃತ್ತಿ ಇವು ಅತ್ಯಂತ ಮಂಗಳಕರ. 207
2. "ಈ ಲೋಕದಲ್ಲಿ ತಂದೆತಾಯಿಯರನ್ನು ಸೇವಿಸುವುದು ಸುಖ. ಸಮಣರ ಸೇವೆ ಮಾಡುವುದು ಸುಖ ಮತ್ತು ಪುಣ್ಯವಂತರ ಸೇವೆ ಮಾಡುವುದು ಸುಖ". 208
3. "ಮಾತಾಪಿತರಿಗೆ ಪರಿಚಾರಿಕೆ ಮಾಡುವ ವಿವೇಕಿಯು ಇಲ್ಲಿಯೇ ಪ್ರಶಂಸೆಯನ್ನು ಗಳಿಸುತ್ತಾನೆ, ನಂತರ ಸುಗತಿಯಲ್ಲಿ ಆನಂದಿಸುತ್ತಾನೆ". 209
4. "ತಂದೆ-ತಾಯಿಯರಿಗೆ ಎಲ್ಲಾ ರೀತಿಯ ಪೂರ್ಣ ಸೇವೆ ಮಾಡಿಯೂ, ಅವರಿಗೆ ಇಡೀ ವಿಶ್ವದ ಅಧಿಪತ್ಯ ನೀಡಿದರೂ ಅವರ ಋಣವನ್ನು ತೀರಿಸಲು ಸಾಧ್ಯವಿಲ್ಲ". 210
5. "ತಂದೆ-ತಾಯಿಯರಿಗೆ ಎಲ್ಲಾ ರೀತಿಯ ಸಹಾಯ ಮಾಡುವುದು, ಮಾಡತಕ್ಕ ಕರ್ತವ್ಯಗಳನ್ನು ಮಾಡುವುದು, ಕುಟುಂಬದ ಸುಸಂಪ್ರದಾಯ ಪಾಲನೆ, ಘನತೆ ಕಾಪಾಡುವುದು, ಅವರ ಆಸ್ತಿಯನ್ನು ಚೆನ್ನಾಗಿ ನೋಡಿಕೊಳ್ಳುವುದು, ಅವರ ಮರಣದ ನಂತರ ಅವರ ಹೆಸರಿನಲ್ಲಿ ದಾನ ಅರ್ಪಿಸುವುದು ಮಕ್ಕಳ ಕರ್ತವ್ಯವಾಗಿದೆ". 211

## 40. ಮಕ್ಕಳು

1. "ಮಕ್ಕಳಿಗೆ ಪಾಪದಿಂದ ತಡೆಯುವುದು". 212
2. "ಪುಣ್ಯವನ್ನು ಮಾಡಲು ಪ್ರೋತ್ಸಾಹಿಸುವುದು". 213
3. "ಯೋಗ್ಯ ವಿದ್ಯಾಭ್ಯಾಸ ಮತ್ತು ವೃತ್ತಿಯಲ್ಲಿ ತೊಡಗಿಸುವುದು". 214
4. "ಯೋಗ್ಯರೊಂದಿಗೆ ವಿವಾಹ ಮಾಡಿಸುವುದು ಮತ್ತು ಕಾಲ ಬಂದಾಗ ಅವರಿಗೆ ಆಸ್ತಿಯನ್ನು ನೀಡುವುದು - ಇವು ತಂದೆ-ತಾಯಿಗಳ ಕರ್ತವ್ಯವಾಗಿದೆ". 215
5. "ವಿವೇಕಿಗಳು ಮಕ್ಕಳನ್ನು ಅಪಾಯದಿಂದ, ಭಯದಿಂದ ಮತ್ತು ಕೆಟ್ಟದ್ದರಿಂದ ರಕ್ಷಿಸುತ್ತಾರೆ". 216

## 41. ಪತಿ

1. ಪುರುಷನು ತನ್ನ ಪತ್ನಿಯೊಂದಿಗೆ ಈ ಐದು ರೀತಿಯಲ್ಲಿ ನಡೆದುಕೊಳ್ಳಬೇಕು :

   1. ಆತನು ಪತ್ನಿಯೊಂದಿಗೆ ಕರುಣೆಭರಿತ ಹಾಗು ಗೌರವಯುತ ಮಾತುಗಳನ್ನು ಆಡಬೇಕು. 217
   2. ಪತ್ನಿಯೊಂದಿಗೆ ಕಟುವಾಕ್ಯ ಹಾಗು ನಿಂದನೆಯಿಂದ ವರ್ತಿಸಬಾರದು. 218
   3. ಪತ್ನಿಯೊಂದಿಗೆ ನಿಷ್ಠಾವಂತನಾಗಿರಬೇಕು (ಅಂದರೆ ಪರ ಸ್ತ್ರೀಯರ ಸಂಬಂಧ ಬೆಳೆಸಬಾರದು) 219
   4. ಆತನು ತನ್ನೆಲ್ಲಾ ಐಶ್ವರ್ಯವನ್ನು ಆಕೆಯ ಕೈಗೆ ಒಪ್ಪಿಸಬೇಕು.
   5. ಆತನು ಆಕೆಗೆ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಆಕೆಗೆ ವಸ್ತ್ರಗಳನ್ನು ಹಾಗು ಆಭರಣಗಳನ್ನು ನೀಡಬೇಕು. 220

## 42. ಪತ್ನಿ

1. "ಪತ್ನಿಯು ತನ್ನ ಪತಿಯೊಂದಿಗೆ ಈ ಐದು ರೀತಿಯಲ್ಲಿ ನಡೆದುಕೊಳ್ಳಬೇಕು : 1. ಮನೆಯನ್ನು ಅಥವಾ ಸಂಪತ್ತನ್ನು ವ್ಯವಸ್ಥಿತವಾಗಿ ನೋಡಿಕೊಂಡು ಹೋಗುವುದು. 2. ಪತಿಯ ಬಂಧುಗಳಿಗೆ ಸಹಾಯ ಮಾಡುವುದು. 3. ನಿಷ್ಠಾವಂತೆಯಾಗಿರುವುದು. 4. ಪತಿಯ ಸಂಪತ್ತನ್ನು ರಕ್ಷಿಸುವುದು 5. ಪರಿಶ್ರಮೆಯಾಗಿರುವುದು. 6. ಸಮಯಕ್ಕೆ ಸರಿಯಾಗಿ ಆಹಾರ ಮಾಡಿ ನೀಡುವುದು". 221
2. "ಯಾರು ಸದಾ ಪೀಡಿಸುತ್ತಿರುವಳೋ, ಕ್ರೋಧಿಯೋ, ಗಂಡನನ್ನು ಅಲಕ್ಷಿಸುವಳೋ ಅಂತಹವಳು ತೊಂದರೆದಾಯಕ ಪತ್ನಿಯಾಗಿರುತ್ತಾಳೆ". 222
3. "ಯಾರು ಗಂಡನ ಆದಾಯದಲ್ಲಿ ಕದಿಯುವಳೋ, ಸುಳ್ಳುಗಾತಿಯೋ, ವಂಚಿಸುವವಳೋ ಆಕೆಯನ್ನು ಚೋರ ಭಾರ್ಯೆ ಎನ್ನುತ್ತಾರೆ". 223
4. "ಯಾರು ವಿಧೇಯಳೋ, ಕಾರ್ಯದಕ್ಷಳೋ, ಮರು ಮತನಾಡದೆ ಎಲ್ಲಾ ಕೆಲಸ ಮಾಡುವವಳೋ, ಸಹನಾಮೂರ್ತಿಯೋ ಆಕೆ ಭಾರ್ಯೆ ಎನಿಸುತ್ತಾಳೆ". 224

## 43. ಆರೋಗ್ಯ

1. "ಆರೋಗ್ಯವು ಪರಮ ಲಾಭ". 225
2. "ಎರಡು ಪ್ರಕಾರದ ರೋಗಗಳಿವೆ, ಅವುಗಳೆಂದರೆ : ಶಾರೀರಿಕ ರೋಗ ಮತ್ತು ಮಾನಸಿಕ ರೋಗ. ಶಾರೀರಿಕ ರೋಗದಿಂದ ಮುಕ್ತರಾಗಲು ಒಂದು ವರ್ಷ, ಅಥವಾ 2 ವರ್ಷ, ನೂರು ವರ್ಷಗಳಿಂದಲೂ ಹೆಚ್ಚು ಕಾಲಕ್ಕೂ ರೋಗದಿಂದ ಮುಕ್ತರಾಗಲು ಆನಂದಿಸುತ್ತಾರೆ. ಆದರೆ ಮಾನಸಿಕ ಕ್ಲೇಷಗಳ ಮುಕ್ತರ ಹೊರತು ಅನ್ಯರು ಮಾನಸಿಕ ರೋಗದಿಂದ ಮುಕ್ತರಾಗಲು ಒಂದು ಕ್ಷಣವೂ ಸಹ ಆನಂದಿಸುವುದಿಲ್ಲ". 226
3. "ಲೋಭ, ದ್ವೇಷ ಮತ್ತು ಮೋಹ ಈ ಮೂರು ರೋಗದ ಮುಖ್ಯ ಪ್ರತಿನಿಧಿಗಳಾಗಿವೆ". 227
4. "ಯಾರು ಸ್ನೇಹಿತರನ್ನು ನಂಬದವನೋ, ಅಸ್ಥಿರ ಚಿತ್ತನೋ ಮತ್ತು ಮಿತ್ರರಲ್ಲಿ ಕೆಟ್ಟದಾಗಿ ವರ್ತಿಸುವನೋ, ಆತನ ಆರೋಗ್ಯ ಚೆನ್ನಾಗಿರುವುದಿಲ್ಲ". 228
5. "ರೋಗವನ್ನು (ಜನ್ಮ) ಮುಂಚೆಯೆ ತಡೆಯುವುದು ನಿವಾರಣೆಗಿಂತ ಉತ್ತಮವಾದುದು". 229
6. ಶರೀರವು ರೋಗಕ್ಕೆ ಗುರಿಯಾದಾಗ ಮನಸ್ಸನ್ನು ದುರ್ಬಲ ಗೊಳಿಸದಿರಿ". 230

## 44. ವೈರಾಗ್ಯ (ವಿರಾಗ)

1. "ಚಕ್ಷುವಿನ ವಿಷಯದಲ್ಲಿ ಲೋಲುಪನಾಗದಿರು. ಗ್ರಾಮ್ಯ ಕಥನಗಳಿಂದ ಕಿವಿಯನು ಮುಚ್ಚಿಕೋ (ರಕ್ಷಿಸಿಕೋ). ಸ್ವಾದದಲ್ಲಿ ಲೋಲುಪನಾಗದಿರು ಮತ್ತು ಲೋಕದಲ್ಲಿ ಯಾವುದನ್ನು ಸ್ವೀಕರಿಸಬೇಡ". 231
2. "ಏನನ್ನಾದರೂ ಸಾಧಿಸಬೇಕಿದ್ದರೆ ಬಹಳ ದೃಢತಾಪೂರ್ವಕವಾಗಿ ಪರಿಶ್ರಮಿಸು, ಸಡಿಲಿಕೆಯ ಸಮಣ ಜೀವನವು ಬಯಕೆಗಳ ಧೂಳನ್ನು ಹೆಚ್ಚಿಸುತ್ತದೆ". 232
3. "ಲೋಕವು 5 ಕಾಮಲೋಕಗಳಲ್ಲಿ ಹಾಗು ಆರನೆಯದಾದ ಚಿತ್ತದಲ್ಲಿ ಆಸಕ್ತಿ ತೊರೆದರೆ ದುಃಖದಿಂದ ಮುಕ್ತಿ ದೊರೆಯುತ್ತದೆ". 233
4. "ನಿಯಮಗಳಲ್ಲಿ ಸಂಯಮದಿಂದಿರು. ಐದು ಇಂದ್ರಿಯಗಳಲ್ಲಿ ಕಾಯಗತಾಸ್ಮೃತಿ ಸ್ಥಾಪಿಸಿರಲಿ. ವೈರಾಗ್ಯ ವೃದ್ಧಿಸುವವ ನಾಗು". 234

## 45. ಚಿಂತೆ

1. "ಜ್ಞಾನಿ ಪುರುಷನು ಭವಿಷ್ಯದ ಬಗ್ಗೆ ಯಾವ ಭರವಸೆಯನ್ನು ಇಡುವುದಿಲ್ಲ ಹಾಗು ಕಳೆದುಹೋದ ಕಾಲದ ಬಗ್ಗೆ ಪಶ್ಚಾತ್ತಾಪ ಪಡುವುದಿಲ್ಲ". 235
2. "ಜಯವು ಶತೃತ್ವ ಉಂಟು ಮಾಡುತ್ತದೆ. ಸೋತವನು ಕುಗ್ಗಿ ಶೋಕಿಸುತ್ತಾನೆ. ಆದರೆ ಶಾಂತತೆವುಳ್ಳವರು ಜಯ ಪರಾಜಯ ಬಿಟ್ಟು ಸುಖಿಯಾಗಿರುತ್ತಾರೆ". 236
3. "ಎಲ್ಲಾ ಜೀವಿಗಳು ಕೊರತೆಯಿಂದ ಕೂಡಿವೆ ಮತ್ತು ಅತಿ ಆಸೆಯಿಂದ ಕೂಡಿವೆ ಹಾಗು ತೃಷ್ಣೆಯ ಗುಲಾಮ ವಾಗಿದೆ". 237
4. "ಇದು ಸಹಾ ಸಂಭವನೀಯ ಕೆಟ್ಟ ವೈದ್ಯನ ಕಹಿ ಅರಿತಮೇಲೆ ಒಳ್ಳೆಯ ವೈದ್ಯನನ್ನು ನಂಬಲು ಹೆದರುತ್ತಾರೆ". 238

## 46. ಬಂಧನಗಳು

1. "ಯಾವ ವ್ಯಕ್ತಿಯು ಪಾಪಯುತವಾದ ಯೋಚನೆಗಳಿಂದ ಕೂಡಿರುವರೋ, ಯಾರ ಭಾವೋದ್ರೇಕಗಳು ಬಲಯುತ ವಾಗಿವೆಯೋ, ಯಾರು ಸುಖದ ಹೊರತು ಬೇರೇನೂ ಕಾಣಲಾರನೋ ಅಂತಹವನ ತೃಷ್ಣೆಯು ವೇಗವಾಗಿ ಬೆಳೆಯು ತ್ತದೆ. ನಿಜಕ್ಕೂ ಆತನು ಬಂಧನವನ್ನು ಬಲಿಷ್ಠಗೊಳಿಸು ತ್ತಿದ್ದಾನೆ". 239
2. "ಯಾವುವು ಕಬ್ಬಿಣದಿಂದ, ಮರದಿಂದ ಅಥವಾ ಹಗ್ಗದಿಂದಾದ ಬಂಧನಗಳು ಇವೆಯೋ, ಅಷ್ಟೇನು ಬಲಿಷ್ಠವಲ್ಲ ಎಂದು ಜ್ಞಾನಿಗಳು ಹೇಳುತ್ತಾರೆ. ಆದರೆ ಆಭರಣಗಳಿಗಾಗಿ, ವಸ್ತ್ರಗಳಿಗಾಗಿ, ಮಕ್ಕಳಿಗಾಗಿ ಮತ್ತು ಪತ್ನಿಯರ ಆಸಕ್ತಿಗಳೇ ಅತ್ಯಂತ ಬಲಿಷ್ಠವಾದ ಬಂಧನಗಳೆಂದು ಜ್ಞಾನಿಗಳು ಹೇಳುತ್ತಾರೆ". 240
3. "ಯಾರಲ್ಲಿ ಪ್ರಿಯ ಅಥವಾ ಅಪ್ರಿಯ ಭಾವನೆಗಳಿಲ್ಲವೂ ಆತನಲ್ಲಿ ಬಂಧನಗಳಿಲ್ಲ". 241
4. "ಒಬ್ಬನು ಕೋಪವನ್ನು ಬಿಡಬೇಕು, ಅಹಂಕಾರವನ್ನು ವರ್ಜಿಸಬೇಕು. ಒಬ್ಬನು ಎಲ್ಲಾ ಬಂಧನಗಳಿಂದ ಮುಕ್ತನಾಗಬೇಕು, ಯಾರು ದೇಹ ಮತ್ತು ಮನಸ್ಸಿಗೆ ಅಂಟಿಲ್ಲವೋ ಅವರಿಗೆ ಯಾವ ಕೆಡಕು ಇಲ್ಲ. 242
5. "ಯಾವರೀತಿ ಮೀನು ಜಾಲವನ್ನು ಬೇಧಿಸಿ ಹೊರಬರುವುದೋ ಅದೇರೀತಿ ಬಂಧನಗಳನ್ನು ನಷ್ಟಮಾಡಿ, ನಿಲ್ಲದ ಅಭಂಗ ಅಗ್ನಿಯಾಗಿ ಸರ್ವ ಬಂಧನಗಳನ್ನು ಸುಟ್ಟು (ಕತ್ತರಿಸಿ) ಖಡ್ಗ ಮೃಗದ ರೀತಿ ಏಕಾಂಗಿಯಾಗಿ ಸಂಚರಿಸು". 243

## 47. ವಿಮರ್ಶೆ

1. "ನಿಮ್ಮ ಕಲ್ಪನೆಗಳನ್ನು ನಂಬಬೇಡಿ, ನಿಮ್ಮ ನಂಬಿಕೆಗಳಿಗೆ ನಿರ್ಣಯಗಳಿಗೆ ಹೊಂದುತ್ತವೆಂದು ಎಂದೂ ಸಹ ಸ್ವೀಕರಿಸದಿರಿ. ಪ್ರಕಟಿತ ಸುದ್ದಿಗಳಿಗೆ ಆಗಲಿ, ಸಂಪ್ರದಾಯಕ್ಕಾಗಲಿ ಅಥವಾ ಕೇಳಿದುದು ಎಂದಾಗಲಿ ಅಂತಹುದನ್ನೆಲ್ಲಾ ನಂಬಬೇಡಿ. ತಲತಲಾಂತರಗಳಿಂದ ಮೌಖಿಕವಾಗಿ ಬಂದಿದೆಯೆಂದಾಗಲಿ, ಗಾಳಿ ಸುದ್ದಿಗಳಿಗಾಗಲಿ ಅಥವಾ ಸುನಿಶ್ಚಿತ ಪೂಜ್ಯ (ಪವಿತ್ರ) ಗ್ರಂಥಗಳಲ್ಲಿದೆ ಎಂದಾಗಲಿ ನಂಬಬೇಡಿ ಹಾಗು ಸ್ವೀಕರಿಸಬೇಡಿ".
2. "ಇದು ಪ್ರಮಾಣಬದ್ಧ ಅಥವಾ ಸಾಧಾರಪೂರಿತವಾಗಿ ಹೇಳಲಾಗಿದೆ ಎಂದರೂ ನಂಬಬೇಡಿ, ಸ್ವೀಕರಿಸಬೇಡಿ. ವಿವೇಕಿಯು ಜನರು ಆತನ ಬಗ್ಗೆ ಏನಾದರೂ ಯೋಚಿಸಲಿ, ಅದರಿಂದ ಪ್ರಭಾವಿತನಾಗುವುದಿಲ್ಲ". 245
3. "ತರ್ಕಬದ್ಧವಾಗಿದೆ ಎಂದಾಗಲಿ ಅಥವಾ ಊಹೆಗೆ ನಿಲುಕುತ್ತದೆ ಎಂದಾಗಲಿ, ಅಭಿಪ್ರಾಯಕ್ಕೆ ಹೊಂದುತ್ತದೆ ಎಂದಾಗಲಿ ಏನನ್ನೂ ಸ್ವೀಕರಿಸಬೇಡಿ. ಯಾರು ಅಸಾರವಾದುದನ್ನು ಸಾರವೆಂದು ಸಾರವಾದುದರಲ್ಲಿ ಅಸಾರವೆಂದು ಮಿಥ್ಯ ಗ್ರಹಿಕೆಗಳಿಂದ ಕೂಡಿರುವರೋ ಅವರು ಎಂದೂ ಸಾರವನ್ನು ಸಾಧಿಸುವುದಿಲ್ಲ".
4. "ಯಾವಾಗ ನಿಮಗೆ ಕೆಲವು ವಿಷಯಗಳು ಅಕುಶಲವಾದುದು ಮತ್ತು ಕೆಟ್ಟದೆಂದು ಅರಿವಾಗುತ್ತದೋ ಆಗ ಅದನ್ನು ತ್ಯಜಿಸಿ ಮತ್ತು ಯಾವಾಗ ಕೆಲವು ವಿಷಯಗಳು ಕುಶಲವಾದುದು ಮತ್ತು ಹಿತಕಾರಿ ಎಂದು ಅರಿಯುವಿರೋ ಅದನ್ನು ಸ್ವೀಕರಿಸಿ ಮತ್ತು ಅನುಸರಿಸಿರಿ". 247
5. ಯಾವೆಲ್ಲಾ ವಿಷಯಗಳಿಂದ ಈಗ ಹಾಗು ಮುಂದೆ ದುಃಖ ಅನುಭವಿಸಬೇಕಾಗುವುದೋ ಮತ್ತು ನಾವು ಮತ್ತು ಪರರು ದುಃಖ ಪಡಬೇಕಾಗುವುದೋ ಅದೇ ಅಕುಶಲವಾಗಿದೆ". 248

## 48. ಪಶ್ಚಾತ್ತಾಪ

1. "ಪಶ್ಚಾತ್ತಾಪದಲ್ಲಿ ಪಾಪ ವಿಮುಖತೆ ಸೇರಲಿ". 249
2. "ನಿಮ್ಮ ತಪ್ಪುಗಳನ್ನು ಅರ್ಹರಲ್ಲಿ ಧೈರ್ಯವಾಗಿ ನಿವೇದಿಸಿ ಕೊಳ್ಳಿ". 250
3. "ಯಾರು ತನ್ನ ಶ್ರೇಷ್ಠ ಪುಣ್ಯ ಕಾರ್ಯಗಳಿಂದ ಪಾಪವನ್ನು ಮುಚ್ಚುವನೋ ಅಂತಹವನು ಮೋಡದಿಂದ ಹೊರಬಂದ ಚಂದಿರನಂತೆ ಲೋಕಕ್ಕೆ ಪ್ರಕಾಶ ನೀಡುತ್ತಾನೆ. 251
4. "ಯಾರಲ್ಲಿ ಸತ್ಯ, ಧರ್ಮ, ಧೈರ್ಯ ಮತ್ತು ತ್ಯಾಗ ಇರುವುದೋ ಆತನು ಈ ಲೋಕದಿಂದ ಪರಲೋಕಕ್ಕೆ ಹೋದಮೇಲೆ ಪಶ್ಚಾತ್ತಾಪಪಡುವುದಿಲ್ಲ". 252

## 49. ಸಾಧನೆ

1. "ನಾಲ್ಕು ವಿಧದ ಜನರಿದ್ದಾರೆ : ಒಬ್ಬ ವಿದ್ಯೆಯನ್ನು ಅಲ್ಪವಾಗಿ ಪಡೆಯುತ್ತಾನೆ ಮತ್ತು ಅದರ ಫಲವನ್ನು ಪಡೆಯುವುದಿಲ್ಲ. ಇನ್ನೊಬ್ಬ ವಿದ್ಯೆಯನ್ನು ಅಲ್ಪವಾಗಿ ಪಡೆಯುತ್ತಾನೆ ಆದರೆ ಅದರ ಫಲವನ್ನು ಹೇರಳವಾಗಿ ಪಡೆಯುತ್ತಾನೆ. ಮತ್ತೊಬ್ಬ ಅಪಾರವಾಗಿ ವಿದ್ಯೆ ಪಡೆಯುತ್ತಾನೆ. ಆದರೆ ಅದರ ಫಲ ಮಾತ್ರ ಪಡೆಯುವುದಿಲ್ಲ. ಮಗದೊಬ್ಬ ಅಪಾರ ವಿದ್ಯೆ ಕಲಿತು ಅಪಾರ ಲಾಭವನ್ನು ಗಳಿಸುತ್ತಾನೆ". 253
2. "ರಥಕ್ಕೆ ನಾಲ್ಕು ಚಕ್ರಗಳಿರುವಂತೆ, ದೇವತೆಗಳಿಗೂ, ಮಾನವರಿಗೂ ನಾಲ್ಕು ಆಧಾರಗಳಿವೆ. ಅವುಗಳಿಂದಲೇ ಅವರು ದೀರ್ಘಕಾಲ ಶ್ರೇಷ್ಠತ್ವ ಹಾಗು ಉನ್ನತಿ ಪಡೆಯುತ್ತಾರೆ. ಅವೆಂದರೆ ಯೋಗ್ಯ ಸ್ಥಳದಲ್ಲಿ ವಾಸಿಸುವುದು, ಅರ್ಹರೊಂದಿಗೆ ಬೆರೆಯುವುದು. ಸ್ವ-ವ್ಯಕ್ತಿತ್ವ ವಿಕಾಸಿಸುವುದು ಮತ್ತು ಹಿಂದೆ ಪುಣ್ಯವನ್ನು ಗಳಿಸಿರುವುದು". 254
3. "ನಾಲ್ಕು ವಿಧದ ವ್ಯಕ್ತಿಗಳಿದ್ದಾರೆ : 1. ಒಬ್ಬ ವ್ಯಕ್ತಿ ಬರಿ ಜಂಬ ಕೊಚ್ಚಿಕೊಳ್ಳುತ್ತಾನೆ ಆದರೆ ಸಾಧಿಸುವುದಿಲ್ಲ. 2. ಇಲ್ಲಿ ವ್ಯಕ್ತಿಯು ಜಂಬ ಕೊಚ್ಚಿಕೊಳ್ಳುವುದಿಲ್ಲ ಆದರೆ ಸಾಧಿಸುತ್ತಾನೆ. 3. ಇಲ್ಲಿ ವ್ಯಕ್ತಿ ಜಂಬ ಕೊಚ್ಚಿಕೊಳ್ಳುವುದಿಲ್ಲ ಹಾಗು ಸಾಧಿಸುವುದು ಇಲ್ಲ ಮತ್ತು 4. ಇಲ್ಲಿ ಸಾಧಿಸುವೆ ಎಂದು ಹೇಳಿಕೊಳ್ಳುತ್ತಾನೆ ಹಾಗೆಯೇ ಕಾರ್ಯತಃ ಅದನ್ನು ಸಾಧಿಸಿಯೂ ತೋರಿಸುತ್ತಾನೆ". 255
4. "ಹೇಗೆ ಒಬ್ಬನ ತಲೆಯು ಅಥವಾ ತಲೆ ಮೇಲಿನ ಬಟ್ಟೆಯು ಸುಡುವಾಗ ಅದನ್ನು ಆರಿಸಲು ಹೇಗೆ ಕಾರ್ಯತತ್ಪರರಾಗುತ್ತಾರೋ ಅದೇರೀತಿಯಲ್ಲಿ ಒಬ್ಬನು ಇಚ್ಛಾಶಕ್ತಿಯಿಂದ, ಪ್ರಯತ್ನಶೀಲತೆಯಿಂದ, ಜಾಗರೂಕತೆಯಿಂದ, ಇಲ್ಲದಿದ್ದ ಕುಶಲಸ್ಥಿತಿಗಳನ್ನು ಉಂಟುಮಾಡಿ ಅವನ್ನು ವೃದ್ಧಿಗೊಳಿಸುತ್ತಾನೆ ಹಾಗೆಯೇ ಮಾನಸಿಕ ಪ್ರಶಾಂತತೆ ಹಾಗು ಪ್ರಜ್ಞಾವನ್ನು ಪ್ರಾಪ್ತಿ ಮಾಡುತ್ತಾನೆ".

## 50. ತಡೆಗಳು

1. "ಪರಿಶುದ್ಧವಾದ ಸಮಾಧಿಗೆ ಹಾಗು ಉನ್ನತವಾದ ಜ್ಞಾನಕ್ಕೆ ಈ ಐದು ತಡೆಗಳಾಗಿವೆ. ಅವೆಂದರೆ ಬೋಗಾಭಿಲಾಶೆ, ದ್ವೇಷ, ಜಡತೆ ಮತ್ತು ಸೋಮಾರಿತನ ಅವಿಶ್ರಾಂತಿ ಮತ್ತು ಚಿಂತೆ ಹಾಗು ಸಂದೇಹ". 257
2. "ಚಿತ್ತದ 5 ತಡೆಗಳನ್ನು ತ್ಯಜಿಸಿ ಚಿತ್ತದ ಸರ್ವ ಸ್ಥಿತಿಗಳಿಂದ ದೂರವಾಗಿ, ಅನಾಸಕ್ತನಾಗಿ, ಸ್ನೇಹವನ್ನು (ಅಂಟುವಿಕೆ) ಬಿಟ್ಟು ಖಡ್ಗಮೃಗದ ರೀತಿ ಏಕಾಂಗಿಯಾರಿ ಸಂಚರಿಸು". 258
3. "ಯಾರು 50 ಜನರನ್ನು ಪ್ರೇಮಿಸುತ್ತಾನೋ ಅತನಿಗೆ 50 ಶೋಕ ಸನ್ನಿವೇಶವಿದೆ. ಯಾರು ಯಾರಿಗೂ ಪ್ರೇಮಿಸುವುದಿಲ್ಲವೋ ಆತನಿಗೆ ಶೋಕವಿಲ್ಲ. 259
4. "ಯಾರ ಮನಸ್ಸು ತಡೆಗಳಿಂದ ಕೂಡಿದೆಯೋ, ಆತನು ಮಾಡಬೇಕಾದುದನ್ನು ಮಾಡಲಾರ, ಮಾಡಬಾರದನ್ನು ಮಾಡುವನು". 260
5. "ಯಾರ ಮನಸ್ಸು ತಡೆಗಳಿಂದ ಮುಕ್ತವಾಗಿದೆಯೋ ಅಂತಹ ಮನಸ್ಸು, ಮಣಿಯುವಂತಹುದು, ಕಾರ್ಯಶೀಲವು, ಪ್ರಕಾಶಮಾನವು, ದೃಢವಾದುದು ಮತ್ತು ಆಳ ಏಕಾಗ್ರಶೀಲವಾದುದು ಆಗಿರುತ್ತದೆ". 261

## 51. ಕುಡಿತ

1. “ಕುಡಿತದಿಂದಾಗುವ ಅಪಾಯಗಳೆಂದರೆ : ಐಶ್ವರ್ಯಹಾನಿ, ಜಗಳಗಳ ಹೆಚ್ಚಾಗುವಿಕೆ, ಭೀಕರ ರೋಗಕ್ಕೆ ತುತ್ತಾಗುವಿಕೆ, ಚಾರಿತ್ರ್ಯ ನಾಶ, ನಾಚಿಕೆರಹಿತ ವಸ್ತ್ರಧಾರಣೆ, ಬುದ್ಧಿನಾಶ ಮತ್ತು ಕುಖ್ಯಾತಿ ಪಡೆಯುತ್ತಾನೆ”. 262

2. “ಈ ಪ್ರಪಂಚವು ಸದಾ ಹತ್ತಿ ಉರಿಯುತ್ತಿರುವಾಗ ಈ ನಗು ಏತಕ್ಕೆ? ಈ ಆನಂದ ಏತರದು? ಅಂಧಕಾರದಲ್ಲಿ ಕಳೆದು ಹೋಗಿರುವ ನೀನು ಬೆಳಕನ್ನು ಹುಡುಕುವುದಿಲ್ಲವೆ? 263

3. “ಯಾರು ಸದಾ ಕುಡಿತದ ಅಂಗಡಿಗಳಲ್ಲಿ ಸೇರುವರೋ ಮತ್ತು ಅದರಲ್ಲಿ ಆನಂದಿಸುವನೋ, ಅವನು ನೀರಿನಲ್ಲಿ ಬಿದ್ದ ಕಲ್ಲು ಮುಳುಗುವಂತೆ, ಸಾಲಗಾರನಾಗಿ, ತನ್ನ ಕುಟುಂಬಕ್ಕೆ ಕುಖ್ಯಾತಿ ತಂದು ಅವನತಿಯಾಗುವನು”. 264

4. “ಆತನಿಗೆ ಸಭೆಗಳಲ್ಲಿ ಗೌರವವಿರುವುದಿಲ್ಲ. ಆತನ ಮಾತಿಗೆ ಮೌಲ್ಯ ಇರುವುದಿಲ್ಲ. ಅನಾವಶ್ಯಕ ಮಾತುಗಳಿಂದ ಆತನ ಸರ್ವ ರಹಸ್ಯ ಬಹಿರಂಗವಾಗುತ್ತದೆ”. 265

5. ಮಾನವನಿಗೆ 5 ಐಶ್ವರ್ಯಗಳಿರುತ್ತದೆ. ಅವೆಂದರೆ : ಆರೋಗ್ಯ, ಧನ, ಮಿತ್ರತ್ವ, ಶೀಲ ಮತ್ತು ಸಮ್ಯಕ್ ದೃಷ್ಟಿ. ಅವೆಲ್ಲವೂ ಕುಡಿತದಿಂದ ಭ್ರಷ್ಟವಾಗಿ, ನಷ್ಟವಾಗಿ ಹೋಗುತ್ತದೆ. 266

6. “ಕುಡಿತದಿಂದ ವ್ಯಕ್ತಿಯಲ್ಲಿ ಶೀಲ ಮರೆಯಾಗುತ್ತದೆ. ಆತನ ಬೇರೆ ಶೀಲಗಳು ಸಡಿಲವಾಗುತ್ತದೆ. ಆತನ ಮನವು ಪಾಪಕೃತ್ಯಗಳಿಗೆ ಸುಲಭವಾಗಿ ಜಾರುತ್ತದೆ”. 267

## 52. ಜೂಜು

1. “ಜೂಜಾಡುವವನು ಈ ರೀತಿಯ ಅಪಾಯಗಳನ್ನು ಪಡೆಯುತ್ತಾನೆ : ಗೆದ್ದವನು ದ್ವೇಷಗಳಿಗೆ ಗುರಿಯಾಗುತ್ತಾನೆ, ಸೋತವನು ಧನ ಹಾನಿಯಿಂದ ದುಃಖಿತನಾಗುತ್ತಾನೆ. ಧನಹಾನಿ, ಆತನ ಮಾತಿಗೆ ಮೌಲ್ಯವಿಲ್ಲದಂತಾಗುತ್ತದೆ. ಆತನು ಮಿತ್ರ-ಬಂಧುಗಳಿಂದ ತಿರಸ್ಕಾರಕ್ಕೆ ಗುರಿಯಾಗುತ್ತಾನೆ. ಆತನಿಗೆ ವಿವಾಹವಾಗಲು ಹೆಣ್ಣನ್ನು ಯಾರೂ ನೀಡುವುದಿಲ್ಲ ಮತ್ತು ಆತನು ಹೆಂಡತಿಯನ್ನು ಸಾಕಲು ಆಗದವನು ಆಗುತ್ತಾನೆ”. 268

2. “ಯಾರು ಜೂಜಾಟದಲ್ಲಿ ಆನಂದಿಸುತ್ತಾನೋ, ಕುಡಿತದಲ್ಲೆ ತಲ್ಲೀನನೋ, ವ್ಯಭಿಚಾರ ನಿರತನೋ, ಅಸಭ್ಯರ ಸಂಗ ಸೇರುವನೋ, ಜ್ಞಾನಿಗಳನ್ನು ಸೇರುವುದಿಲ್ಲವೋ ಅಂತಹವನ ಐಶ್ವರ್ಯ ಕ್ಷೀಣಿಸುತ್ತದೆ”. 269

3. “ಯಾರು ಜೂಜಾಟದಲ್ಲಿ ತನ್ನ ಸರ್ವಸ್ವ ಧನವನ್ನು ಕಳೆದು ಕೊಳ್ಳುವನೋ ಅದು ಅಲ್ಪ ಹಾನಿ ಆಗಿದೆ. ಆದರೆ ಎಲ್ಲಕ್ಕಿಂತ ದೊಡ್ಡ ಹಾನಿ ತಥಾಗತರ ಬಗ್ಗೆ ಮನವನ್ನು ದೂಷಿತ ಮಾಡುವುದಾಗಿದೆ. 270

4. “ಯಾವ ವ್ಯಕ್ತಿ ಸ್ತ್ರೀಯರ ಹಿಂದೆ ಬಿದ್ದಿರುವನೋ, ಕುಡುಕನೋ, ಹಾಗು ಜೂಜುಕೋರನೋ ಸಂಪಾದಿಸಿದ ಸರ್ವಧನವನ್ನು ನಷ್ಟ ಮಾಡಿರುವನೋ ಅದೇ ಆತನ ಅವನತಿಯ ಕಾರಣ ವಾಗಿದೆ”. 271

## 53. ಸೋಮಾರಿತನ

1. "ಯುವಕನಾಗಿ, ಬಲಿಷ್ಠನಾಗಿಯು ಯಾರು ಶ್ರಮಿಸುವುದಿಲ್ಲವೋ ಸೋಮಾರಿಯಾಗಿರುವನೋ, ಯಾರು ತನ್ನ ಗುರಿಯ ಬಗೆಗಿನ ನಿರ್ಧಾರಗಳನ್ನು ಸಡಿಲಗೊಳಿಸಿರುವನೋ ಅಂತಹ ಸೋಮಾರಿಯು ಎಂದಿಗೂ ಜ್ಞಾನದ ಮಾರ್ಗವನ್ನು ಅರಿಯಲಾರ". 272

2. "ಯಾರಲ್ಲಿ ಹಗಲಿನ ಹೊತ್ತು ನಿದ್ರಿಸುವ ಚಟವಿದೆಯೋ, ಅತಿ ಚಳಿ, ಅತಿ ಬಿಸಿಲು, ತುಂಬಾ ಹೊತ್ತಾಯಿತು ಎಂದು ಸಮರ್ಥಿಸುತ್ತಾ ತನ್ನ ಕಾರ್ಯಗಳನ್ನು ಮುಂದೂಡುತ್ತಾನೋ, ಕೇವಲ ಅವಕಾಶಗಳಿಗೆ ಕಾಯುತ್ತಾನೋ ಮತ್ತು ಕಳೆದುಕೊಳ್ಳುತ್ತಾನೋ ಅಂತಹವ ಗ್ರಹಸ್ಥ ಜೀವನಕ್ಕೆ ಅರ್ಹನಲ್ಲ". 273

3. "ಸೋಮಾರಿಯು ವಾತಾವರಣದ ನೆಪ ಮಾಡುತ್ತಾ, ಕಾಲದ ನೆಪ ಮಾಡುತ್ತಾ, ಹಸಿವು ನೀರಡಿಕೆಯ ನೆಪ ಮಾಡುತ್ತಾ, ಯಾವ ಕಾರ್ಯ ಮಾಡದೆ ಇರುತ್ತಾನೋ, ಆತನಲ್ಲಿ ಹೊಸ ಧನ ಸೇರದೆ ಹಳೆಯದೆಲ್ಲಾ ಖಾಲಿಯಾಗಿ ದರಿದ್ರನಾಗುತ್ತಾನೆ". 274

4. "ಸೋಮಾರಿಯಾಗಿರುವ ಗ್ರಹಸ್ಥ ಒಳ್ಳೆಯವನಲ್ಲ. ಸಂಯಮ ವಿಲ್ಲದ ಸಾಧು ಒಳ್ಳೆಯವನಲ್ಲ, ಕೋಪಪಡುವ ಜ್ಞಾನಿಯು ಒಳ್ಳೆಯವನಲ್ಲ". 275

## 54. ಮೂರ್ಖ

1. "ಮೂರ್ಖನಿಗೆ ಜ್ಞಾನ ಮತ್ತು ಕೀರ್ತಿ ಸಿಗುವುದು. ಆತನ ನಾಶಕ್ಕಾಗಿಯೇ, ಅದು ಅವನ ಯಶಸ್ಸನ್ನು ನಾಶಪಡಿಸಿ ಆತನ ತಲೆ ತಿರುಗಿಸುತ್ತದೆ". 276

2. "ಅಲ್ಪಜ್ಞ ಮಾನವರಿಗೆ ಪಶುಗಳಂತೆ ಮಾಂಸ ಬೆಳೆದಿರುತ್ತದೆಯೇ ಹೊರತು ಜ್ಞಾನ ಬೆಳೆದಿರುವುದಿಲ್ಲ". 277

3. "ಯಾರು ದೋಷರಹಿತರಾದ ಶುದ್ಧ, ನಿರ್ಮಲ, ಪುರುಷರಿಗೆ ದ್ವೇಷಿಸುತ್ತಾರೋ ಅವರ ಪಾಪ ಎದುರು ದಿಕ್ಕಿನಲ್ಲಿ ಬರುತ್ತಿರುವ ಗಾಳಿಗೆ ದೂಳನ್ನು ಎಸೆದಂತೆ ಅದೇ ಮೂರ್ಖರ ಮೇಲೆ ಬೀಳುತ್ತದೆ". 278

4. "ಯಾರಲ್ಲಿ ಕೊರತೆಯಿರುವುದೋ ಆತನು ಕೀರ್ತಿಗಾಗಿ ಪ್ರಚಾರ (ಶಬ್ದ) ಮಾಡುತ್ತಾನೆ. ಆದರೆ ಪೂರ್ಣವಾಗಿರುವವರು ಶಾಂತರಾಗಿರುತ್ತಾರೆ. ಮೂರ್ಖ ಅರ್ಧ ತುಂಬಿದ ಗಡಿಗೆಯಂತೆ, ಆದರೆ ಪಂಡಿತರು ತುಂಬಿದ ಜಲಾಶಯದಂತೆ ಇರುತ್ತಾರೆ". 279

## ೫೫. ಪ್ರಿಯವಾದುದು

1. "ಕಲಹ, ವಿವಾದ, ವಿಲಾಪ, ಶೋಕ, ಜಿಪುಣತನ, ಅಹಂ, ಅಭಿಮಾನ ಮತ್ತು ಚಾಡಿತನ ಇವೆಲ್ಲವೂ ಪ್ರಿಯವಾದುದರಿಂದ ಉತ್ಪನ್ನವಾಗುತ್ತದೆ. ಕಲಹವು ಮತ್ತು ವಿವಾದ ಸ್ವಾರ್ಥದಿಂದ ಯುಕ್ತವಾಗಿದೆ ಮತ್ತು ವಿವಾದ ಉತ್ಪನ್ನದಿಂದ ಚಾಡಿತನವು ಆಗುತ್ತದೆ". 280

2. "ಲೋಕದಲ್ಲಿ ಯಾವ ಪ್ರಿಯ ಮತ್ತು ಅಪ್ರಿಯಗಳಿವೆಯೋ ಅದರ ಕಾರಣದಿಂದಲೇ ಇಚ್ಛೆಯು ಉಂಟಾಗುತ್ತದೆ". 281

3. "ಇಂದ್ರಿಯ ವಿಷಯಗಳ ಸ್ಪರ್ಶದಿಂದ ಸುಖ (ಪ್ರಿಯ) ಮತ್ತು ದುಃಖ (ಅಪ್ರಿಯ) ವೇದನೆಗಳು ಉಂಟಾಗುತ್ತದೆ. ಸ್ಪರ್ಶ ಇಲ್ಲದಿದ್ದರೆ ಇವು ಆಗುವುದಿಲ್ಲ". 282

4. ಐದು ರೀತಿಯ ಪ್ರಿಯವಾದ ಹಾಗು ಮನೋರಮವಾದ ಕಾಮಬೋಗಗಳನ್ನು ತ್ಯಜಿಸಿ ಶ್ರದ್ಧಾಪೂರ್ವಕವಾಗಿ ಅನಿಕೇತನನಾಗಿ ದುಃಖದ ಅಂತ್ಯಮಾಡು". 283

## ೫೬. ಕೋಪ

1. "ಕೋಪವುಳ್ಳವ ಎಂತಹ ಕುರೂಪಿ! ಆತನು ಸುಖಿಯಾಗಿ ಮಲಗಲಾರ, ಅಪಾರ ಐಶ್ವರ್ಯವಂತನಾಗಿದ್ದರೂ ಸಹಾ ಆತ ಸದಾ ಬಡವನೇ, ಕೋಪದಿಂದ ತುಂಬಿದವನಾಗಿ ಆತನು ತನ್ನ ಕ್ರಿಯೆ ಮತ್ತು ಮಾತುಗಳಿಂದ ಹಿಂಸಿಸಿಕೊಳ್ಳುತ್ತಿರುತ್ತಾನೆ". 284

2. "ನಿನ್ನ ಕೋಪವನ್ನು ಕೊಲ್ಲು ಮತ್ತು ಸುಖಿಯಾಗಿರು. ನಿನ್ನ ಕೋಪವನ್ನು ಕೊಲ್ಲು ಮತ್ತು ನೀನು ದುಃಖಿಸಲಾರೆ. ಕೋಪವನ್ನು ಎಲ್ಲಾ ರೀತಿಯಲ್ಲಿ ಕೊಂದು ಅದರ ವಿಷಭರಿತ ಬೇರುಗಳನ್ನು ಮತ್ತು ಸಿಹಿ ಮುಳ್ಳುಗಳನ್ನು ಕಿತ್ತು ಎಸೆ, ಕಡಿದುಹಾಕು. ಅಂತಹುದಕ್ಕೆ ಉದಾತ್ತರು ಪ್ರಶಂಸಿಸುತ್ತಾರೆ. ಕೋಪವನ್ನು ಕೊಂದವನು ಮುಂದೆ ಅಳಲಾರ". 285

3. "ಕೋಪಗೊಂಡ ಮನುಷ್ಯನು ಶತೃವಿಗೆ ಈ ರೀತಿ ಕೆಡಕನ್ನು ಇಚ್ಛಿಸುತ್ತಾನೆ. ಆತ ಕುರೂಪನಾಗಲಿ, ದುಃಖಿತನಾಗಲಿ, ಉನ್ನತಿ ತಾಳದಿರಲಿ, ಬಡವನಾಗಲಿ, ಕೀರ್ತಿ ಇಲ್ಲದಿರಲಿ, ಮಿತ್ರರು ಇಲ್ಲದಿರಲಿ, ದುರ್ಗತಿಗೆ ಹೋಗಲಿ. ಆದರೆ ಆ ರೀತಿಯ ಇಚ್ಛೆಯ ಪರಿಣಾಮದಿಂದ ಆತನೇ ಮುಂದೆ ಕುರೂಪಿಯಾಗುತ್ತಾನೆ, ದುಃಖಿತನಾಗುತ್ತಾನೆ, ಅವನತಿ ತಾಳುತ್ತಾನೆ, ಬಡವನಾಗುತ್ತಾನೆ. ಕೀರ್ತಿರಹಿತನಾಗುತ್ತಾನೆ, ಮಿತ್ರರನ್ನು ಕಳೆದುಕೊಳ್ಳುತ್ತಾನೆ ಮತ್ತು ದುರ್ಗತಿಗೆ ಹೋಗುತ್ತಾನೆ". 286

4. "ಹೀಗೆ ನಿಮಗೆ ನೀವು ಶಿಕ್ಷಣ ನೀಡಿಕೊಳ್ಳಿ. 'ನಾವು ಆಕಾಶದಂತೆ ಶತ್ರುತ್ವಭಾವವಿಲ್ಲದೆ, ಕೋಪ ದ್ವೇಷವಿಲ್ಲದೆ, ಮೈತ್ರಿಯಿಂದ ಇಡೀ ಜಗತ್ತನ್ನು ವಿಶಾಲಾನಂತವಾಗಿ, ಅಳತೆಗೆ ಮೀರಿ ಹಬ್ಬಿಸುತ್ತೇವೆ". 287

## 57. ಭಯ

1. "ಯಾವೆಲ್ಲ ರೀತಿಯ ಭಯವು ಉದಯಿಸುವುದೋ ಅವೆಲ್ಲಾ ಮೂರ್ಖನ ಮನಸ್ಸಿನಲ್ಲಿ ಉಂಟಾಗುತ್ತದೆ, ಜ್ಞಾನಿಯಲ್ಲಿ ಅಲ್ಲ". 288
2. "ಏಕಾಂತ ಫಲರಸವನ್ನು ಕುಡಿದು, ಶಾಂತಿರಸದ ಸವಿಯನ್ನು ಉಂಡವನು, ಪಾಪವಿಲ್ಲದವನಾಗುತ್ತಾನೆ, ಧಮ್ಮರಸವನ್ನು ಸವಿದವನು ಭಯರಹಿತನಾಗುತ್ತಾನೆ". 289
3. "ನಾಲ್ಕು ರೀತಿಯ ಭಯಗಳಿವೆ. ಅವೆಂದರೆ : ಜನ್ಮ ಭಯ, ರೋಗ ಭಯ, ವೃದ್ಧಾಪ್ಯ ಭಯ ಮತ್ತು ಮರಣದ ಭಯ". 290
4. "ಮತ್ತೇ ನಾಲ್ಕು ರೀತಿಯ ಭಯಗಳಿವೆ ಅವೆಂದರೆ : ಬೆಂಕಿಯ ಭಯ, ನೀರಿನ ಭಯ, ರಾಜರ ಭಯ ಮತ್ತು ಕಳ್ಳರ ಭಯ". 291
5. "ಮತ್ತೆ ನಾಲ್ಕು ರೀತಿ ಭಯಗಳಿವೆ ಅವೆಂದರೆ : ಸ್ವನಿಂದನ ಭಯ, ಪರನಿಂದನಾ ಭಯ, ಶಿಕ್ಷೆಯ ಭಯ ಮತ್ತು ದುರ್ಗತಿಯ ಭಯ". 292
6. "ಪ್ರಿಯವಾದುದರಿಂದ ಶೋಕವು ಹುಟ್ಟುತ್ತದೆ. ಪ್ರಿಯವಾದುದರಿಂದ ಭಯವು ಹುಟ್ಟುತ್ತದೆ. ಯಾರು ಪೂರ್ಣವಾಗಿ ಪ್ರಿಯಭಾವನೆಯಿಂದ ಮುಕ್ತರೋ ಅವರಿಗೆ ಶೋಕವಿಲ್ಲ, ಭಯ ಇನ್ನೆಲ್ಲಿ?" 293

## 58. ಧೈರ್ಯ

1. "ದುಃಖದ ಸ್ಪರ್ಶ ಆದಾಗಲು ಸಹಾ ಭಿಕ್ಷು ವಿಲಾಪಿಸದಿರಲಿ, ಭವದ ತೃಷ್ಣೆ ಮಾಡದಿರಲಿ ಮತ್ತು ಭಯಾನಕತೆಯಿಂದ ಕಂಪಿತನಾಗದಿರಲಿ". 294
2. "ಯಾರು ಸಮಾಧಿಯ ಉನ್ನತ ಸ್ಥಿತಿ ಪ್ರಾಪ್ತಿಮಾಡಿರುವನೋ ಆತನು ಧೈರ್ಯವಾಗಿ ನಡೆದಾಡುತ್ತಾನೆ. ಧೈರ್ಯವಾಗಿ ನಿಲ್ಲುತ್ತಾನೆ. ಇದಕ್ಕೆ ಕಾರಣವೇನು? ಏಕೆಂದರೆ ಆತನು ಪಾಪದ ಯೋಚನೆಗಳಿಗೆ ಅತೀತನಾಗಿದ್ದಾನೆ". 295
3. "ಭಯ ಮತ್ತು ಮರಣ ಎದುರಾದಾಗ ನನ್ನ ಮನಸ್ಸು ಆಹ್ಲಾದಕರವಾಯಿತು. ಈ ಉತ್ಸಾಹಿತ ಸ್ಥಿತಿಯಲ್ಲಿ ಶತ್ರುಗಳನ್ನು ಗೆದ್ದುಬಿಟ್ಟೆ. ನಾನು ಮೊದಲೇ ಜೀವನ ಪರಿತ್ಯಾಗ ಮಾಡಿಬಿಟ್ಟಿದ್ದೆ. ಬದುಕಲು ಆಶಿಸುವ ಧೀರ ಎಂದಿಗೂ ಪರಾಕ್ರಮದ ಸಾಹಸ ಮಾಡುವುದಿಲ್ಲ". 296
4. "ಅರ್ಥ-ವಿನಿಮಯವನ್ನು ತಿಳಿದ ಜ್ಞಾನಿ ಆಪತ್ತು ಎದುರಾದಾಗ ಎಂದಿಗೂ ಭೀತಿ ಪಡುವುದಿಲ್ಲ. ಅದನ್ನು ಕಂಡ ಆತನ ಶತ್ರುಗಳು ಆತನ ಅವಿಕಾರ ಮುಖವನ್ನು ಕಂಡು ದುಃಖಿತರಾಗುತ್ತಾರೆ". 297
5. "ಅಪಾಯದ ವಿಷಯದಲ್ಲಿ ವಿಪತ್ತನ್ನು ಒಪ್ಪಬೇಕು. ಭವಿಷ್ಯದ ಭಯದಿಂದ ರಕ್ಷಿಸಿಕೊಳ್ಳಬೇಕು. ಧೀರ ಪುರುಷ ಬರಲಿರುವ ಅಪಾಯಗಳಿಂದ ತಪ್ಪಿಸಿಕೊಳ್ಳುತ್ತಾ ಉಭಯ ಲೋಕಗಳ ರಕ್ಷಣೆ ಮಾಡುತ್ತಾನೆ. 298
6. "ಗ್ರಾಮದಲ್ಲೂ ಭಯರಹಿತರಾಗಿದ್ದೇನೆ, ಅರಣ್ಯದಲ್ಲೂ ನನಗೆ ಭಯವಿಲ್ಲ. ಋಜು ಮಾರ್ಗದಲ್ಲಿ ಕೂಡಿರುವವನಾಗಿ ಮೈತ್ರಿ ಮತ್ತು ಕರುಣೆಯಿಂದ ಕೂಡಿದ್ದೇನೆ". 299

## ೫೯. ಪಾಪ

1. "ಪಾಪವನ್ನು 'ಅದು ನನಗೆ ತಟ್ಟುವುದಿಲ್ಲ' ಎಂದು ಅಲ್ಪವೆಂದು ಭಾವಿಸಬೇಡ. ಹೇಗೆ ಮಡಿಕೆಯು ಹನಿಗಳಿಂದ ತುಂಬಿಕೊಳ್ಳುತ್ತದೆಯೋ ಹಾಗೆಯೇ ಪಾಪಿಯು ತನ್ನನ್ನು ಪಾಪದಿಂದ ತುಂಬಿಕೊಳ್ಳುತ್ತಾನೆ". 300

2. "ಪ್ರತಿಯೊಂದು ಪಾಪವು ಮಾಡುವವನಿಗೆ ಹೆಚ್ಚು ನೋವನ್ನು ಕೊಡುತ್ತದೆಯೇ ಹೊರತು ನಿರಪರಾಧಿಗೆ ಅಲ್ಲ." 301

3. "ಮೂರ್ಖನು ತಾನು ಪಾಪವನ್ನು ಮಾಡುವಾಗ ಅದನ್ನು ಮಧುವಿನಷ್ಟೇ ಸಿಹಿ ಎಂದು ಭಾವಿಸುತ್ತಾನೆ. ಆದರೆ ಅದರ ಫಲ ಅನುಭವಿಸುವಾಗ ದುಃಖಕ್ಕೆ ಒಳಗಾಗಿ ದುಃಖವೆಂದು ಅರಿಯುತ್ತಾನೆ". 302

4. "ಕಬ್ಬಿಣದಲ್ಲಿ ಹುಟ್ಟುವ ತುಕ್ಕು ಅದನ್ನೇ ತಿನ್ನುವಂತೆ ಪಾಪಿಯನ್ನು ಪಾಪವು ದುರ್ಗತಿಗೆ ತಳ್ಳುತ್ತದೆ". 303

5. "ಕೈಯಲ್ಲಿ ಗಾಯ ಇರದಿದ್ದರೆ ಒಬ್ಬನು ವಿಷವನ್ನು ತೆಗೆದುಕೊಂಡು ಹೋಗಬಹುದು. ಹೇಗೆ ವಿಷವು ಕೈಗೆ ಯಾವರೀತಿಯ ಪ್ರತಿಕ್ರಿಯೆ ನೀಡಿಲ್ಲವೋ ಹಾಗೆಯೇ ಪಾಪ ಮಾಡದವನಿಗೆ ಯಾವ ಕೆಡಕು ಇಲ್ಲ". 304

## ೬೦. ಜ್ಞಾನಿ

1. "ಕೊಲ್ಲುವಿಕೆ, ಕಳ್ಳತನ, ಸುಳ್ಳು, ಮದ್ಯಪಾನ ಮತ್ತು ವ್ಯಭಿಚಾರ ಇವು ಜ್ಞಾನಿಗಳಿಂದ ಎಂದಿಗೂ ಪ್ರಶಂಸೆ ಗಳಿಸಲಾರದು". 305

2. "ಜ್ಞಾನಿಯು ತನ್ನ ವರ್ತನೆಯನ್ನು ಪ್ರತಿದಿನ ಪರೀಕ್ಷೆ ಮಾಡುತ್ತಿರುತ್ತಾನೆ". 306

3. "ಒಬ್ಬನು ಪರರು ಏನು ಸಾಧಿಸಿದ್ದಾರೆ ಮತ್ತು ಏನನ್ನು ತ್ಯಜಿಸಿದ್ದಾರೆ ಎಂದು ಪರರ ತಪ್ಪನ್ನು ಹುಡುಕದಿರಲಿ. ಬದಲಾಗಿ ತಾನು ಏನನ್ನು ಸಾಧಿಸಿದ್ದೇನೆ ಹಾಗು ಏನನ್ನು ತ್ಯಜಿಸಿಲ್ಲ ಎಂದು ಅನ್ವೇಷಿಸಲಿ". 307

4. "ಕಾರ್ಯಗಳೇ ಮಾನವನನ್ನು ಶ್ರೇಷ್ಠ ಮತ್ತು ಶುದ್ಧನನ್ನಾಗಿ ಮಾಡುತ್ತವೆ". 308

5. "ಸಾಧುಗಳು ಪ್ರತಿಯೊಂದರ ಆಸಕ್ತಿಯನ್ನು ತ್ಯಜಿಸುತ್ತಾರೆ. ಸಂತರು ಭೋಗಕ್ಕೆ ಹಾತೊರೆಯುವುದಿಲ್ಲ ಮತ್ತು ಜ್ಞಾನಿಗಳು ಸುಖಕ್ಕೆ ಅಥವಾ ದುಃಖಕ್ಕೆ ಸಿಲುಕಿದಾಗ ಹಿಗ್ಗುವುದೂ ಇಲ್ಲ, ಕುಗ್ಗುವುದು ಇಲ್ಲ". 309

6. "ತನಗೆ ತೋಚಿದ ಹಾಗೆ ತೀರ್ಮಾನ ಹೇಳುವವನು ಧರ್ಮಿಷ್ಟನಲ್ಲ, ವಿವೇಕಿಯು ಒಳಿತು ಹಾಗು ಕೆಡುಕನ್ನು ಅನ್ವೇಷಿಸಿ ತಿಳಿಸುತ್ತಾನೆ". 310

## 61. ಸ್ತ್ರೀ

1. "ದುಶ್ಚರಿತೆಯು ಹೆಣ್ಣಿಗೆ ಮಲ, ಜಿಪುಣತನವು ದಾನಿಗೆ ಮಲ, ಸರ್ವ ಕೆಟ್ಟ ಕಾರ್ಯಗಳು ಈಗಲು ಮತ್ತು ಮುಂದೆಯೂ ಮಲವೇ ಆಗಿದೆ". 311

2. "ಕೆಲವು ಹೆಣ್ಣುಮಕ್ಕಳು, ಗಂಡು ಮಕ್ಕಳಗಿಂತ ಉತ್ತಮರಾಗಿರುತ್ತಾರೆ, ಓ ಮಹಾರಾಜ, ಅವರನ್ನು ಚೆನ್ನಾಗಿ ಬೆಳೆಸು, ಅವರು ಶೀಲವಂತರಾಗಿರುವರು. ಶ್ರೇಷ್ಠ ಸತಿಗೆ ಚಕ್ರವರ್ತಿಯಂತಹ ಅತ್ಯುತ್ತಮ ಮಗ ಹುಟ್ಟುವನು". 312

3. "ಸ್ತ್ರೀಯು ಧಾರ್ಮಿಕಳಾಗಿರಬೇಕು, ಪಾಪಗಳಗೆ ನಾಚಿಕೆ, ಭಯಪಡುವವ ಳಾಗಿರಬೇಕು. ಕೋಪ ಅಸೂಯೆಯಿಂದ ದೂರವಿರಬೇಕು, ಸಂಶಯದಿಂದ ಕೂಡಿರಬಾರದು, ದಾನಿಯಾಗಿರಬೇಕು, ಶೀಲವಂತೆಯಾಗಿರಬೇಕು. ಕಾರ್ಯದಕ್ಷಳು, ಜಾಗರೂಕಳು, ಜಾಣೆಯು, ದೂರದೃಷ್ಟಿಯುಳ್ಳವಳು ಆಗಿರಬೇಕು". 313

4. "ಓ ಗೌತಮಿ, ಕೆಲವರು 'ಸ್ತ್ರೀ ಅರಹಂತೆಯಾಗುವಳೇ?' ಎಂದು ಸಂಶಯ ತಾಳದ್ದಾರೆ, ತೋರಿಸು ನಿನ್ನ ಅತಿಮಾನವ ಶಕ್ತಿಯನ್ನು, ಹೊಡೆದೋಡಿಸು ಅವರ ಸಂದೇಹವನ್ನು". 314

5. "ಎಲ್ಲಾ ಕಡೆಯಲ್ಲೂ ಪುರುಷರೇ ಪಂಡಿತರಾಗುವುದಿಲ್ಲ. ಕೆಲವು ವಿಷಯದಲ್ಲಿ ಸ್ತ್ರೀಯರು ಬುದ್ಧಿವಂತರಾಗಿರುತ್ತಾರೆ". 315

## 62. ಸೇವೆ

1. "ಸಮಾಜ ಸೇವೆಯ ನಾಲ್ಕು ನಿಯಮಗಳು : 1. ದಾನಿಯಾಗಿರುವುದು 2. ಸಭ್ಯ ಮಾತು 3. ಸಮದರ್ಶಿತ್ವ 4. ಶೀಲವಂತಿಕೆ ಚಕ್ರಕ್ಕೆ ಕಡ್ಡಿಗಳರುವಂತೆ ಇವುಗಳಂದ ಸಮಾಜ ಸಾಗುತ್ತದೆ". 316

2. "ಯಾರು ಸಮಾಜದ ಸೇವೆ ಮಾಡ ಬಯಸುವರೋ ಅವರು ಸರ್ವರ ಮಿತ್ರರಾಗಿರಬೇಕು. ಯಾರಿಗೆ ಸಹಾಯ ಮಾಡಬೇಕೋ ಅವರ ಅವಶ್ಯಕತೆ ತಿಳಯಬೇಕು, ದಾನಿಯಾಗಬೇಕು. ಕ್ಷಮಾವಂತ ಸಹನೆಯುಳ್ಳವರಾಗಬೇಕು. ಅಂತಹವರು ಖ್ಯಾತಿ ಹೊಂದುತ್ತಾರೆ". 317

3. "ನೀವು ಸಹನಾಶೀಲರಾಗಬೇಕು, ಕರುಣಾಭರಿತರಾಗಬೇಕು. ಸದಾ ಸೇವಾ ಮನೋಭಾವದಿಂದ ಕೂಡಿರಬೇಕು. 318

4. "ಬಹುಜನ ಸುಖಕ್ಕಾಗಿ, ಬಹುಜನ ಹಿತಕ್ಕಾಗಿ, ಲೋಕಾನುಕಂಪದಿಂದ ಚಲಿಸಿರಿ, ಸೇವೆಮಾಡಿ". 319

5. ಹೂವಿನ ರಾಶಿಯಿಂದ ಅನೇಕ ಹಾರಗಳನ್ನು ಮಾಡುವ ರೀತಿಯಲ್ಲೇ ಮಾನವನಾದ ಮೇಲೆ ಅನೇಕ ಸತ್ಕಾರಗಳನ್ನು ಮಾಡಬೇಕು". 320

6. "ನಾವು ಪರರನ್ನು ಸಲಹುವುದರಲ್ಲಿ ಸೋತರೆ, ನಮ್ಮನ್ನು ಯಾರು ನೋಡಿಕೊಳ್ಳುತ್ತಾರೆ?" 321

## ೬೩. ಪುಣ್ಯ

1. “ಸತ್ಕಾರ್ಯ ಮಾಡುವುದರಲ್ಲೇ ತ್ವರಿತನಾಗು, ಕೆಟ್ಟದ್ದರಿಂದ ನಿನ್ನ ಮನಸ್ಸನ್ನು ನಿಯಂತ್ರಿಸು, ಯಾರ ಮನಸ್ಸು ಕುಶಲ ಕಾರ್ಯಗಳನ್ನು ಮಾಡಲು ಹಿಂದುಮುಂದು ನೋಡುತ್ತದೋ ಅಥವಾ ನಿಧಾನಿಸುತ್ತದೋ ಆತನ ಮನಸ್ಸು ಪಾಪದಲ್ಲಿ ರಮಿಸುತ್ತದೆ”. 322
2. “ನನಗೆ ಪುಣ್ಯವು ತಟ್ಟುವುದಿಲ್ಲ ಎಂದು ಪುಣ್ಯವನ್ನು ಅಲ್ಪವೆಂದು ಅಲಕ್ಷಿಸಬೇಡ, ಒಂದೊಂದೇ ಹನಿಯಿಂದ ನೀರಿನ ಪಾತ್ರೆ ತುಂಬುವಂತೆ ಪುಣ್ಯವನ್ನು ಜಾಣನು ತುಂಬುತ್ತಾನೆ”. 323
3. “ಅಸಹಿಷ್ಣುಗಳಲ್ಲಿ ಕ್ಷಾಂತಿಶೀಲನೂ, ಕ್ರೂರಿಗಳಲ್ಲಿ ಸಾಧುವು ಮತ್ತು ಲೋಭಿಗಳಲ್ಲಿ ವಿರಾಗಿಯಾಗಲಿ”. 324
4. “ಕುಶಲ ಕಾರ್ಯಗಳು ಮಾನವನಿಗೆ ಅತ್ಯುತ್ತಮ ಜನ್ಮ ಪ್ರಾಪ್ತಿ ಮಾಡಿಸುತ್ತವೆ ಮತ್ತು ವಿಮುಕ್ತಿಗೆ ಸಮೀಪ ಮಾಡುತ್ತವೆ”. 325
5. “ಪುಣ್ಯವನ್ನು ಗಳಿಸುವ ೩ ವಿಧಗಳಿವೆ. ದಾನಪಾಲನೆ, ಶೀಲಪಾಲನೆ ಮತ್ತು ಸಮಾಧಿ ಪ್ರಾಪ್ತಿ”. 326

## ೬೪. ಪುಣ್ಯ ಗ್ರಂಥಗಳು

1. “ಪುಣ್ಯ ಗ್ರಂಥಗಳಿಂದ ಅಲ್ಪವೇ ಅರಿತಿದ್ದರೂ, ಅದರಂತೆ ನಡೆದು ರಾಗ, ದ್ವೇಷ ಮತ್ತು ಮೋಹವನ್ನು ವರ್ಜಿಸಿ ಸರಿಯಾಗಿ ಅರಿತು, ಇಲ್ಲಿಯ ಮತ್ತು ಪರಲೋಕದ ಯಾವುದಕ್ಕೂ ಅಂಟದ ಆತನು ಅರಹಂತರ ಫಲದಲ್ಲಿ ಭಾಗಿಯಾಗುತ್ತಾನೆ. 327
2. “ಸುಗಂಧರಹಿತ ಸುಂದರವಾದ ಪುಷ್ಪಂ ಧರಿಸಿದವನಿಗೆ ಆನಂದ ನೀಡುವುದಿಲ್ಲ. ಹಾಗೆಯೇ ಗಾಥೆಯನ್ನು ಅನುಸರಿಸದವನು ಅದರ ನಿಜ ಲಾಭವನ್ನು ಪಡೆಯಲಾರ”. 328
3. ನೀವು ಎಷ್ಟೇ ಪವಿತ್ರ ಗ್ರಂಥಗಳನ್ನು ಓದಿರಬಹುದು. ಬಹಳಷ್ಟನ್ನು ನೀವು ಮಾತನಾಡಬಹುದು. ಆದರೆ ಅವುಗಳಂತೆ ಆಚರಣೆ ಇಲ್ಲದಿದ್ದರೆ ಏನು ಲಾಭವಿದೆ ? 329
4. “ಗುರುವಿನ ಬೋಧನೆಯಲ್ಲಿ ಗಮನ ನೀಡು, ಆತನ ವ್ಯಕ್ತಿತ್ವದ ಮೇಲಲ್ಲ. ಬೋಧನೆಯ ಅರ್ಥದಲ್ಲಿ ಗಮನ ನೀಡು, ಹೊರತು ಪದಗಳಲ್ಲಲ್ಲ. ನಿಜವಾದ ಅರ್ಥದ ಕಡೆ ಗಮನ ನೀಡು, ಹೊರತು ಅಲ್ಲಿರುವಂತಲ್ಲ. ನಿಮ್ಮ ಪ್ರಜ್ಞಾಯುತ ಮನಸ್ಸಿಗೆ ಪ್ರಾಧಾನ್ಯತೆ ನೀಡಿ ಹೊರತು ತಾರ್ಕಿಕ ಗ್ರಹಿಕೆಗಳಿಗಲ್ಲ”. 330

## ೬೫. ಕರ್ಮ

1. "ನಾನು ಕ್ರಿಯೆಯನ್ನು ಬೋಧಿಸುತ್ತೇವೆ... ಹಾಗೆಯೇ ಅಕ್ರಿಯೆಯನ್ನು ಬೋಧಿಸುತ್ತೇನೆ. ನಾನು ಕುಶಲ ನುಡಿ, ಕುಶಲ ಕಾರ್ಯ ಮತ್ತು ಕುಶಲ ಮನಸ್ಸಿನ ಭಾವನೆಯನ್ನು ಬೋಧಿಸುತ್ತೇನೆ. ಹಾಗೆಯೇ ಅಕುಶಲ ನುಡಿ, ಅಕುಶಲ ಕಾರ್ಯ ಮತ್ತು ಅಕುಶಲ ಚಿತ್ತದ ನಾಶದ ಅಕ್ರಿಯೆ ಬೋಧಿಸುತ್ತೇನೆ". 331
2. "ಮೂರ್ಖರು ಮಾತ್ರ ಅದೃಷ್ಟದ ದಿನ (ಕಾಲ)ಕ್ಕಾಗಿ ಕಾಯುತ್ತಾರೆ, ಆದರೆ ಪ್ರಯತ್ನಶಾಲಿಗೆ ಪ್ರತಿದಿನವೂ ಅದೃಷ್ಟವೇ ಆಗಿರುತ್ತದೆ". 332
3. "ಯಾವರೀತಿಯ ಬೀಜ ಬಿತ್ತುವಿರೋ ಅದೇರೀತಿಯ ಫಲವನ್ನು ಪಡೆಯುವಿರಿ. ಹಾಗೆಯೇ ಒಳ್ಳೆಯದನ್ನು ಮಾಡುವವ ಒಳಿತನ್ನು ಪಡೆಯುತ್ತಾನೆ ಮತ್ತು ಕೆಟ್ಟದ್ದನ್ನು ಮಾಡುವವ ಕೆಡುಕನ್ನು ಪಡೆಯುತ್ತಾನೆ". 333
4. "ಲೋಕವು ಕರ್ಮದಿಂದಲೇ ನಡೆದುಬಂದಿದೆ. ಪ್ರಜೆಗಳು ಕರ್ಮದಿಂದಲೇ ಚಲಿಸುತ್ತಿರುವರು. ಚಲಿಸುತ್ತಿರುವ ರಥದ ಚಕ್ರದ ರೀತಿ ಜೀವಿಗಳೆಲ್ಲಾ ಕರ್ಮದಿಂದ ಬಂಧಿತರಾಗಿರುವರು". 334
5. "ಆಕಾಶದಲ್ಲಿಯಾಗಲಿ ಅಥವಾ ಸಾಗರ ಮಧ್ಯದಲ್ಲಾಗಲಿ ಅಥವಾ ಪರ್ವತದ ಗುಹೆಯಲ್ಲಾಗಲಿ, ಪಾಪಿಯು ಅವರ ಫಲದಿಂದ ತಪ್ಪಿಸಿಕೊಳ್ಳಬಹುದಾದ ಸ್ಥಳವು ಈ ಜಗತ್ತಿನಲ್ಲಿ ಎಲ್ಲಿಯೂ ಇಲ್ಲ". 335

## ೬೬. ಅವನತಿ

1. "ನಿದ್ರೆಯಲ್ಲಿ ಆನಂದಿಸುವಿಕೆ, ಜೊತೆಗಳಲ್ಲಿ ಆನಂದಿಸುವಿಕೆ, ಸೋಮಾರಿಯಾಗಿರುವಿಕೆ, ಮುಂಗೋಪ – ಇವು ಒಬ್ಬನ ಅವನತಿಗೆ ಕಾರಣಗಳಾಗಿವೆ". 336
2. "ಅಪಾರ ಐಶ್ವರ್ಯದಿಂದ ಧನ ಹಾಗು ಆಹಾರದಿಂದ ಕೂಡಿಯೂ ಒಬ್ಬನೆ ತನ್ನ ಸಂಪತ್ತನ್ನು ಅನುಭವಿಸುತ್ತಿದ್ದರೆ, ಅದು ಅವನ ಅವನತಿಗೆ ಕಾರಣವಾಗುತ್ತದೆ". 337
3. "ಧಮ್ಮ... ಪ್ರೇಮಿಯು ಉನ್ನತನು ಮತ್ತು ಧಮ್ಮ ದೂಷಣೆ ಮಾಡುವವ ಅವನತಿಯುಳ್ಳವನು". 338
4. "ಯಾರು ಸಮರ್ಥನಾದರೂ ವೃದ್ಧರಾದ ತಂದೆ–ತಾಯಿಯರನ್ನು ಸಾಕುವುದಿಲ್ಲವೋ ಅದೇ ಆತನ ಅವನತಿಗೆ ಕಾರಣವಾಗಿದೆ". 339
5. "ಯಾವ ವ್ಯಕ್ತಿ ಸ್ತ್ರೀಯರ ಹಿಂದೆ ಬಿದ್ದಿರುವನೋ, ಕುಡುಕನೋ ಹಾಗು ಜೂಜುಕೋರನೋ, ಸಂಪಾದಿಸಿದ ಸರ್ವ ಹಣವನ್ನು ನಷ್ಟ ಮಾಡಿರುವನೋ ಅದೇ ಆತ ಪರಾಭವದ ಕಾರಣವಾಗಿದೆ". 340

## 67. ಮಂಗಳಕರ

1. “ದಾನ ನೀಡುವುದು, ಶೀಲದಲ್ಲಿ ಸ್ಥಿರವಾಗುವುದು. ಬಂಧು ಸಹಾಯ ಮತ್ತು ಅನಿಂದಿತ ಕಾರ್ಯಗಳಲ್ಲಿರುವುದು ಇವು ಅತ್ಯಂತ ಮಂಗಳಕರವಾಗಿದೆ. 341

2. “ಗೌರವಿಸುವಿಕೆ, ನಮ್ರನಾಗಿರುವಿಕೆ, ಸಂತೃಪ್ತಿ ಹೊಂದುವಿಕೆ, ಕೃತಜ್ಞತೆ ಹೊಂದಿರುವಿಕೆ, ಹಾಗು ಉಚಿತ ಸಮಯದಲ್ಲಿ ಧಮ್ಮ ಶ್ರವಣ ಮಾಡುವಿಕೆ ಇವು ಮಂಗಳಗಳಲ್ಲಿ ಉತ್ತಮ ವಾದುದು”. 342

3. “ಸಹನಾಯುತ ಕ್ಷಮಾಶೀಲನಾಗಿರುವಿಕೆ, ಸಮ್ಯಕ್ ವಾಚಾದಿಂದ ಕೂಡಿರುವಿಕೆ, ಭಿಕ್ಷುಗಳಿಗೆ ದರ್ಶಿಸುವಿಕೆ, ಉಚಿತ ಕಾಲಕ್ಕೆ ಧಮ್ಮಚರ್ಚೆ ಮಾಡುವಿಕೆ – ಇವು ಮಂಗಳಗಳಲ್ಲಿ ಉತ್ತಮ ವಾದುದು”. 343

4. ತಪಸ್ಸಿನ ಆಚರಣೆ, ಬ್ರಹ್ಮಚಾರ್ಯದ ಪಾಲನೆ, ಆರ್ಯಸತ್ಯಗಳ ದರ್ಶನ ಹಾಗು ನಿಬ್ಬಾಣದ ಸಾಕ್ಷಾತ್ಕಾರ – ಇವು ಮಂಗಳಗಳಲ್ಲಿ ಉತ್ತಮ ವಾದುದು”. 344

5. ಜ್ಞಾನಗಳಲ್ಲಿ ಮತ್ತು ಕಲೆಗಳಲ್ಲಿ ಬಹು ಕುಶಲಿಯಾಗಿರುವುದು ಶೀಲಗಳಲ್ಲಿ, ಶಿಕ್ಷಣಗಳಲ್ಲಿ ವಿನಯಿಯಾಗಿರುವುದು, ಮಾತುಗಳಲ್ಲಿ ಸಂಭಾಷಿತದಿಂದ ಕೂಡಿರುವುದು – ಇವು ಮಂಗಳಗಳಲ್ಲಿ ಉತ್ತಮವಾಗಿವೆ”. 345

## 68. ಸತ್ಪುರುಷರ ಸಂಗ

1. “ಜ್ಞಾನಿಯಾದವನೊಂದಿಗೆ, ಪ್ರಜ್ಞಾವಂತನೊಡನೆ, ಬಹುಶ್ರುತ ನೊಂದಿಗೆ, ಪ್ರಯತ್ನಶಾಲಿಯೊಂದಿಗೆ, ಶ್ರದ್ಧಾವಂತ, ಶೀಲವಂತ ಆರ್ಯನೊಂದಿಗೆ ಒಬ್ಬನು ಮಿತ್ರತ್ವ ಮಾಡಲಿ”. 346

2. “ಸಾಧನೆಯ ಮಾರ್ಗದಲ್ಲಿ ಹೋಗುತ್ತಿರುವವನಿಗೆ ಮಂಗಳಕರ ವಾದ ಮಾರ್ಗವನ್ನು ತೋರಿಸಬಲ್ಲ ಉತ್ತಮವಾದ ಅಥವಾ ಅವನಿಗೆ ಸಮನಾದ ಮಿತ್ರನು ದೊರಕದಿದ್ದರೆ ಅವನೊಬ್ಬನೆ ಕಷ್ಟಪಟ್ಟು ಆ ಮಾರ್ಗದಲ್ಲಿ ಹೋಗಲಿ, ಆದರೆ ಮೂರ್ಖರ ಸಹವಾಸ ಬೇಡ”. 347

3. “ಅಡಗಿರುವ ನಿಧಿಯನ್ನು ತೋರಿಸುವಂತೆ, ಯಾರಾದರೂ ಒಬ್ಬ ವಿವೇಕಿಯು ತಪ್ಪುಗಳನ್ನು ತೋರಿಸಿದರೆ ಅಂಥ ಜಾಣನ ಸಂಗವನ್ನು ಮಾಡಬೇಕು. ಅಂಥವ ಸಹವಾಸವು ಶ್ರೇಯಸ್ಸನ್ನುಂಟು ಮಾಡುತ್ತದೆ. ಅದು ಕೆಟ್ಟದ್ದನ್ನು ಮಾಡುವು ದಿಲ್ಲ”. 348

4. “ತರಗ ಪುಷ್ಪವನ್ನು ಎಲೆಯಲ್ಲಿ ಕಟ್ಟಿದಾಗ ಆ ಎಲೆಯೂ ಸುವಾಸನೆಯನ್ನು ಪಡೆಯುತ್ತದೆ. ಅದರಂತೆ ಜ್ಞಾನಿಗಳನ್ನು ಸೇವಿಸುವ ಮನುಷ್ಯನು ಜ್ಞಾನಿಯಾಗುತ್ತಾನೆ”. 349

5. “ಆದುದರಿಂದ ನಕ್ಷತ್ರಗಳ ಜೊತೆಗಿರುವ ಚಂದ್ರನಂತೆ ಶ್ರದ್ಧಾವಂತರ, ಪ್ರಜ್ಞಾವಂತರ, ತುಂಬ ತಿಳಿದವರ, ಶೀಲವಂತರ, ಕರ್ತವ್ಯಶೀಲರ, ಶ್ರೇಷ್ಠರ, ಸತ್ಪುರುಷರ, ಜ್ಞಾನಿಗಳ ಜೊತೆಗೆ ಇರು”. 350

## ೬೯. ಗುರು

1. “ಗುರುವು ಶಿಷ್ಯನಿಗೆ ಕಲಿಸುವ ಮೊದಲು ಆತನ ಮನಸ್ಸಿನ ಬಗ್ಗೆ ಅರಿಯಬೇಕು. ಬೋಧನೆಯ ಪ್ರಸಂಗಕ್ಕೆ ಅನುಗುಣವಾಗಿಯು ಮತ್ತು ಕೇಳುಗನಿಗೆ ಅನುಗುಣವಾಗಿರಬೇಕು”. 351
2. “ಉತ್ತಮ ಗುರುವು ವ್ಯರ್ಥ ವಿಷಯಗಳನ್ನು, ಅಸಂಬದ್ಧ ವಿಷಯಗಳನ್ನು ತಡೆಯಬೇಕು ಹಾಗು ಕರುಣಾಭರಿತ ಮಾತುಗಳನ್ನು ಬಳಸಬೇಕು”. 352
3. “ಒಬ್ಬನು ಪರರಿಗೆ ಬೋಧಿಸುವುದನ್ನು ತಾನೇ ಮೊದಲು ಪಾಲಿಸಿರಬೇಕು, ತಾನು ಸರಿಯಾಗಿ ನಿಯಂತ್ರಿತನಾಗಿ, ಪರರಿಗೆ ನಿಯಂತ್ರಿಸಬಹುದು. ನಿಜಕ್ಕೂ ತನ್ನನ್ನು ಹತೋಟಿಯಲ್ಲಿಟ್ಟು ಕೊಳ್ಳುವುದು ಕಷ್ಟಕರ”. 353
4. ಗುರುವು ಶಿಷ್ಯನು ಕಲಿಯಬೇಕಾಗಿರುವುದನ್ನು ಚೆನ್ನಾಗಿ ಕಲಿಸುತ್ತಾನೆ. ಶೀಲ ಬೋಧಿಸುತ್ತಾನೆ. ಪ್ರತಿ ಕಲೆಯಲ್ಲಿ ಕುಶಲಿ ಯಾಗುವಂತೆ ತರಬೇತಿ ನೀಡುತ್ತಾನೆ. ತಾನು ಕಲಿತುದೆಲ್ಲವನ್ನು ಕಲಿಸುತ್ತಾನೆ. ಆತನ ಮಿತ್ರರ ಮುಂದೆ ಹೊಗಳುತ್ತಾನೆ. ಪ್ರತಿಯೊಂದು ಕಡೆಯಿಂದಲೂ ರಕ್ಷಣೆ ಒದಗಿಸುತ್ತಾನೆ ಮತ್ತು ಪಾಪವನ್ನು ತಡೆಯುತ್ತಾನೆ”. 354

## ೭೦. ಯಶಸ್ಸು

1. “ಒಬ್ಬನು ಸಾವಿರ ಸಾರಿ ಸಾವಿರ ಯೋಧರನ್ನು ಗೆಲ್ಲಬಹುದು. ಆದರೆ ತನ್ನನ್ನು ಗೆದ್ದವನು ಮಾತ್ರ ಶ್ರೇಷ್ಠ ವಿಜಯಶಾಲಿ”. 355
2. “ನಿನ್ನ ತಪ್ಪುಗಳನ್ನು ಅರಿತುಕೋ ಮತ್ತು ನಿನ್ನ ಅಭಿವೃದ್ಧಿಯನ್ನು ಗಮನಿಸು”. 356
3. “ಶ್ರೇಷ್ಠ ಪ್ರಾಪ್ತಿಗಳೆಂದರೆ : ಪ್ರಜ್ಞಾಭಿವೃದ್ಧಿ, ಶೀಲಾಭಿವೃದ್ಧಿ, ದಾನಹೃದಯ ಮತ್ತು ಭಕ್ತಿ”. 357
4. “ಸಂಯಮ, ಏಕಾಗ್ರತೆ, ಅವ್ಯಗ್ರತೆ, ಕಾಲಕ್ಕೆ ತಕ್ಕ ನಿಷ್ಕ್ರಮಣ ದೃಢ ಪರಾಕ್ರಮಿ, ಈ ಗುಣವಿರುವವರು ಜಯಶಾಲಿಗಳು ಆಗುತ್ತಾರೆ”. 358
5. “ಜ್ಞಾನಿಯೊಬ್ಬನು ಶೀಲದಲ್ಲಿ ಸುಸ್ಥಾಪಿತನಾಗಿ, ಸಮಾಧಿಯನ್ನು ಮತ್ತು ಪ್ರಜ್ಞೆಯನ್ನು ವೃದ್ಧಿಸಿದಾಗ ಅಂತಹ ಉತ್ಸಾಹಿ ಮತ್ತು ಪ್ರಜ್ಞಾವಂತನು ಬಲೆಯ ಜಾಲದಿಂದ ಪಾರಾಗುವಿಕೆಯಲ್ಲಿ ಯಶಸ್ವಿಯಾಗುತ್ತಾನೆ”. 359

## 71. ಕಶ್ಮಲಗಳು

1. "ಬೆಳ್ಳಿಯಲ್ಲಿನ ಕಶ್ಮಲಗಳನ್ನು ಅಕ್ಕಸಾಲಿಯು ತೆಗೆದುಹಾಕುವ ರೀತಿ ವಿವೇಕಿಯು ತನ್ನಲ್ಲಿನ ಕಶ್ಮಲಗಳನ್ನು ಕ್ರಮ ಕ್ರಮವಾಗಿ ಕ್ಷಣಕ್ಷಣಕ್ಕೂ ತೆಗೆದು ಹಾಕಬೇಕು". 360
2. "ಸುಖಭೋಗಗಳನ್ನು ತ್ಯಜಿಸಿ ಅಡ್ಡಿಗಳಿಲ್ಲದೆ ಜ್ಞಾನಿಯು ತನ್ನ ಚಿತ್ತವನ್ನು ಕಶ್ಮಲಗಳಿಂದ ಶುದ್ಧಿಗೊಳಿಸುತ್ತಾನೆ". 361
3. "ನೆನಪಿಸಿಕೊಳ್ಳದಿರುವಿಕೆಯು ಜ್ಞಾನಕ್ಕೆ ಮಲ, ಸೋಮಾರಿತನವು ಸೌಂದರ್ಯಕ್ಕೆ ಮಲ, ಗಮನಹರಿಸದಿರುವಿಕೆ ಮನೆಗೆ ಮಲ, ಅಜಾಗ್ರತೆ ರಕ್ಷಣೆಗೆ ಮಲ. 362
4. ಲೋಭ, ಮೋಸ, ತೃಷ್ಣೆ, ಬಾಯಾರಿಕೆ, ಚಿತ್ತ, ಮಲೀನತೆ ಹಾಗು ಮೋಹದಿಂದ ರಹಿತನಾಗು, ಯಾವುದೇ ಪ್ರಕಾರದ ಇಚ್ಛೆ ಮಾಡದೆ ಸಂಸಾರದ ಸರ್ವ ಆಸಕ್ತಿಯನ್ನು ತ್ಯಜಿಸಿ ಖಡ್ಗಮೃಗದ ರೀತಿ ಏಕಾಂಗಿಯಾಗಿ ಸಂಚರಿಸು". 363

## 72. ಮಿಥ್ಯಾ ದೃಷ್ಟಿ (ಮೂಢನಂಬಿಕೆಗಳು)

1. "ಮಿಥ್ಯಾದೃಷ್ಟಿಗಳು 3 ವಿಧದ್ದಾಗಿದೆ : ಎಲ್ಲವೂ ನಮ್ಮ ಹಿಂದಿನ ಜನ್ಮದ ಪರಿಣಾಮ ಎಂದು ಭಾವಿಸುವುದು. ಪ್ರತಿಯೊಂದು ದೇವರ ಅಥವಾ ವಿಧಿಯ ಕೈವಾಡ ಎಂದು ಭಾವಿಸುವುದು ಮತ್ತು ಪ್ರತಿಯೊಂದಕ್ಕೂ ಕಾರಣವೇ ಇಲ್ಲ ಎಂದು ಭಾವಿಸುವುದು".
2. "ಶುದ್ಧ ವ್ಯಕ್ತಿಯು ಲೋಕದಲ್ಲಿ ಎಲ್ಲಿಯೂ ಕಲ್ಪಿತ ದೃಷ್ಟಿ ಹೊಂದಿರಲಾರನು. ಆ ಶುದ್ಧ ವ್ಯಕ್ತಿಯು ಮಾಯಾ ಮತ್ತು ಅಭಿಮಾನವನ್ನು ತ್ಯಜಿಸಿ ಅನಾಸಕ್ತನಾಗಿ ಮತ್ತೆ ಯಾವ ಕಾರಣಕ್ಕಾಗಿ ವಿವಾದದಲ್ಲಿ ಬೀಳಬೇಕು?" 365
3. "ಆತನಲ್ಲಿ ಆತ್ಮದೃಷ್ಟಿಯಾಗಲಿ ಹಾಗು ಲೋಕಾಯುತ (ಭೌತಿಕವಾದ) ದೃಷ್ಟಿಯಾಗಲಿ ಇರುವುದಿಲ್ಲ. ಆತನು ಇಲ್ಲಿಯೆ ಸರ್ವದೃಷ್ಟಿಗಳನ್ನು ನಷ್ಟಪಡಿಸಿರುವನು". 366
4. "ಸಿದ್ಧಾಂತ, ಶ್ರುತಿ, ಶೀಲವ್ರತ ಮತ್ತು ವಿಚಾರಶೀಲತೆಯಿಂದಲೇ (ಅಥವಾ ಯಾವುದಾದರೂ ಒಂದರಿಂದಲೇ) ಯಾರೊಬ್ಬರು ಶುದ್ಧರಾಗಲಾರರು. ಯಾರು ಪಾಪ ಪುಣ್ಯಗಳಲ್ಲಿ ಲಿಪ್ತರಾಗುವುದಿಲ್ಲವೋ, ಯಾರು ಸ್ವ-ತ್ಯಾಗಿಯೋ ಮತ್ತು ಪಾಪಗಳನ್ನು ಮಾಡದವನೇ ಶುದ್ಧನಾಗುವನು". 367
5. "ನಾನು 'ಇದೇ ಸತ್ಯ' ಎಂದು ಹೇಳುವುದಿಲ್ಲ, ಅಂತಹ ವಿಷಯ ಎತ್ತಿ ಜನರು ಪರರನ್ನು ಮೂರ್ಖರೆನ್ನುವರು. ಅವರು ತಮ್ಮ ತಮ್ಮ ದೃಷ್ಟಿಯನ್ನು ಸತ್ಯಸಿದ್ಧ ಮಾಡುವರು ಮತ್ತು ಪರರನ್ನು ಮೂರ್ಖ ಎನ್ನುವರು". 368

## 73. ಪ್ರಜ್ಞಾವಂತ

1. "ಯಾರು ಹಿಂದಿನ ಕಶ್ಮಲಗಳನ್ನು ತೊರೆದು ಹೊಸ ಕಶ್ಮಲಗಳನ್ನು ಉತ್ಪತ್ತಿ ಮಾಡಲಾರನೋ, ಇಚ್ಛಾರಹಿತನೋ, ವಾದದಲ್ಲಿ ಅನಾಸಕ್ತನೋ, ದೃಷ್ಟಿಗಳಿಂದ ಪೂರ್ಣ ಮುಕ್ತನಾದ ಆ ಧೀರನು ಸಂಸಾರದಲ್ಲಿ ಲಿಪ್ತನಾಗಲಾರ ಮತ್ತು ಆತನು ತನ್ನ ನಿಂದೆಯನ್ನು ಮಾಡಿಕೊಳ್ಳಲಾರ". 369

2. "ಯಾರಿಗೆ ದೇಹ ಮತ್ತು ಮನಸ್ಸಿನ ಬಗ್ಗೆ ಸರ್ವಸ್ವವು ಮಮತೆ ಯಿಲ್ಲವೋ ಯಾರು ಇಲ್ಲದುದಕ್ಕಾಗಿ ಶೋಕಪಡುವುದಿಲ್ಲವೋ ಆತನು ಲೋಕದಲ್ಲಿ ಜನ್ಮಗ್ರಹಣೆ, ಮಾಡುವುದಿಲ್ಲ". 370

3. "ಯಾವಾಗ ನಿಮಗೆ ಕೆಲವು ವಿಷಯಗಳು ಅಕುಶಲವಾದವು ಮತ್ತು ಪಾಪವಾದವು, ತಪ್ಪಾಗಿರುವಂತಹದು ಎನಿಸುತ್ತದೆಯೋ ಆಗ ನೀವು ಅವನ್ನು ವರ್ಜಿಸಿ ಮತ್ತು ಹಾಗೆಯೇ ಯಾವಾಗ ನಿಮಗೆ ಕೆಲವು ವಿಷಯಗಳು ಕುಶಲವಾದವು. ಒಳ್ಳೆಯದು (ಸರಿಯಾದುದು) ಎನಿಸುತ್ತದೊ ಅವನ್ನು ಸ್ವೀಕರಿಸಿ ಆ ಕ್ರಿಯೆಗಳನ್ನು ಮಾಡಿರಿ". 371

4. "ಯಾರು ಅಸಾರವಾದುದನ್ನು ಸಾರವೆಂತಲೂ (ಕಲ್ಪನೆಯಲ್ಲಿ ವಾಸ್ತವ) ಮತ್ತು ಸಾರವಾದುದರಲ್ಲಿ ಅಸಾರವನ್ನು (ವಾಸ್ತವದಲ್ಲಿ ಕಲ್ಪನೆಯನ್ನು) ಹುಡುಕುತ್ತಾರೊ ಅವರು ಎಂದಿಗೂ ಸಾರವಾದುದರ ಕಡೆಗೆ ತಲುಪಲಾರರು". 372

## 74. ಅಲಕ್ಷ

1. "ಅಲಕ್ಷದಷ್ಟು ನಷ್ಟಕಾರಿ ಇನ್ನೊಂದನ್ನು ನಾನು ಕಾಣುತ್ತಿಲ್ಲ. ಅಲಕ್ಷವು ಗೊಂದಲವನ್ನು ಉಂಟುಮಾಡಿ, ಜ್ಞಾನವಿಹೀನನನ್ನಾಗಿ ಮಾಡುತ್ತದೆ. ಸರ್ವ ಅಕುಶಲ ಸ್ಥಿತಿಗಳನ್ನು ಹೆಚ್ಚಿಸುತ್ತದೆ". 373

2. "ಯಾರು ಇಚ್ಛೆಗಳಿಗೆ ವಶಿಭೂತರೋ, ಸಾಂಸಾರಿಕ ಸುಖಗಳಲ್ಲಿ ಬಂಧಿತರೋ, ಅವರ ಮುಕ್ತಿ ಅತಿ ಕಠಿಣವಾಗಿದೆ. ಏಕೆಂದರೆ ಅವರು ಬೇರೆಯವರಿಂದ ಮುಕ್ತಿ ಹೊಂದಲಾರರು. ಅವರು ಭೂತ ಹಾಗು ಭವಿಷ್ಯದ ಮಾತುಗಳಿಗೆ ಅಲಕ್ಷ ಮಾಡುತ್ತಾರೆ. ಕೇವಲ ವರ್ತಮಾನದ ಕಾಮನೆಗಳಿಗೆ ಹಾತೊರೆಯುತ್ತಾರೆ". 374

3. "ಪರಮಾರ್ಥದ ಪ್ರಾಪ್ತಿಗೆ ಸತತ ಯತ್ನಶೀಲನಾಗು, ಜಾಗರೂಕ ನಾಗು, ಅಲಸ್ಯವನ್ನು ತ್ಯಜಿಸು. ದೃಢಸಂಕಲ್ಪನಾಗು, ಸ್ಥೈರ್ಯ ಹಾಗು ಬಲದಿಂದ ಕೂಡಿ ಖಡ್ಗ ಮೃಗದ ರೀತಿ ಏಕಾಂಗಿಯಾಗಿ ಸಂಚರಿಸು". 375

4. "ಅಲಕ್ಷವು ರಜವಾಗಿದೆ. ಪ್ರಮಾದದ ಕಾರಣದಿಂದ ರಜ ಉತ್ಪನ್ನವಾಗುತ್ತದೆ. ಜಾಗರೂಕ ಮತ್ತು ವಿದ್ಯೆಯಿಂದ ತನ್ನ ಮುಳ್ಳುಗಳನ್ನು ಕಿತ್ತು ಬಿಸಾಡಲಿ". 376

## 75. ಇಂದ್ರಿಯ ಸುಖಗಳು

1. "ಇದು ಬಂಧನಕಾರಿ. ಇದರಲ್ಲಿ ಅಲ್ಪ ಸ್ವಾದವಿದೆ ಹಾಗು ಅಪಾರ ದುಃಖವಿದೆ. ಜ್ಞಾನಿ ಪುರುಷ ಇದು 'ಹುಣ್ಣು' ಎಂದು ಅರಿತು ಖಡ್ಗಮೃಗದ ರೀತಿ ಏಕಾಂಗಿಯಾಗಿ ಸಂಚರಿಸುತ್ತಾನೆ". 377
2. "ಲೋಕವು ಐದು ಕಾಮಭೋಗಗಳಲ್ಲಿ ಹಾಗು ಆರನೆಯದಾದ ಚಿತ್ತದಲ್ಲಿ ಆಸಕ್ತಿ ತೊರೆದರೆ ದುಃಖದಿಂದ ಮುಕ್ತಿ ದೊರೆಯುತ್ತದೆ".
3. "ಒಂದುವೇಳೆ ಇಚ್ಛಿಸುವವನು, ತೃಷ್ಣೆಗೆ ವಶಿಭೂತನು ಆದ ಅವನ ಕಾಮಭೋಗಗಳ ವಸ್ತುಗಳು (ವ್ಯಕ್ತಿಗಳು) ನಷ್ಟವಾದರೆ ಆತನು ಬಾಣವು ಚುಚ್ಚಿದಂತೆ ಪೀಡಿತನಾಗುತ್ತಾನೆ". 379
4. "ಆದ್ದರಿಂದ ವ್ಯಕ್ತಿಯು ಸದಾ ಸ್ಮೃತಿವಂತನು ಆಗಿ ಕಾಮಬೋಗ ಗಳನ್ನು ಪರಿತ್ಯಜಿಸಬೇಕು. ಅವುಗಳನ್ನು ತ್ಯಜಿಸಲಿ, ನಾವೆಯಿಂದ ನೀರನ್ನು ಬರಿದು ಮಾಡಿ ಭವಸಾಗರವನ್ನು ದಾಟಿ ಹೋಗಲಿ".
5. "ಹೇಗೆ ಸ್ವಪ್ನದಲ್ಲಿ ಕಂಡ ವಸ್ತುವನ್ನು ಜಾಗೃತರಾದ ಮೇಲೆ ನೋಡಲಾರರೋ ಅದೇರೀತಿ ಪ್ರಿಯ ಜನರನ್ನು ಮೃತ್ಯುವಿನ ಅನಂತರ ನೋಡಲಾರರು". 381

## 76. ಭಿಕ್ಷು

1. "ನಯನಗಳನ್ನು ಕೆಳಗೆ ನೆಟ್ಟು, ವೇಗವಾಗಿ ನಡೆಯದೆ, ಇಂದ್ರಿಯ ಗಳನ್ನು ಸಂಯಮಗೊಳಿಸಿದ, ಮನವನ್ನು ವಶಗೊಳಿಸಿರುವ ತೀವ್ರ ಬಯಕೆ ಹಾಗು ಕಾಮವಾಸನೆಯಿಂದ ದೂರಾಗಿ ಖಡ್ಗಮೃಗದ ರೀತಿ ಏಕಾಂಗಿಯಾಗಿ ಸಂಚರಿಸು". 382
2. "ಶಬ್ದಕ್ಕೆ ಹೆದರದೆ ಸಿಂಹದ ಸಮಾನನಾಗು, ವಾಯುವಿನಂತೆ ಬಲೆಗೆ ಬೀಳದವನಾಗು, ಜಲದಿಂದ ಅಪ್ತವಾಗದ ಕಮಲದ ಸಮಾನನಾಗು, ಖಡ್ಗಮೃಗದಂತೆ ಏಕಾಂಗಿಯಾಗಿ ಸಂಚರಿಸು".
3. "ಯಾರು ಸ್ವಯಂ ತನ್ನದೇ ರೀತಿಯಲ್ಲಿ ನಿರ್ಮಿತವಾದ ಮಾರ್ಗದಲ್ಲಿ ಕ್ರಮಿಸಿ ಸಂಶಯರಹಿತನೊ, ನಿಬ್ಬಾಣ ಪ್ರಾಪ್ತನೋ, ಜನ್ಮ ಮರಣಗಳನ್ನು ಮೀರಿರುವನೋ, ಬ್ರಹ್ಮಚಾರ್ಯ ಪೂರ್ಣನೋ ಮತ್ತು ಯಾರ ಪುನರ್‌ಜನ್ಮ ಇಲ್ಲವಾಗಿದೆಯೋ ಆತನೇ ಭಿಕ್ಷು".
4. "ಅನ್ನ ಅಥವಾ ಪೇಯ, ಖಾದ್ಯ ಅಥವಾ ವಸ್ತ್ರಗಳು ಸಿಕ್ಕಿದಾಗ ಅದರ ಸಂಗ್ರಹಣೆ ಮಾಡದಿರಲಿ. ಅದೆಲ್ಲವೂ ಸಿಗದೆ ಇದ್ದಾಗ ಚಿಂತೆ ಮಾಡದಿರಲಿ". 385
5. "ಭಿಕ್ಷುವು ಕ್ರಮ-ವಿಕ್ರಯಗಳಲ್ಲಿ ತೊಡಗದಿರಲಿ, ಎಲ್ಲಿಯೂ ಯಾರಿಗೂ ದೂಷಿಸದಿರಲಿ, ಗ್ರಾಮದಲ್ಲಿ ಯಾರಿಗೂ ಬಯ್ಯದಿರಲಿ ಮತ್ತು ಲಾಭದ ಇಚ್ಛೆಯಿಂದ ಜನರನ್ನು ಆಕರ್ಷಿಸಿ ಮಾತನಾಡದಿರಲಿ". 386

## 77. ನೀಚ

1. "ಯಾರು ಮಾನವ, ಪ್ರಾಣಿ ಹಾಗು ಅಂಡಜಗಳಿಗೆ ಹಿಂಸಿಸುವನೋ, ಯಾರಿಗೆ ಪ್ರಾಣಿಗಳ ಬಗೆಗೆ ದಯೆಯೇ ಇಲ್ಲವೋ, ಆತನನ್ನು ನೀಚನೆಂದು ಭಾವಿಸು". 387

2. "ಯಾರು ಗ್ರಾಮಗಳನ್ನು, ಹಳ್ಳಿಗಳನ್ನು ನಷ್ಟ ಮಾಡುವನೋ ಹಾಗು ಆಕ್ರಮಣ ಮಾಡುವನೋ, ಯಾರು ಕುಖ್ಯಾತನಾಗಿರುವ ಅತ್ಯಾಚಾರಿಯೋ ಆತನನ್ನು ನೀಚನೆಂದು ಭಾವಿಸು". 388

3. "ಯಾರು ಬಲತ್ಕಾರದಿಂದ ಅಥವಾ ಪ್ರೇಮದಿಂದ ಸೋದರ ಸಂಬಂಧಿಗಳ ಅಥವಾ ಮಿತ್ರರ ಸ್ತ್ರೀಯರೊಂದಿಗೆ ಕಾಣುವನೋ ಆತನನ್ನು ನೀಚನೆಂದು ತಿಳಿದುಕೋ". 389

4. "ಯಾರು ಸಹಾ ಜನ್ಮದಿಂದ ನೀಚರಾಗುವುದಿಲ್ಲ. ಅಥವಾ ಬ್ರಾಹ್ಮಣರೂ ಆಗುವುದಿಲ್ಲ. ಕರ್ಮದಿಂದಲೇ ನೀಚರೂ ಆಗುತ್ತಾರೆ ಮತ್ತು ಕರ್ಮದಿಂದಲೇ ಬ್ರಾಹ್ಮಣರು ಆಗುತ್ತಾರೆ". 390

## 78. ಮರಣ

1. "ಮರಗಳಲ್ಲಿನ ಫಲಗಳಿಗೆ ಬೀಳುವ ಭಯವಿರುವಂತೆ ಹಾಗೆಯೇ ಜನ್ಮಿಸಿರುವ ಜೀವಿಗಳಿಗೆ ನಿತ್ಯವೂ ಮೃತ್ಯುವಿನ ಭಯವಿರುತ್ತದೆ".

2. "ಹೇಗೆ ಕುಂಬಾರನಿಂದ ಸಿದ್ಧವಾಗಿರುವ ಮಣ್ಣಿನ ಪಾತ್ರೆಗಳು ಚೂರಾಗುವ ಸ್ವಭಾವವುಳ್ಳದ್ದಾಗಿದೆಯೋ ಹಾಗೆಯೇ ಜೀವಿಗಳ ಜೀವನವು ಇದೆ". 392

3. "ಈ ರೀತಿಯಿಂದ ಲೋಕವು ಮೃತ್ಯು ಹಾಗು ವೃದ್ಧಾಪ್ಯದಿಂದ ಪೀಡಿತವಾಗಿದೆ. ಆದ್ದರಿಂದ ಧೀರಪುರುಷರು ಲೋಕದ ಸ್ವಭಾವ ಅರಿತು ಶೋಕಪಡುವುದಿಲ್ಲ". 393

4. "ವಿಲಾಪಿಸುವುದರಿಂದ ಅಲ್ಪವು ಪ್ರಯೋಜನವಾಗುವ ಹಾಗಿದ್ದರೆ ಬುದ್ಧಿವಂತ ವ್ಯಕ್ತಿಯು ಹಾಗೆಯೇ ತನಗೆ ನೋವುಂಟು ಮಾಡಿಕೊಳ್ಳಲಿ. ಆದರೆ ಹಾಗೆ ಆಗದಿರುವಾಗ ಶೋಕಿಸದಿರಲಿ, ಅದು ನಿರರ್ಥಕ". 394

## ೭೯. ವಾದ-ವಿವಾದ

1. “ವಾದಿಯು ಪರಿಷತ್ತಿನ ಮಧ್ಯದಲ್ಲಿ ತನ್ನ ವಾದದ ಸಮರ್ಥನೆಗಾಗಿ ಪ್ರಶಂಸಿತನಾಗುತ್ತಾನೆ. ಆತನು ಮನಕ್ಕೆ ಅನುಸಾರವಾಗಿ ನಗುತ್ತಾನೆ ಹಾಗು ಅಭಿಮಾನಪಡುತ್ತಾನೆ”. ೩೯೫
2. “ಅವರು ವಿವಾದ ಕಾಮನೆಯಿಂದ ಪರಿಷತ್ತಿಗೆ ಹೋಗಿ ಒಬ್ಬರು ಇನ್ನೊಬ್ಬರಿಗೆ ಮೂರ್ಖರೆನ್ನುತ್ತಾರೆ. ವಿಭಿನ್ನ ಗುರುಗಳನ್ನು ನಂಬುತ್ತಾ ಅವರ ಪ್ರಶಂಸೆ ಮಾಡುತ್ತಾರೆ ಮತ್ತು ತಮ್ಮನ್ನು ಕುಶಲರೆಂದು ಭಾವಿಸುತ್ತಾರೆ”. ೩೯೬
3. “ಪ್ರಶ್ನೆ ಕೇಳಿದಾಗ ಪರಾಜಿತನಾಗಿ, ಈ ಪರಾಜಯವನ್ನು ತೋರಿಸಿದಾಗ ಆ ನಿರಾಸ್ತ್ರ ಮನುಷ್ಯನು ವಿಲಾಪಿಸುತ್ತಾನೆ, ಶೋಕ ಪಡುತ್ತಾನೆ ಮತ್ತು ಪ್ರತಿವಾದಿಯು ತನ್ನನ್ನು ಸೋಲಿಸಿದನು ಎಂದು ಯೋಚಿಸಿ ಪಶ್ಚಾತ್ತಾಪಪಟ್ಟು ಶೋಕಿಸುತ್ತಾನೆ”. ೩೯೭
4. “ಈ ವಿವಾದವು ಶ್ರಮಣರಲ್ಲಿ ಉಂಟಾಗುತ್ತದೆ. ಅವರಲ್ಲಿ ಪ್ರಹಾರ ಮತ್ತು ಪ್ರತಿ ಪ್ರಹಾರ ಆಗುತ್ತದೆ. ಈ ವಿಷಯವನ್ನು ಕಂಡು ವಿವಾದದಿಂದ ರಹಿತರಾಗಲಿ ಇದರಿಂದ ಪ್ರಶಂಸೆಯ ವಿನಃ ಬೇರೆ ಯಾವ ಲಾಭವೂ ಇಲ್ಲ”. ೩೯೮
5. “ಆತನು ಅಭಿಮಾನವನ್ನು ವಿನಾಶದ ಕಾರಣ ಎಂದು ಅರಿಯದೆ ಅಭಿಮಾನದ ಹಾಗು ಗರ್ವದ ಮಾತನಾಡುತ್ತಾನೆ. ಇದನ್ನು ಕಂಡು ಸಹಾ ವಿವಾದದಲ್ಲಿ ಬೀಳದಿರಲಿ. ಕುಶಲ ವ್ಯಕ್ತಿಗಳು ಅದನ್ನು ಶುದ್ಧಿ ಎಂದು ಹೇಳಲಾರರು”. ೩೯೯

## ೮೦. ಬ್ರಹ್ಮಚರ್ಯ

1. “ಅತಿ ನಿದ್ರಾವಂತನಾಗದಿರಲಿ, ಪ್ರಯತ್ನಶೀಲನಾಗಲಿ ಹಾಗು ಜಾಗರೂಕನಾಗಲಿ, ತೂಗಾಡಿಕೆ, ಮಾಯಾವಿತನ, ನಗು, ಹಾಸ್ಯ, ಆಟ, ಕ್ರೀಡೆ ಮತ್ತು ಮೈಥುನ ಹಾಗು ಶೃಂಗಾರವನ್ನು ತ್ಯಜಿಸಲಿ”. ೪೦೦
2. “ಸರ್ಪದ ಹೆಡೆಯಿಂದ ಕಾಲುಗಳನ್ನು ರಕ್ಷಿಸುವ ಹಾಗೇ ಯಾರು ಕಾಮಗಳನ್ನು ತ್ಯಾಗ ಮಾಡುವನೋ ಆತನು ಈ ಸಂಸಾರದಲ್ಲಿ ಎಚ್ಚರಿಕೆಯಿಂದ ವಿಷಪೂರಿತದಂತಿರುವ ಬಯಕೆಯನ್ನು ತ್ಯಜಿಸುವನು”. ೪೦೧
3. “ಮೊದಲು ಆತನ ಯಾವ ಯಶಸ್ಸು ಮತ್ತು ಕೀರ್ತಿ ಇತ್ತೋ ಅದೆಲ್ಲವೂ ಇದರಿಂದ (ಕಾಮ) ನಷ್ಟವಾಗುತ್ತದೆ. ಇದನ್ನು ಕಂಡಾದರೂ ಮೈಥುನವನ್ನು ತ್ಯಜಿಸುವ ಅಭ್ಯಾಸ ಮಾಡಲಿ”.
4. “ಯಾರು ಬಯಕೆಗಳಿಗೆ ವಶಿಯಾಗಿದ್ದಾನೋ ಭಿಕಾರಿಯಂತೆ ಯೋಚಿಸುವನೋ ಇಂತಹ ವ್ಯಕ್ತಿಯು ಪರರ ನಿಂದೆ ಕೇಳಿ ಮೌನವಾಗುತ್ತಾನೆ”. ೪೦೩
5. “ಎಲ್ಲಿಯವರೆಗೆ ನರನಾರಿಯರಿಗೆ ಇರುವ ಬಂಧನವು ಅದು ಎಷ್ಟೇ ಅಲ್ಪವಾಗಿರಲಿ, ಅದು ಕಡಿದು ಹಾಕಲ್ಪಟ್ಟಿಲ್ಲವೋ ಅಲ್ಲಿಯವರೆಗೆ ಹಾಲು ಕುಡಿಯುವ ಕರು ಹಸುವಿಗೆ ಅಂಟಿರುವಂತೆ ಮನುಷ್ಯನ ಮನಸ್ಸು ಬಂಧನಕ್ಕೆ ಸಿಕ್ಕಿಕೊಂಡಿರುತ್ತದೆ”. ೪೦೪
6. “ಯೌವ್ವನದಲ್ಲಿ ಬ್ರಹ್ಮಚಾರ್ಯ ಪಾಲಿಸದವನು ಅಥವಾ ಧನವನ್ನು ಗಳಿಸದವನು. ಗುರಿ ತಲುಪದ ಬಾಣಗಳಂತೆ ಅಪ್ರಯೋಜಕನಾಗಿ ಹಿಂದಿನದನ್ನು ಹಲುಬುತ್ತಾ ಮುದಿಯಾಗಿ ಬಿದ್ದಿರುವನು”. ೪೦೫

## ೪೧. ವರ್ತನೆ

1. "ಹಳೆಯದನ್ನು ಅಭಿನಂದನೆ ಮಾಡದಿರಲಿ, ಹೊಸದನ್ನು ಬಯಸದಿರಲಿ. ಕಳೆದು ಹೋದುದನ್ನು ಚಿಂತೆ ಮಾಡದಿರಿ ಮತ್ತು ತೃಷ್ಣೆಯಲ್ಲಿ ಲಿಪ್ತನಾಗದಿರಲಿ". 406
2. "ಶರೀರದಿಂದ ಯಾವ ಕರ್ಮ ಮಾಡಲು ಹೋಗುತ್ತಿರುವಿರೋ, ಆದ್ದರಿಂದ ನಮಗೆ ಅಥವಾ ಪರರಿಗೆ ದುಃಖವಾಗುವುದೇ ಎಂದು ಪರಿಶೀಲಿಸಬೇಕು. ಹಾಗು ವರ್ತಮಾನದಲ್ಲಿ ಮತ್ತು ಭವಿಷ್ಯದಲ್ಲಿ ಸುಖಕಾರಿಯೇ ಎಂದು ಪರಿಶೀಲಿಸಬೇಕು, ನಂತರ ಕಾರ್ಯ ಮಾಡಬೇಕು". 407
3. "ಕೆಲವರು ವಂದಿಸುವರು ಅಥವಾ ಕೆಲವರು ನಿಂದಿಸುವರು. ಅದರ ಪ್ರತಿಯಾಗಿ ಸಮಾನಭಾವದಿಂದಿರು, ಮನವನ್ನು ದೂಷಿತ ವನ್ನಾಗಿಸಬೇಡ. ಶಾಂತತೆ ಮತ್ತು ವಿನೀತನಾಗಿ ಸಂಚರಿಸು".
4. "ಅಲಸ್ಯರಹಿತ ಚಿತ್ತದವನಾಗು, ಅವಿಶ್ರಾಂತಿಯುತ ಚಿಂತನೆ ಮಾಡದಿರು, ಕ್ಲೇಷರಹಿತ ಮತ್ತು ಅನಾಸಕ್ತನಾಗಿ ಬ್ರಹ್ಮಚರ್ಯ ಪಾಲನೆ ಮಾಡು". 409

## ೪೨. ಸಮದರ್ಶಿತ್ವ

1. "ಬಡವ ಅಥವಾ ಶ್ರೀಮಂತರೆನ್ನದೆ, ಶ್ರೇಷ್ಠ ಅಥವಾ ನೀಚರೆನ್ನದೆ ಪ್ರತಿಯೊಬ್ಬರಿಗೂ ಸಮನಾಗಿ ಕಾಣು". 410
2. "ಪ್ರಾಣಿಗಳಲ್ಲಿ ಒಂದರಿಂದ ಇನ್ನೊಂದಕ್ಕೆ ಬೇಧವಿದೆ. ಹುಲ್ಲು ಹಾಗು ವೃಕ್ಷಗಳಲ್ಲಿ ಸಹಾ, ಅವು ಒಂದರಿಂದ ಇನ್ನೊಂದು ಬೇಧವಿದೆ. ಮಾನವರ ಶರೀರದಲ್ಲಿ ಈ ರೀತಿಯ ಭೇದವು ಸಿಗುವುದಿಲ್ಲ. ಲೋಕದಲ್ಲಿ ಯಾವ ಸಂಜ್ಞೆಗಳು ಇವೆಯೋ ಅವು ಕಲ್ಪಿತಸೂತ್ರ ವಾಗಿದೆ. ಅಲ್ಲಲ್ಲಿ ಕಲ್ಪಿಸಿ ಲೋಕ ವ್ಯವಹಾರವು ನಡೆದುಬಂದಿದೆ".
3. "ನೀವೂ ಹೇಗೋ ಹಾಗೆಯೇ ಇಡೀ ಜೀವಿಗಳು ಮೈತ್ರಿ ಮತ್ತುಕರುಣೆಗೆ ಅರ್ಹವಾಗಿವೆ". 412
4. "ಭಿಕ್ಷುಗಳೇ, ಜೀವಿಗಳನ್ನು ಹುಡುಕುವುದು ಅಷ್ಟು ಸುಲಭವಲ್ಲ. ಹಿಂದಿನ ಜನ್ಮದಲ್ಲಿ ಅವರು ನಿಮ್ಮ ತಾಯಿಯಾಗಿರಬಹುದು, ತಂದೆಯಾಗಿರಬಹುದು, ಸೋದರನಾಗಿರಬಹುದು, ಸೋದರಿ ಯಾಗಿರಬಹುದು, ಮಗನಾಗಿರಬಹುದು ಅಥವಾ ಮಗಳಾಗಿರ ಬಹುದು. ಇಲ್ಲಿ ಅಸ್ತಿತ್ವಗಳು ನಿರಂತರ ಬಂದು ಹೋಗುತ್ತಲೆ ಇರುತ್ತವೆ". 413

## ೮೩. ಜನಪ್ರಿಯತೆ

1. "ಯಾರು ಧಮ್ಮಕ್ಕೆ ಅನುಗುಣವಾಗಿ ನಡೆಯುವರೋ, ಸಮ್ಮ ದೃಷ್ಟಿಯುಳ್ಳವರೋ, ಸತ್ಯವಂತರೋ ಮತ್ತು ಕರ್ತವ್ಯಕ್ಕೆ ಅನುಸಾರವಾಗಿ ಪರಿಶ್ರಮಪಡುವರೋ ಅವರು ಜನರಿಗೆ ಪ್ರಿಯರಾಗುವರು". 414
2. ಬೋಧಿಸುವವರು, ಸಲಹೆ ನೀಡುವವರು ಮತ್ತು ಪಾಪದಿಂದ ದೂರವಿರಲು ಒತ್ತಾಯಿಸುವವರು ಸತ್ಪುರುಷರಿಗೆ ಪ್ರಿಯ ರಾಗುವರು ಮತ್ತು ಅಸತ್ಪುರುಷರಿಗೆ ಅಪ್ರಿಯರಾಗುವರು". 415
3. "ಈ ಕೆಲಸ ನನ್ನಿಂದಾಯಿತು, ಪ್ರತಿಕಾರ್ಯ ಸಣ್ಣದು ಅಥವಾ ಶ್ರೇಷ್ಠದ್ದು ನನ್ನಿಂದಾಯಿತು ಎಂದು ಗೃಹಸ್ಥರು ಮತ್ತು ಪಬ್ಬಜಿತರು ಭಾವಿಸಲಿ". ಇಂತಹ ಅಭಿಲಾಶೆಯು ಮುರ್ಖನದ್ದಾಗಿರುತ್ತದೆ. ಇದರಿಂದ ಆತನು ಬಯಕೆಗಳು ಮತ್ತು ಅಹಂಕಾರ ಹೆಚ್ಚಾಗುತ್ತಿರುತ್ತದೆ". 416
4. "ಯಾರ ಇಂದ್ರಿಯಗಳು ಶಾಂತವಾಗಿವೆಯೋ, ಸಾರಥಿಯಿಂದ ಪಳಗಿಸಲ್ಪಟ್ಟ ಉತ್ತಮಾಶ್ವಗಳಂತೆ ಯಾರ ಅಹಂಕಾರವು ನಾಶವಾಗಿದೆಯೋ, ಅಸವಗಳಿಂದ ಮುಕ್ತರೋ, ಅಂತಹನಿಗೆ ದೇವತೆಗಳೂ ಸಹಾ ಪ್ರಿಯರೆಂದು ಭಾವಿಸುವರು". 417
5. "ಯಾರು ಶೀಲದಲ್ಲಿ, ದರ್ಶನದಲ್ಲಿ ಸಂಪನ್ನರೋ, ಧಮ್ಮದಲ್ಲಿ ಸುಸ್ಥಾಪಿತರೋ, ಸತ್ಯಗಳನ್ನು ಸಾಕ್ಷಾತ್ಕರಿಸಿರುವರೋ ಮತ್ತು ಯಾರು ತಮ್ಮ ಕರ್ತವ್ಯಗಳನ್ನು ಪೂರೈಸಿರುವರೋ ಅಂತಹವರನ್ನು ಜನರು ಪ್ರಿಯರೆಂದು ಭಾವಿಸುವರು". 418
6. "ಯಾರು ಶ್ರದ್ಧಾಶೀಲ ಸಂಪನ್ನರೋ, ಯಶಸ್ಸನ್ನು ಮತ್ತು ಭೋಗ ಸಂಪತ್ತನ್ನು ಯಾರು ಉಳ್ಳವನಾಗಿದ್ದಾನೋ ಆತ ಎಲ್ಲೆಲ್ಲಿಯೇ ಹೋಗಲಿ, ಅಲ್ಲೆಲ್ಲಾ ಗೌರವ ಪಡೆಯುತ್ತಾನೆ, ಪೂಜಿತನಾಗುತ್ತಾನೆ".

## ೮೪. ಮಿಶ್ರಣ

1. "ಅಸಹಿಷ್ಣುಗಳಲ್ಲಿ ಕ್ಷಾಂತಿಶೀಲನೂ, ಕ್ರೂರಿಗಳಲ್ಲಿ ಸಾಧುವು ಮತ್ತು ಲೋಭಿಗಳಲ್ಲಿ ವಿರಾಗಿಯಾಗಲಿ". 420
2. "ರಾಗದಂತಹ ಬೆಂಕಿಯಿಲ್ಲ. ದ್ವೇಷದಂತಹ ಹಿಡಿತವಿಲ್ಲ, ಮೋಹದಂತಹ ಬಲೆಯಿಲ್ಲ, ತೃಷ್ಣೆಯಂತಹ ನದಿಯಿಲ್ಲ". 421
3. "ಧ್ಯಾನದಿಂದ ಆನಂದ ಮತ್ತು ಶಾಂತತೆಗಳು ಉದಯಿಸುತ್ತವೆ. ಬಯಕೆಗಳಿಂದ ನಿರಾಶೆ ಮತ್ತು ಚಿಂತೆಗಳು ಉದಯಿಸುತ್ತವೆ".
4. "ಹೇಳಿದ್ದೆಲ್ಲವನ್ನು ಕೇಳು, ಮುಖ್ಯವಾದುದನ್ನು ಹಿಡಿದಿಟ್ಟುಕೋ ಅರ್ಹವಾದುದನ್ನು ನುಡಿ, ಆದರೆ ಯಾವುದಕ್ಕೂ ಅಂಟಬೇಡ".
5. "ಕೋಪದ ನುಡಿಯು ಹರಿತವಾದ ಕತ್ತಿಯಂತೆ, ದುರಾಸೆಯು ಮರಣಾಂತಿಕ ವಿಷವಾಗಿದೆ. ದ್ವೇಷವು ಭಯಂಕರ ಬೆಂಕಿಯಾಗಿದೆ ಮತ್ತು ಮೋಹವು ಕಡುಕತ್ತಲೆಯಾಗಿದೆ". 424
6. "ದಾನವೇ ಮಹಾ ಲಾಭವಾಗಿದೆ, ಕೃತಜ್ಞತೆಯಿಲ್ಲದೆ ಪಡೆಯುವುದು ಮಹಾ ನಷ್ಟವಾಗಿದೆ. ಸಹನೆಯೇ ಶ್ರೇಷ್ಠ ರಕ್ಷಾಕವಚವಾಗಿದೆ. ಶ್ರೇಷ್ಠ ಆಯುಧವೆಂದರೆ ಪ್ರಜ್ಞಾ ಆಗಿದೆ".
7. "ಅಕುಶಲ ಯೋಚನೆಗಳು ಮಹಾ ಡಕಾಯಿತವಾಗಿದೆ. ಶೀಲವೇ ಶ್ರೇಷ್ಠ ಐಶ್ವರ್ಯನಿಧಿಯಾಗಿದೆ. ಅಜ್ಞಾನದಿಂದ ಪ್ರಪಂಚವು ಹಾಳಾಗುತ್ತದೆ. ಸ್ವಾರ್ಥ ಅಸೂಯೆಯಿಂದ ಸ್ನೇಹ ಮುರಿಯುತ್ತದೆ. ದ್ವೇಷವೇ ಪ್ರಬಲ ಜ್ವರವಾಗಿದೆ. ಬುದ್ಧರೇ ಶ್ರೇಷ್ಠ ವೈದ್ಯರಾಗಿದ್ದಾರೆ". 426

## ೮೫. ಸಂಶಯ

1. "ಸಂಶಯದಷ್ಟು ಭಯಾನಕ ಚಟ ಇನ್ನೊಂದಿಲ್ಲ. ಸಂಶಯವು ಜನರನ್ನು ಬೇರ್ಪಡಿಸುತ್ತದೆ. ಸಂಶಯವು ಮುಳ್ಳಿನಂತೆ ಘಾತಿಸುತ್ತಲೇ ಇರುತ್ತದೆ. ಸಂಶಯವು ಖಡ್ಗದಂತೆ ಸಾಯಿಸುತ್ತದೆ. ಸಂಶಯವು ವಿಷದಂತೆ ಮಿತ್ರತ್ವವನ್ನು ಹಾಳು ಮಾಡಿ ಸಂಬಂಧಗಳನ್ನು ಹರಿದು ಹಾಕುತ್ತದೆ". 427

2. ಯಾರು ಬುದ್ಧರಲ್ಲಿ, ಧಮ್ಮದಲ್ಲಿ, ಸಂಘದಲ್ಲಿ ವಿನಯದಲ್ಲಿ ಸಂಶಯಪಡುತ್ತಾನೋ ಆತನು ಶ್ರದ್ಧೆಯಿಡುವುದಿಲ್ಲ. ಆತನು ಸಿಟ್ಟಿಗೇಳುತ್ತಾನೆ. ಅಸಂತುಷ್ಟನಾಗಿರುತ್ತಾನೆ. ದ್ವೇಷಿಸುವ ಮನಸ್ಸನ್ನು ಉಳ್ಳವನಾಗಿರುತ್ತಾನೆ, ಮೊಂಡನಾಗಿರುತ್ತಾನೆ. ಅಂತಹವರು ರಾಗದಿಂದ ಕೂಡಿರುತ್ತಾರೆ. ಅವರು ಧಮ್ಮದಲ್ಲಿ ಏಳಿಗೆ ಹೊಂದುವುದಿಲ್ಲ". 428

3. "ಯಾರಿಗೆ ಬಂಧನವು ಇಲ್ಲವೋ, ಯಾರು ಪೂರ್ಣ ಪ್ರಜ್ಞೆಯಿಂದಾಗಿ ಎಲ್ಲಾ ಸಂಶಯಗಳನ್ನು ಇಲ್ಲವಾಗಿಸಿ ಕೊಂಡಿರುವರೋ ಮತ್ತು ಅಮರತ್ವವನ್ನು ಸಿದ್ಧಿಸಲು ಸಿದ್ಧನೋ ಆತನನ್ನು ನಾನು ಬ್ರಾಹ್ಮಣ (ಶ್ರೇಷ್ಠ) ಎನ್ನುತ್ತೇನೆ". 429

4. "ಇಲ್ಲಿಯದನ್ನು ಕುರಿತ, ಮುಂದಿನದನ್ನು ಕುರಿತ ಯಾವ ಸಂಶಯಗಳವೆಯೋ ತಾನೇ ಅರಿತಿರುವುದಾಗಲಿ ಅಥವಾ ಪರರಿಗೆ ತಿಳಿದವುಗಳಾಗಲಿ, ಅವೆಲ್ಲವನ್ನು ಧ್ಯಾನಿಗಳಾದವರು ಪರಿಹರಿಸಿ ತೊರೆಯುತ್ತಾರೆ. ಶ್ರದ್ಧೆಯಿಂದ ಬ್ರಹ್ಮಚರ್ಯ ಜೀವನ ಪಾಲಿಸುತ್ತಾರೆ". 430

## ೮೬. ಸ್ವ–ಅವಲಂಬನೆ

1. "ನಿಮಗೆ ನೀವೇ ದೀಪವಾಗಿ, ನಿಮಗೆ ನೀವೇ ಆಶ್ರಯದಾತರಾಗಿ ಅಥವಾ ಶ್ರೇಷ್ಠ ಜ್ಞಾನ (ಧಮ್ಮ)ವನ್ನು ನಿಮ್ಮ ದೀಪವನ್ನಾಗಿ ಮಾಡಿಕೊಳ್ಳಿ. ಅದನ್ನು ನಿಮ್ಮ ಆಸರೆಯನ್ನಾಗಿಸಿ ಬೇರೆ ಯಾವ ಶರಣು ಬೇಡ". 431

2. "ಪರರಲ್ಲಿ ಅವಲಂಬಿತರಾಗಬೇಡಿ, ನಿಮ್ಮ ಸ್ವ–ಶ್ರದ್ಧೆಯನ್ನು ಅಭಿವೃದ್ಧಿಗೊಳಿಸಿ". 432

3. "ಯಾರು ತನ್ನನ್ನು ಸಮರ್ಥ ಎಂದು ಭಾವಿಸುತ್ತಾನೋ ಆತನು ಸಾಮರ್ಥ್ಯವುಳ್ಳವನೇ ಸರಿ". 433

4. "ನಿಮಗೆ ನೀವೇ ನಾಯಕರು, ಬೇರ್‍ಯಾರಿದ್ದಾರೆ! ನಿಮ್ಮನ್ನು ಧಮಿಸಿ ನಿಮ್ಮನ್ನು ಅನ್ವೇಷಿಸಿ". 434

5. "ನಿಮಗೆ ನೀವೇ ಶ್ರಮಿಸಬೇಕು". 435

6. "ಒಬ್ಬನಿಗೆ ಆತನೇ ಆಶ್ರಯವಾಗಬಲ್ಲ, ಬೇರ್‍ಯಾವುದು ಆಶ್ರಯವಿರಬಲ್ಲದು?" 436

## ೩೭. ಝಾನ (ಧ್ಯಾನ)

1. "ಮನಸ್ಸಿನ ಏಕತೆಯೇ ಸಮಾಧಿ. ನಾಲ್ಕು ಸ್ಮೃತಿ ಪಟ್ಠಾನವೇ ಅವುಗಳ ಧ್ಯಾನ ವಿಷಯವಾಗಿದೆ. ನಾಲ್ಕು ಸಮ್ಯಕ್ ಪ್ರಯತ್ನಗಳೇ ಅದರ ಸಲಕರಣೆಗಳು, ಇವು ನಿರಂತರ ಅಭ್ಯಾಸದ ವೃದ್ಧಿಯೇ ಸಮಾಧಿ ವೃದ್ಧಿ".
2. ನಾಲು ವಿಧದ ಧ್ಯಾನಗಳಿವೆ : ಈ ಜೀವನದಲ್ಲೇ ಸುಖ ಲಭಿಸುವಂತಹುದು. ಜ್ಞಾನ ಮತ್ತು ದರ್ಶನವನ್ನು ನೀಡು ವಂತಹದು. ಜಾಗರೂಕತೆಯನ್ನು ಸ್ಥಾಪಿಸುವಂತಹುದು ಮತ್ತು ಅಸವವನ್ನು ನಾಶಪಡಿಸುವಂತಹದು". 438
3. "ಮೈತ್ರಿಯ ಧ್ಯಾನವನ್ನು ಅಭಿವೃದ್ಧಿಗೊಳಿಸು. ಇದರಿಂದಾಗಿ, ದ್ವೇಷವು ಅಂತ್ಯವಾಗುತ್ತದೆ. ಕರುಣಾ ಧ್ಯಾನವನ್ನು ಅಭಿವೃದ್ಧಿಗೊಳಿಸು. ಇದರಿಂದಾಗಿ ಕ್ರೌರ್ಯವು ಅಂತ್ಯವಾಗುತ್ತದೆ. ಮುದಿತಾ ಧ್ಯಾನವನ್ನು ಅಭಿವೃದ್ಧಿಗೊಳಿಸು ಇದರಿಂದಾಗಿ ಅಸೂಯೆ ಅಂತ್ಯವಾಗುತ್ತದೆ. ಉಪೇಕ್ಷಾ ಧ್ಯಾನವನ್ನು ಅಭಿವೃದ್ಧಿಗೊಳಿಸು ಇದರಿಂದಾಗಿ ಪ್ರಿಯ ಅಪ್ರಿಯ ಭಾವ ಅಂತ್ಯವಾಗುತ್ತದೆ. ಅಶುಭಾ ಧ್ಯಾನವನ್ನು ಅಭಿವೃದ್ಧಿಗೊಳಿಸು ಇದರಿಂದಾಗಿ ಸುಂದರತೆಯ ಭಾವ ಅಂತ್ಯವಾಗುತ್ತದೆ. ಅನಿತ್ಯ ಧ್ಯಾನವನ್ನು ಅಭಿವೃದ್ಧಿಗೊಳಿಸು ಇದರಿಂದಾಗಿ ನಾನು ಎಂಬ ಅಹಂ ಅಂತ್ಯವಾಗುತ್ತದೆ. ಅನಾಪಾನಾಸತಿ ಧ್ಯಾನವನ್ನು ಅಭಿವೃದ್ಧಿಗೊಳಿಸು ಇದರಿಂದಾಗಿ ಮಹತ್ಫಲ ದೊರೆಯುತ್ತದೆ, ಅತ್ಯಂತ ಲಾಭ ಸಿಗುತ್ತದೆ."
4. "ನೋಡುವಾಗ ನೋಡುವುದರಲ್ಲಿ ಮಾತ್ರ ತಲ್ಲೀನನಾಗು. ಕೇಳುವಾಗ ಕೇಳುವುದರಲ್ಲಿ ಮಾತ್ರ ತಲ್ಲೀನನಾಗು. ಇಂದ್ರಿಯಗಳನ್ನು ಅನುಭವಿಸುವಾಗ ಅನುಭವಿಸುವುದರಲ್ಲಿ ಮಾತ್ರ ತಲ್ಲೀನನಾಗು. ಅರಿಯುವಾಗ ಅರಿಯುವುದರಲ್ಲಿ ಮಾತ್ರ ತಲ್ಲೀನನಾಗು". 440
5. "ಸಮಾಧಿಯನ್ನು ಅಭಿವೃದ್ಧಿಗೊಳಿಸಿ, ಸಮಾಹಿತವಾದ ಚಿತ್ತ ಪಡೆದವ ಯಥಾಭೂತವಾಗಿ ಅರಿಯುತ್ತಾನೆ". 441
6. "ಪ್ರಶಾಂತತೆ ಬೆಳೆಸಿದಾಗ, ಮನಸ್ಸು ಅಭಿವೃದ್ಧಿಯಾಗುತ್ತದೆ. ಆಗ ಲೋಭವು ನಶಿಸುತ್ತದೆ. ಪ್ರಜ್ಞಾವು ಬೆಳೆಸಿದಾಗ ಸಮ್ಮದೃಷ್ಟಿಯು ಅಭಿವೃದ್ಧಿಯಾಗುತ್ತದೆ, ಆಗ ಮೋಹವು ನಶಿಸುತ್ತದೆ". 442

## ೩೮. ಚಿತ್ತ

1. "ಚಿತ್ತವು (ಮನಸ್ಸು) ಸ್ವಾಭಾವಿಕವಾಗಿ ಪರಿಶುದ್ಧವಾದದ್ದು. ಹಾಗು ಪರಿಶುಭ್ರವಾದುದು. ಆದರೆ ಬಾಹ್ಯ ವಿಷಯಗಳಿಂದ ಮಲೀನವಾಗುತ್ತದೆ. ಹಾಗು ಇಂದ್ರಿಯಗಳ ಪ್ರಭಾವ ಮತ್ತು ಮಾನಸಿಕ ಅಂಗಾಂಗಗಳಿಂದ ಮಲಿನವಾಗುತ್ತದೆ". 443
2. "ಮನೋವೇಗದಷ್ಟು ಕ್ಷಿಪ್ರವಾಗಿ ಮತ್ತೆ ಯಾವುದೂ ವೇಗ ಹೊಂದಿಲ್ಲ. ಮನಸ್ಸು ಎಷ್ಟು ಬೇಗ ಉದಯಿಸಿ ಅಳಿಯುವುದು, ಅದನ್ನು ಹೋಲಿಸಲು ಅಷ್ಟು ಸುಲಭವಲ್ಲ". 444
3. "ಕೆಟ್ಟ ಛಾವಣಿಯುಳ್ಳ ಮನೆಯಲ್ಲಿ ಮಳೆಯ ನೀರು ನುಗ್ಗುವಂತೆ ಅಭಿವೃದ್ಧಿ ಹೊಂದಿದ ಮನಸ್ಸಿನಲ್ಲಿ ಕಲ್ಮಶ (ರಾಗ)ಗಳು ನುಗ್ಗುತ್ತವೆ".
4. "ಶತ್ರುವಿಗಿಂತ ಹೆಚ್ಚು ಹಾನಿ, ಕೆಟ್ಟ ಮಾರ್ಗದರ್ಶಿತ ಮನಸ್ಸು ಮಾಡುತ್ತದೆ. ಮಾತಾಪಿತ ಮಿತ್ರನಿಗಿಂತ ಹೆಚ್ಚು ಲಾಭ ಸುಮಾರ್ಗದರ್ಶಿತ ಮನಸ್ಸು ಮಾಡುತ್ತದೆ". 446
5. "ದೃಢ ಮನಸ್ಸಿಗೆ ದುಃಖವಿಲ್ಲ. ಮನಸ್ಸನ್ನು ಜಯಿಸಿದವರು ಮೃತ್ಯುವನ್ನು ಜಯಿಸುತ್ತಾರೆ". 447

## ೮೯. ಕರ್ಮಫಲ

1. “ಪೂರ್ವ ಜನ್ಮದಲ್ಲಿ ಜೀವಿಗಳನ್ನು ಕೊಲ್ಲುವುದರಿಂದ ಈ ಜನ್ಮದಲ್ಲಿ ಅಲ್ಪಾಯು ಲಭಿಸುತ್ತದೆ. ಜೀವಿಗಳ ಮೇಲಿನ ಕರುಣೆಯಿಂದ ಕೊಲ್ಲದೆ ಇದ್ದರೆ ಈ ಜನ್ಮದಲ್ಲಿ ದೀರ್ಘಾಯು ಲಭಿಸುತ್ತದೆ. ಹಾಗೆಯೇ ಜೀವಿಗಳನ್ನು ಹಿಂಸಿಸುವವನು ಈ ಜನ್ಮದಲ್ಲಿ ರೋಗ ಗಳನ್ನು ಪಡೆಯುತ್ತಾನೆ. ಹಿಂದಿನ ಜನ್ಮದಲ್ಲಿ ಜೀವಿಗಳನ್ನು ಹಿಂಸಿಸ ದವನು ಆರೋಗ್ಯವುಳ್ಳವನಾಗಿ ಬಲದಿಂದ ಕೂಡಿರುವನು”. 448
2. “ಹಿಂದಿನ ಜನ್ಮದಲ್ಲಿ ಜಿಪುಣತನ ಮತ್ತು ಕಳ್ಳತನದಿಂದ ಕೂಡಿದ್ದರೆ ಈ ಜನ್ಮದಲ್ಲಿ ಬಡತನ ಸಿಗುತ್ತದೆ. ದಾನವನ್ನು ಹಿಂದಿನ ಜನ್ಮದಲ್ಲಿ ಮಾಡಿದ ಫಲದಿಂದ ಈ ಜನ್ಮದಲ್ಲಿ ಶ್ರೀಮಂತನಾಗಿಯೇ ಹುಟ್ಟುತ್ತಾನೆ”. 449
3. “ಹಿಂದಿನ ಜನ್ಮದಲ್ಲಿ ದ್ವೇಷಾಸೂಯೆ ಹೊಂದಿರುವವರು ಈ ಜನ್ಮದಲ್ಲಿ ಕುರೂಪಿಗಳಾಗಿ ಹುಟ್ಟುವರು. ಸಹನೆ ಮತ್ತು ಕರುಣೆಗಳನ್ನು ಪಾಲಿಸಿರುವವರು ಅತ್ಯಂತ ಸುಂದರವಾಗಿ ಹುಟ್ಟುವರು”. 450
4. “ಹಿಂದಿನ ಜನ್ಮದಲ್ಲಿ ಪರರ ಯಶಸ್ಸಿಗೆ, ಭಾಗ್ಯಕ್ಕೆ ಹೊಟ್ಟೆಕಿಚ್ಚು ಪಟ್ಟವರು ಈ ಜನ್ಮದಲ್ಲಿ ಅಲ್ಪ ಅನುಯಾಯಿಗಳನ್ನು ಪಡೆಯುತ್ತಾರೆ. ಹಿಂದಿನ ಜನ್ಮದಲ್ಲಿ ಮೈತ್ರಿ ಮತ್ತು ಮುದಿತಾ ಪಾಲಿಸಿರುವವರು ಈ ಜನ್ಮದಲ್ಲಿ ಅಪಾರ ಅನುಯಾಯಿಗಳನ್ನು ಪಡೆಯುವರು”. 451
5. ಹಿಂದಿನ ಜನ್ಮದಲ್ಲಿ ಪ್ರಶ್ನಿಸುವುದು, ಚರ್ಚಿಸುವುದು, ವಿಶ್ಲೇಷಿಸುವುದರ ಫಲವಾಗಿ ಈ ಜನ್ಮದಲ್ಲಿ ಬುದ್ಧಿವಂತರಾಗಿಯೇ ಹುಟ್ಟುವರು. ಹಿಂದಿನ ಜನ್ಮದಲ್ಲಿ ಅಂತಹುದರಲ್ಲಿ ಸೋಮಾರಿ ಯಾದವರು ದಡ್ಡರಾಗಿ ಹುಟ್ಟುವರು”. 452
6. “ಹಿಂದಿನ ಜನ್ಮದಲ್ಲಿ ಅಹಂಕಾರ ಮತ್ತು ವಿನಯರಹಿತತೆಯಿಂದ ಈ ಜನ್ಮದಲ್ಲಿ ಗೌರವವಿಲ್ಲದ ಮನೆಗಳಲ್ಲಿ ಹುಟ್ಟುವರು. ಹಾಗೆಯೇ ಹಿಂದಿನ ಜನ್ಮದಲ್ಲಿ ವಿನಯ ಮತ್ತು ಗೌರವದಿಂದ ನಡೆದಿದ್ದರೆ ಗೌರವ ಸಿಗುವಂತಹ ಮನೆಗಳಲ್ಲಿ ಹುಟ್ಟುವರು”. 453

## ೯೦. ಗೃಹಸ್ಥ ಧರ್ಮ

1. “ಲೋಕದಲ್ಲಿ ಸರ್ವ ಜೀವಿಗಳ ಬಗ್ಗೆ ದಂಡಶಾಸ್ತ್ರ ತ್ಯಜಿಸಲಿ... ಸರ್ವರೀತಿಯ ಕಳ್ಳತನ, ತ್ಯಾಗ ಮಾಡಲಿ... ಬ್ರಹ್ಮಚಾರ್ಯದ ಪಾಲನೆಯಿಲ್ಲದಿದ್ದರೂ ಪರಸ್ತ್ರಿಯನ್ನು ಸೇವಿಸದಿರಲಿ... ಸರ್ವ ಪ್ರಕಾರದ ಅಸತ್ಯ ಭಾಷಣ ತ್ಯಾಗ ಮಾಡಲಿ... ಅವನು ಮದ್ಯಪಾನ ಮಾಡದಿರಲಿ”. 454
2. “ಪ್ರತ್ಯೇಕ ಪಕ್ಷದ ಚತುರ್ದಶಿ, ಹುಣ್ಣಿಮೆ, ಅಷ್ಟಮಿ ಹಾಗು ಪ್ರತಿಹಾರ್ಯ ಪಕ್ಷದಲ್ಲಿ ಪ್ರಸನ್ನ ಮನದಿಂದ ಅಷ್ಟಾಂಗಶೀಲ ಪಾಲನೆ ಮಾಡಿರಿ. ಭಿಕ್ಷು ಸಂಘಕ್ಕೆ ದಾನ ಮಾಡಿರಿ”. 455
3. “ಧರ್ಮದಿಂದ ಮಾತಾಪಿತರ ಸೇವೆ ಮಾಡಲಿ. ಯಾವುದೇ ಧಾರ್ಮಿಕ ವೃತ್ತಿಯಲ್ಲಿ ತೊಡಗಿಸಲಿ. ಆತನು ಸ್ವಯಂಪ್ರಭಾ ಎಂಬ ದೇವಲೋಕದಲ್ಲಿ ಹುಟ್ಟುತ್ತಾನೆ”. 456
4. “ಅವೇಳೆಯಲ್ಲಿ ಬೀದಿಗಳಲ್ಲಿ ಅಡ್ಡಾಡುವುದರಿಂದ ತನ್ನ ರಕ್ಷಣೆಗೆ, ಕುಟುಂಬದವರ ರಕ್ಷಣೆಗೆ, ಸಂಪತ್ತಿನ ರಕ್ಷಣೆಗೆ, ಘನತೆಯ ರಕ್ಷಣೆಗೆ, ಅಪಾಯ ಒದಗಿಬರುತ್ತದೆ”. 457
5. “ವಿಷದಿಂದ ಲೇಪಿತವಾದ ಬಾಣವನ್ನು ಸ್ಪರ್ಶಿಸಿದ ಇತರ ಬಾಣಗಳಿಗೂ ವಿಷವು ಲೇಪಿಸುವಂತೆ ಪಾಪಿಯನ್ನು ಸೇವಿಸು ವವರೂ, ಅಂಥವರಿಂದ ಸೇವಿಸಲ್ಪಟ್ಟವರು ಕೆಟ್ಟು ಹೋಗುತ್ತಾರೆ. ಪಾಪದ ಪರಿಣಾಮದ ಭಯ ಇರುವ ಜ್ಞಾನಿಯು ಪಾಪಿಯ ಸಂಗವನ್ನು ಮಾಡುವುದು ಬೇಡ”. 458

# ೨೧. ಕೆಟ್ಟ ಮಿತ್ರ

1. "ನಿರ್ಲಜ್ಯ ವ್ಯವಹಾರ ಮಾಡುವವನು, ಅಂತರಂಗದಲ್ಲಿ ಅಸಹ್ಯಿಸುವವನು, ಸಾಮರ್ಥ್ಯದ ಮಾತು ಬಂದಾಗ ಇಲ್ಲವೆಂದು ಹೇಳುವವನು ಮಿತ್ರನಲ್ಲ ಎಂದು ತಿಳಿಯಬೇಕು". 459
2. "ಯಾರು ಸದಾ ಮಿತ್ರನೆಂದೇ ತೋರಿಸಿಕೊಳ್ಳುತ್ತಿರುವನೋ, ಜೊತೆಯಲ್ಲೇ ವೈಮನಸ್ಸಭಾವದಿಂದಿರುವನೋ ಹಾಗು ದೋಷಗಳನ್ನು ಹುಡುಕುತ್ತಾ ಇರುವನೋ ಅವನು ಮಿತ್ರನಲ್ಲ.
3. "ಅಲ್ಪವನ್ನು ನೀಡಿ ಮಹತ್ತನ್ನು ಪಡೆಯುವ, ಸಹಾಯದ ವೇಳೆ ಭಯದಿಂದ ಮಾಡುವವ, ಏನಾದರೂ ಪಡೆಯಲೆಂದೇ ಭೇಟಿ ಮಾಡುವವ ಸ್ವಾರ್ಥ ಮಿತ್ರನಾಗಿರುತ್ತಾನೆ, ಆತನು ಮಿತ್ರನಲ್ಲ".
4. "ಕಷ್ಟಕಾಲದಲ್ಲಿ ನೆಪಹೇಳಿ ಜಾರುವ, ಸಿಹಿಮಾತುಗಳನ್ನು ಹೇಳುವವ, ಬರೀ ಮಾತಿನಲ್ಲಿ ಸ್ನೇಹ ತೋರುವ ಮಿತ್ರ ಈ ರೀತಿ ಇರುತ್ತಾನೆ". 462
5. "ಪಾಪಕ್ಕೆ ಪ್ರೋತ್ಸಾಹಿಸುವ, ಪುಣ್ಯಕಾರ್ಯಕ್ಕೆ ನಿರಾಕರಿಸುವ, ಮುಂದೆ ಹೊಗಳುವವ, ಹಿಂದೆ ತೆಗಳುವವ ಮಿತ್ರನಲ್ಲ". 463
6. "ಕುಡಿತಕ್ಕೆ, ಜೂಜಿಗೆ, ನೃತ್ಯ ಸ್ಥಳಗಳಿಗೆ, ಬೀದಿ ಸುತ್ತಾಡಿಸುವವ, ಇಂತಹುದೆಲ್ಲಕ್ಕೆ ಪ್ರೋತ್ಸಾಹಿಸುವವನು ಐಶ್ವರ್ಯ ನಾಶ ಮಾಡಲು ಬಂದ ಶತ್ರು ಎಂದೇ ತಿಳಿಯಿರಿ". 464

# ೨೨. ಅಸತ್ಪುರುಷ

1. "ಅಸತ್ಪುರುಷನು ಕೇಳದಿದ್ದರೂ ಪರರ ಬಗೆಗೆ ಚಾಡಿ, ನಿಂದೆ ಮಾಡುತ್ತಾನೆ. ಇನ್ನೂ ಆತನಿಗೆ ಕೇಳಿದರೆ ಎಷ್ಟು ಹೇಳಿಯಾನು?"
2. "ಹಾಗೆಯೇ ಆತನಿಗೆ ಕೇಳಿದಾಗ ಪರರ ಬಗ್ಗೆ ಪೂರ್ಣವಾಗಿ ಮತ್ತು ವಿವರವಾಗಿ ಅದರ ಬಗ್ಗೆ ಚಾಡಿ ಮತ್ತು ನಿಂದೆ, ರಹಸ್ಯವೆಲ್ಲಾ ಹೇಳುತ್ತಾನೆ. ಇದರಿಂದಾಗಿ ಆತನು ಅಸತ್ಪುರುಷ ಎಂದು ತಿಳಿಯಬೇಕು". 466
3. "ಹಾಗೆಯೇ ಅಸತ್ಪುರುಷನಿಗೆ, ಪರರ ಬಗ್ಗೆ ಒಳಿತನ್ನು ಕೇಳಿದಾಗಲು ಅವರ ಬಗ್ಗೆ ಏನನ್ನು ನುಡಿಯಲಾರ. ಇನ್ನೂ ಕೇಳದಿದ್ದರೆ ಪಾಡೇನು?" 467
4. "ಹಾಗೆಯೇ ಅಸತ್ಪುರುಷನು ಕೇಳದಿದ್ದರೂ ತನ್ನ ಪ್ರಶಂಸೆಗಳ ಸುರಿಮಳೆಯನ್ನು ಹಾಕುತ್ತಾನೆ, ಇನ್ನೂ ಕೇಳಿದಾಗ ಹೇಗೆ?" 468
5. "ಹಾಗೆಯೇ ಅಸತ್ಪುರುಷನಿಗೆ ಆತನ ಬಗ್ಗೆ ಕೇಳಿದಾಗ ಆತ ತನ್ನ ಬಗ್ಗೆ ಪೂರ್ಣವಾಗಿ ಮತ್ತು ವಿವರವಾಗಿ ಸ್ವ-ಪ್ರಶಂಸೆ ಮಾಡಿ ಕೊಳ್ಳುತ್ತಾನೆ. ಇದರಿಂದಾಗಿ ಆತನು ಅಸತ್ಪುರುಷ ಎಂದು ತಿಳಿಯಬೇಕು". 469

## ೯೩. ಸ್ವ-ನಿಯಂತ್ರಣ

1. “ಚಕ್ಷುವಿನ ಮೇಲಿನ ಸಂಯಮ ಸಾಧುವಾದುದು.
ಕಿವಿಯ ಮೇಲಿನ ಸಂಯಮ ಸಾಧುವಾದುದು.
ಘ್ರಾಣದ ಮೇಲಿನ ಸಂಯಮ ಸಾಧುವಾದುದು.
ಜಿಹ್ವಾದ ಮೇಲಿನ ಸಂಯಮ ಸಾಧುವಾದುದು”. 470

2. “ಕಾಯದ ಮೇಲಿನ ಸಂಯಮ ಸಾಧುವಾದುದು.
ಮಾತಿನ ಮೇಲಿನ ಸಂಯಮ ಸಾಧುವಾದುದು.
ಮನಸ್ಸಿನ ಮೇಲಿನ ಸಂಯಮ ಸಾಧುವಾದುದು.
ಸರ್ವ ವಿಷಯದ ಮೇಲಿನ ಸಂಯಮ ಸಾಧುವಾದುದು.
ಸರ್ವ ವಿಷಯದಲ್ಲಿ ಸಂಯಮವಿರುವ ಭಿಕ್ಖು ಸರ್ವ ದುಃಖದಿಂದ ವಿಮುಕ್ತನಾಗುತ್ತಾನೆ”. 471

3. “ಹಸ್ತಗಳ ಬಗ್ಗೆ ನಿಯಂತ್ರಣ, ಪಾದಗಳ ಬಗ್ಗೆ ನಿಯಂತ್ರಣ, ಮಾತಿನಲ್ಲಿ ನಿಯಂತ್ರಣ ಮತ್ತು ಉತ್ತಮವಾದುದರಲ್ಲಿ (ಮನಸ್ಸಿನಲ್ಲಿ) ನಿಯಂತ್ರಣ ಪಡೆದವನು, ತನ್ನಲ್ಲೇ ಆನಂದಿತನಾಗುತ್ತಾನೆ. ಸಮಾಹಿತನಾಗುತ್ತಾನೆ. ಏಕಾಂಗಿಯಾಗಿ, ತೃಪ್ತನಾಗುತ್ತಾನೆ. ಅಂತಹವರನ್ನು ಭಿಕ್ಖು ಎನ್ನುತ್ತಾರೆ”. 472

4. “ಜ್ಞಾನಿಗಳು ಕ್ರಿಯೆಯಲ್ಲಿ ನಿಯಂತ್ರಿತರಾಗಿರುತ್ತಾರೆ. ಮಾತಿನಲ್ಲಿ ನಿಯಂತ್ರಿತರಾಗಿರುತ್ತಾರೆ. ಯೋಚನೆಯಲ್ಲಿ ನಿಯಂತ್ರಿತರಾಗಿರುತ್ತಾರೆ. ನಿಜಕ್ಕೂ ಅವರು ಪೂರ್ಣ ನಿಯಂತ್ರಿತರಾಗಿರುತ್ತಾರೆ”. 473

## ೯೪. ಏಕಾಂತಜೀವನ

1. “ಒಂಟಿಯಾಗಿ ವಾಸಿಸಿ, ಏಕಾಂತದಲ್ಲಿ ಆನಂದಿಸಿ, ಅಂತರಂಗದಲ್ಲಿ ಶಾಂತಿಯಿರಲಿ, ಚಿತ್ತವು ಸಮತೆಯಿಂದಿರಲಿ, ಧ್ಯಾನದ ಬಗ್ಗೆ ಅಲಕ್ಷ್ಯ ಮಾಡಬೇಡಿ”. 474

2. “ಏಕಾಕಿಯಾಗಿ ಓಡಾಡುವ ಏಕಾಕಿಯಾಗಿ ಮಲಗುವ, ತನ್ನನ್ನು ತಾನೇ ಧಮಿಸಿಕೊಳ್ಳುವ, ಏಕಾಕಿಯು ವನವಾಸದಿಂದ ಆನಂದಗೊಳ್ಳುತ್ತಾನೆ”. 475

3. “ಧಮ್ಮವನ್ನು ಕೇಳಿ ಅದರ ಅರ್ಥವನ್ನು ತಿಳಿದು ಆನಂದ ಪಡೆದ ಏಕಾಂಗಿಯು ಸುಖವಾಗಿರುತ್ತಾನೆ. ಪ್ರಾಣಿಗಳ ಬಗೆಗೆ ಸಂಯಮದಿಂದಿದ್ದು, ವೈರರಹಿತನಾಗಿ, ರಾಗರಹಿತನಾಗಿ ಯಾರು ‘ತಾನು ತನ್ನದು’ ಎಂಬ ಭಾವನೆಯನ್ನು ತೊರೆದಿರುವನೋ ಅವನೇ ಪರಮ ಸುಖಿಯಾಗುತ್ತಾನೆ”. 476

4. “ಬುದ್ಧ ಭಗವಾನರ ಆ ಸತ್ಯವನ್ನು ಆಲಿಸು. ಗುಂಪಿನಲ್ಲಿರುವವನಿಗೆ ಪೂರ್ಣ ವಿಮುಕ್ತಿ ಅಸಂಭವ, ಅದನ್ನು ಅರಿತು ಖಡ್ಗ ಮೃಗದ ರೀತಿ ಏಕಾಂಗಿಯಾಗಿ ಸಂಚರಿಸು”. 477

## ೧೫. ದೇವರು

1. “ಯಾರಿಗೆ ಕಣ್ಣಿದೆಯೋ ಆತ ರೋಗಭರಿತ ದೃಶ್ಯಗಳನ್ನು ಕಾಣುತ್ತಾನೆ. ಏಕೆ ಸೃಷ್ಟಿಕರ್ತ ತನ್ನ ಜೀವಿಗಳನ್ನು ಸರಿಯಾಗಿ ಇಟ್ಟಿಲ್ಲ? ಆತನ ಶಕ್ತಿ ಮಿತಿಯಿಲ್ಲದ ಸರ್ವಶಕ್ತಭರಿತವಾಗಿದ್ದೂ ಏಕೆ ಆತನ ಹಸ್ತವು ಹಾರೈಸಲು ಅಪರೂಪವಾಗಿ ಬರುತ್ತದೆ? ಏಕೆ ಆತನು ಸರ್ವರಿಗೂ ಸುಖ ನೀಡಲಾರ? ಏತಕ್ಕಾಗಿ ವಂಚಕರು, ಸುಳ್ಳು ಹೇಳುವವರು ಮತ್ತು ಮೂರ್ಖರು ಉನ್ನತಿಗೇರುತ್ತಾರೆ? ಏಕೆ ಮಿಥ್ಯವೇ ಸದಾ ಜಯಶಾಲಿ ಯಾಗುತ್ತದೆ? ಸತ್ಯ ಮತ್ತು ನ್ಯಾಯ ಏಕೆ ಸೋಲುತ್ತದೆ. ನಾನು ನಿಮ್ಮ ಸೃಷ್ಟಿಕರ್ತನನ್ನು ನ್ಯಾಯರಹಿತರಲ್ಲಿ ಒಬ್ಬರೆಂದು ತೀರ್ಮಾನಿಸುತ್ತೇನೆ. ಏಕೆಂದರೆ ಜಗತ್ತಿನ ತಪ್ಪು ಭಾವಣಿಯ ನಿರ್ಮಾತರಾಗಿದ್ದಾರೆ”. 478

2. “ಒಂದುವೇಳೆ ಸರ್ವಶಕ್ತನಾದ ದೇವರು ಇದ್ದದ್ದೇ ಆದರೆ ಪ್ರತಿ ಜೀವಿಯ ಸುಖಕ್ಕೆ ಅಥವಾ ಶೋಕಕ್ಕೆ ಮತ್ತು ಪುಣ್ಯಕ್ಕೆ ಅಥವಾ ಪಾಪಕ್ಕೆ (ಸೃಷ್ಟಿಕರ್ತನೇ ಮೂಲ ಕಾರಣಕರ್ತನಾಗಿ) ಆ ದೇವರೇ ಪಾಪದ ಕಲೆಯುಳ್ಳವನಾಗುತ್ತಾನೆ. ಮಾನವ ಕೇವಲ ಆತನ ಇಚ್ಛೆಯಂತೆ ವರ್ತಿಸುತ್ತಿದ್ದಾನೆ ಅಷ್ಟೇ”. 479

3. “ಮಿಥ್ಯಾದೃಷ್ಟಿಗಳು ೩ ವಿಧದ್ದಾಗಿದೆ : ಎಲ್ಲವೂ ನಮ್ಮ ಹಿಂದಿನ ಜನ್ಮದ ಪರಿಣಾಮ ಎಂದು ಭಾವಿಸುವುದು. ಪ್ರತಿಯೊಂದು ದೇವರ ಅಥವಾ ವಿಧಿಯ ಕೈವಾಡ ಎಂದು ಭಾವಿಸುವುದು ಮತ್ತು ಪ್ರತಿಯೊಂದಕ್ಕೂ ಕಾರಣವೇ ಇಲ್ಲ ಎಂದು ಭಾವಿಸುವುದು”. 480

## ೧೬. ಅವಲಂಬನೆಯಿಂದ ಉದಯ

1. “ಯಾರು ಕಾರ್ಯಕಾರಣ ಸಂಬಂಧಿ ಉದಯವನ್ನು ಅರಿಯು ತ್ತಾರೋ ಅವರು ಧಮ್ಮವನ್ನು ಅರಿಯುತ್ತಾರೆ ಮತ್ತು ಯಾರು ಧಮ್ಮವನ್ನು ಅರಿಯುತ್ತಾರೊ ಅವರು ಕಾರಣಕಾರ್ಯ ಪರಿಣಾಮ ಗಳ ಆಗುಹೋಗುವಿಕೆಗಳನ್ನೆಲ್ಲಾ ಅರಿತಿರುತ್ತಾರೆ”. 481

2. ಯೋಚನೆಗಳು ಪದಗಳಿಂದ ವ್ಯಕ್ತಪಡಿಸುತ್ತವೆ. ಪದಗಳು ಕ್ರಿಯೆಯನ್ನು ವ್ಯಕ್ತಪಡಿಸುತ್ತವೆ. ಕ್ರಿಯೆಯು ಅಭ್ಯಾಸವಾಗುತ್ತಾ ಹೋಗುತ್ತದೆ. ಅಭ್ಯಾಸವು ವ್ಯಕ್ತಿತ್ವವನ್ನು ನಿರ್ಮಾಣ ಮಾಡುತ್ತದೆ. ಆದ್ದರಿಂದ ನಿಮ್ಮ ಯೋಚನೆಗಳನ್ನು ಗಮನಿಸಿ, ಅವುಗಳ ಹಾದಿಯನ್ನು ಜಾಗರೂಕತೆಯಿಂದ ವೀಕ್ಷಿಸಿ. ಹಾಗು ಸರ್ವಜೀವಿಗಳ ಹಿತಕ್ಕಾಗಿ ಮೈತ್ರಿಯು ಪ್ರಸರಿಸಲಿ”. 482

3. ಪ್ರತಿಯೊಂದು ಉದಯಿಸುವುದು ಹಾಗು ಮರೆಯಾಗುವುದು ಕಾರಣ ಮತ್ತು ಪರಿಸ್ಥಿತಿಗಳಿಂದಾಗಿಯೇ ಆಗಿದೆ. ಯಾವುದೊಂದು ಪೂರ್ಣವಾಗಿ ಏಕೈಕವಾಗಿಯೇ ಅಸ್ತಿತ್ವದಲ್ಲಿ ಸದಾ ಇರಲಾರದು. ಪ್ರತಿಯೊಂದು ಉಳಿದ ಪ್ರತಿಯೊಂದರಲ್ಲಿ ಸಂಬಂಧವನ್ನು ಇರಿಸಿವೆ”. 483

4. “ಈ ಶರೀರ ತನ್ನಿಂದ ತಾನೇ ಆಗಿಲ್ಲ. ಇತರರಿಂದ ದುಃಖ ರೂಪಿತಗೊಂಡಿಲ್ಲ. ಕಾರಣದಿಂದ ಇದು ಆಗಿದೆ. ಕಾರಣವನ್ನು ಮುರಿದರೆ ಇದಿಲ್ಲವಾಗುತ್ತದೆ”. 484

## ೯೭. ಅಶುಭ

1. "ಈ ಶರೀರವು ಜೀರ್ಣವಾಗುವುದು. ರೋಗಗಳ ಗೂಡು ಉದುರಿ ಹೋಗುವ ನಿರ್ಮಿತಿ, ಹೊಲಸು ತುಂಬಿದ ಈ ಮಾಂಸದ ಮುದ್ದೆಯು ಒಡೆದು ಹೋಗುತ್ತದೆ. ಮರಣದಲ್ಲಿ ಇದು ಅಂತ್ಯ ಪಡೆಯುತ್ತದೆ". 485

2. "ಪಾರಿವಾಳದ ಬಣ್ಣದ ಈ ಮೂಳೆಗಳು, ಶರತ್ಕಾಲದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಒಣಗಿದ ಸೋರೆ ಬುರುಡೆಗಳಂತಿದೆ. ಹಾಗೆ ಅವುಗಳನ್ನು ಕಂಡೂ ಹೇಗೆ ಯಾರಾದರೂ ಅವುಗಳಲ್ಲಿ ಆನಂದಪಡೆಯಬಹುದು". 486

3. "ಎಂದು ಆತನು ಸತ್ತು ಹೋಗುವನೋ ಆಗ ಕಟ್ಟಿಗೆಯಂತೆ ಬಿದ್ದಿರುತ್ತಾನೆ. ಕಂದುಬಣ್ಣಕ್ಕೆ ಶರೀರ ತಿರುಗುತ್ತದೆ, ಸ್ಮಶಾಣದಲ್ಲಿ ಆತನನ್ನು ಎಸೆಯುತ್ತಾರೆ. ಹಾಗು ಸೋದರ ಬಂಧುಗಳಿಂದ ಅಪೇಕ್ಷಾರಹಿತನಾಗುತ್ತಾನೆ. 487

4. "ಆತನನ್ನು ನಾಯಿಗಳು, ನರಿಗಳು, ಗೆದ್ದಲು, ಕೀಟಗಳು, ಕಾಗೆಗಳು, ಹದ್ದುಗಳು ಮತ್ತು ಅನ್ಯ ಪ್ರಾಣಿಗಳು ತಿನ್ನುತ್ತವೆ". 488

5. "ಈ ಶರೀರ ಹೇಗಿದೆಯೋ ಆತನೂ ಹಾಗೆಯೇ. ಇದು ಹೇಗಿದೆಯೋ ಹಾಗೆಯೇ ಆತನು ಸಹ. ಆದ್ದರಿಂದ ತನ್ನ ಅಥವಾ ಪರರ ಬಗ್ಗೆ ರಾಗವನ್ನು ತ್ಯಜಿಸಲಿ". 489

6. "ದೇಹವು ನೊರೆಯ ರಾಶಿಯಂತೆ, ವೇದನೆಯು ನೀರ್ಗುಳ್ಳೆಯಂತೆ, ಗ್ರಹಿಕೆಯು ಮರಿಚಿಕೆಯಂತೆ, ಸಂಖಾರವು ಬಾಳೆಗಿಡದಂತೆ. ಅರಿವನ್ನು ಭ್ರಮೆಯಂತೆ ಧ್ಯಾನಿಗಳು ಯತಾಭೂತವಾಗಿ ಅರಿಯುತ್ತಾರೆ". 490

## ೯೮. ಅನಿತ್ಯ

1. "ಎಲ್ಲಾ ಸಂಖಾರಗಳು ಅನಿತ್ಯವೆಂದು ಒಬ್ಬನು ಪ್ರಜ್ಞಾದಿಂದ ಅರಿತಾಗ, ಆತನು ದುಃಖದಿಂದ ವಿಮುಖನಾಗುತ್ತಾನೆ". 491

2. "ಅಹೋ! ಈ ಜೀವನವು ಅತಿ ಅಲ್ಪವಾಗಿದೆ. ನೂರು ವರ್ಷಕ್ಕಿಂತ ಮೊದಲೇ ಮಾನವ ಮೃತ್ಯುವಪ್ಪುತ್ತಾನೆ. ಯಾರು ಇದಕ್ಕಿಂತ ಅಧಿಕವಾಗಿ ಜೀವಿಸುವರೋ ಅವರೂ ಸಹಾ ವೃದ್ಧಾವಸ್ಥೆ ಪ್ರಾಪ್ತಿಮಾಡಿ ಮೃತ್ಯು ಹೊಂದುತ್ತಾರೆ". 492

3. "ಸರ್ವ ಲೋಕವು ಅಸಾರವಾಗಿದೆ. ಸರ್ವ ದಿಕ್ಕುಗಳು ವಿಚಲಿತವಾಗಿದೆ. ಕಲ್ಯಾಣ ಸ್ಥಾನ ಹುಡುಕುತ್ತಾ ನಾನು ಎಲ್ಲಿಯೂ ಆಪತ್ತಿನಿಂದ ಬರಿದಾದುದನ್ನು ಕಾಣಲಿಲ್ಲ". 493

4. "ಜೀವನವು ಭ್ರಮೆಯಾಗಿದೆ. ಸ್ವಪ್ನದಂತೆ, ನೆರಳಿನಂತೆ, ನಿರ್ಗುಳ್ಳೆಯಂತೆ ಇದೆ. ಇಲ್ಲಿ ಯಾವುದು ನಿತ್ಯವಲ್ಲ, ಶಾಶ್ವತವಲ್ಲ, ಯಾವುದು ಕೋಪಕ್ಕೆ ಅರ್ಹವಲ್ಲ, ವಿವಾದಕ್ಕೆ ಅರ್ಹವಲ್ಲ, ಯಾವುದೂ ಇಲ್ಲ". 494

## ೯೯. ಅನಾತ್ಮ

1. "ಈ ದೇಹವು ನಾನಲ್ಲ. ಈ ದೇಹವೇ ನಾನಾಗಿದ್ದರೆ ಶರೀರಕ್ಕೆ ರೋಗವೇ ಬರುತ್ತಿರಲಿಲ್ಲ". 495
2. "ಯಾರು ಇದು 'ನನ್ನದು' ಎಂದು ಎಂದಿಗೂ ಯೋಚಿಸುವುದಿಲ್ಲವೋ ಆತನಿಗೆ 'ಯಾವುದೋ ಕೊರತೆ ಇದೆ' ಎಂದು ಅನಿಸುವುದಿಲ್ಲ. ಹೀಗಾಗಿ ಆತ ಎಂದಿಗೂ ನಷ್ಟದ ಬಗ್ಗೆ ಚಿಂತೆಗೀಡಾಗುವುದಿಲ್ಲ". 496
3. "ಯಾರಿಗೆ ಯಾವುದೇ ವಸ್ತು ವಿಷಯದಲ್ಲಿ 'ಇದು ನನ್ನದು' ಅಥವಾ 'ಇದು ಪರರದು' ಹೀಗೆ ಅನಿಸುವುದಿಲ್ಲವೋ ಅಂತಹದು ಮಮತ್ವದಲ್ಲಿ ಬೀಳದಿರುವವನು 'ನನ್ನದಲ್ಲ' ಎಂದು ಅರಿತು ಶೋಕಿಸುವುದಿಲ್ಲ". 497
4. "ದೇಹವು ಹೀಗಿರಲಿ ಅಥವಾ ಹಾಗಿರಲಿ ಎಂದರೆ ಹಾಗೆ ಆಗುವುದಿಲ್ಲ. ವೇದನೆಗಳು ಹೀಗಿರಲಿ, ಅಥವಾ ಹಾಗಿರಲಿ. ಎಂದರೆ ಹಾಗೆ ಆಗುವುದಿಲ್ಲ. ಗ್ರಹಿಕೆಗಳು ಹೀಗಿರಲಿ, ಅಥವಾ ಹಾಗಿರಲಿ. ಎಂದರೆ ಹಾಗೆ ಆಗುವುದಿಲ್ಲ. ಸಂಖಾರಗಳು ಹೀಗಿರಲಿ, ಅಥವಾ ಹಾಗಿರಲಿ. ಎಂದರೆ ಹಾಗೆ ಆಗುವುದಿಲ್ಲ. ಮನಸ್ಸು ಹೀಗಿರಲಿ, ಅಥವಾ ಹಾಗಿರಲಿ. ಎಂದರೆ ಹಾಗೆ ಆಗುವುದಿಲ್ಲ. ಇವೆಲ್ಲಾ ಅನಿತ್ಯವಾಗಿದೆ. ಯಾವುದು ಅನಿತ್ಯವೋ ಅದು ದುಃಖವಾಗಿದೆ. ಅಂತಹದನ್ನು ಇದು ನಾನು, ಇದು ನನ್ನದು ಅಥವಾ ಇದು ನನ್ನ ಆತ್ಮ ಎಂದು ಪರಿಗಣನೆ ಮಾಡಲಾಗುವುದಿಲ್ಲ". 498
5. "ಅಜ್ಞಾನಿಯು ದೇಹಕ್ಕೆ ಅಥವಾ ವೇದನೆಗೆ ಅಥವಾ ಗ್ರಹಿಕೆಗೆ ಅಥವಾ ಯೋಚನೆಗೆ ಅಥವಾ ಅರಿವಿಗೆ ನಾನು ಎಂದು ಭಾವಿಸುತ್ತಾನೆ. ಅಥವಾ ನಾನು ಎಂಬುದು ಈ ಗುಂಪಿಗೆ ನಾಯಕ ಎಂದು ಭಾವಿಸುತ್ತಾನೆ". 499

## 100. ನಿಬ್ಬಾಣ

1. "ನಿಬ್ಬಾಣಂ ಪರಮ ಸುಖಂ, ನಿಬ್ಬಾಣವು ಪರಮಶ್ರೇಷ್ಠ ಸುಖವಾಗಿದೆ (ಆದರೆ ಇದು ಇಂದ್ರಿಯಗಳ ಅಥವಾ ಮನಸ್ಸಿನ ಸುಖವಲ್ಲ).
2. "ಹುಟ್ಟಿಲ್ಲದ, ಆದಿಯಿಲ್ಲದ, ರಚಿತವಾಗಿಲ್ಲದ ಮತ್ತು ಸ್ಥಿತಿಯಲ್ಲದ ಒಂದು ಸ್ಥಿತಿಯಿರುವುದರಿಂದಲೇ ನಾವು ಹುಟ್ಟಿನಿಂದ, ಆದಿಯಿಂದ ರಚನೆಯಿಂದ ಮತ್ತು ಸ್ಥಿತಿಗಳಿಂದ ಪಾರಾಗಲು ಸಾಧ್ಯವಿದೆ".
3. "ಎಲ್ಲಿ ಪೃಥ್ವಿ, ಜಲ, ಗಾಳಿ, ತೇಜೋಗಳು ಇಲ್ಲವೋ ಆಕಾಶ ನಂಚಾಯತನ, ವಿನ್ಯಾನಂಚಯಾತನ, ಅಕಿಂಚಾಯಾತನ, ನೇವನಸ್ಯಾನಸನ್ಯಾಯಾತನಗಳು ಇಲ್ಲವೋ, ಈ ಲೋಕಗಳು, ಪರಲೋಕಗಳು ಇಲ್ಲವೊ, ಎಲ್ಲಿ ಸೂರ್ಯಚಂದ್ರರಿಲ್ಲವೋ ಅಂಥವ ಒಂದು ಸ್ಥಿತಿಯಿದೆ. ಅಲ್ಲಿ ಹುಟ್ಟು ಇಲ್ಲ. ಅಗತಿಯು ಇಲ್ಲ. ಸ್ಥಿತಿಯು ಇಲ್ಲ, ಚ್ಯುತಿಯು ಇಲ್ಲ. ಯಾವುದು ಅದಕ್ಕೆ ಆಧಾರವಾಗಿಲ್ಲ. ಇದೇ ದುಃಖದ ಅಂತ್ಯ". 502
4. "ಕಾಯವು ಚೂರಾಗಿ, ಸನ್ಯಾವು ಅಳಿಸಿ ಹೋಗಿ, ವೇದನೆಯು ತಂಪಾಗಿ, ಸಂಖಾರವು ಉಪಶಮನ ಹೊಂದಿ, ವಿನ್ಯಾನವು ತನ್ನ ಕೊನೆಯನ್ನು ಮುಟ್ಟುತ್ತದೆ". 503
5. "ಲೋಭದ ನಾಶ, ದ್ವೇಷದ ನಾಶ ಮತ್ತು ಮೋಹದ ನಾಶ – ಮಿತ್ರನೆ ಇದೇ ನಿಬ್ಬಾಣವಾಗಿದೆ". 504